ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಶೋಧನಾ ಪ್ರಬಂಧ

"ಆಧುನಿಕ ಕನ್ನಡ ಕಾವ್ಯ : ಅಲ್ಲಮನ ಅನುಸಂಧಾನದ ವಿಭಿನ್ನ ನೆಲೆಗಳು"

(ಎಂ.ಗೋಪಾಲಕೃಷ್ಣ ಅಡಿಗ, ಎಚ್.ಎಸ್.ಶಿವಪ್ರಕಾಶ್, ಕೆ.ವಿ.ಸುಬ್ರಹ್ಮಣ್ಯನವರ ಕಾವ್ಯಗಳಲ್ಲಿ)

ಲಕ್ಷ್ಮೀಕಾಂತ್.ಎಸ್.ಬಿ

ಸಂಶೋಧನಾ ವಿದ್ಯಾರ್ಥಿ

ನೋಂದಣಿ ಸಂಖ್ಯೆ : KVMBKS - 00438

ಮಾರ್ಗದರ್ಶಕರು

ಪ್ರೊ. ಜಿ.ಬಸವರಾಜು

ಅಧ್ಯಾಪಕರು,

ನ್ಯಾಷನಲ್ ಕಾಲೇಜು, ಬೆಂಗಳೂರು

ಕಾವ್ಯಮಂಡಲ

ನಂ.13/85, ರಾಷ್ಟ್ರೀಯ ವಿದ್ಯಾಲಯ ರಸ್ತೆ,

ಬಸವನಗುಡಿ, ಬೆಂಗಳೂರು – 560004

2010

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಶೋಧನಾ ಪ್ರಬಂಧ

"ಆಧುನಿಕ ಕನ್ನಡ ಕಾವ್ಯ : ಅಲ್ಲಮನ ಅನುಸಂಧಾನದ ವಿಭಿನ್ನ ನೆಲೆಗಳು"

(ಎಂ.ಗೋಪಾಲಕೃಷ್ಣ ಅಡಿಗ, ಎಚ್.ಎಸ್.ಶಿವಪ್ರಕಾಶ್, ಕೆ.ಬಿ.ಸಿದ್ದಯ್ಯನವರ ಕಾವ್ಯಗಳಲ್ಲಿ)

ಲಕ್ಷ್ಮೀಕಾಂತ್.ಎಸ್.ಬಿ

ಸಂಶೋಧನಾ ವಿದ್ಯಾರ್ಥಿ

ನೋಂದಣಿ ಸಂಖ್ಯೆ : KVMBKS – 00438

ಮಾರ್ಗದರ್ಶಕರು

ಪ್ರೊ. ಜಿ.ಬಸವರಾಜು

ಅಧ್ಯಾಪಕರು,

ನ್ಯಾಷನಲ್ ಕಾಲೇಜು, ಬೆಂಗಳೂರು

ಕಾವ್ಯಮಂಡಲ

ನಂ.13/85, ರಾಷ್ಟ್ರೀಯ ವಿದ್ಯಾಲಯ ರಸ್ತೆ,

ಬಸವನಗುಡಿ, ಬೆಂಗಳೂರು – 560004

2010

926

ದೃಢೀಕರಣ ಪತ್ರ

ಲಕ್ಷ್ಮೀಕಾಂತ್.ಎಸ್.ಬಿ ಅವರು ಎಂ.ಫಿಲ್ ಪದವಿಗಾಗಿ ಬರೆದು ಸಿದ್ಧಪಡಿಸಿರುವ "ಆಧುನಿಕ ಕನ್ನಡ ಕಾವ್ಯ : ಅಲ್ಲಮನ ಅನುಸಂಧಾನದ ವಿಭಿನ್ನ ನೆಲೆಗಳು" ಎಂಬ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ವತಿಯಿಂದ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಇದಕ್ಕೂ ಮೊದಲು ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಪ್ರೊ|| ಜಿ. ಬಸವರಾಜು
ಕನ್ನಡ ವಿಭಾಗ,
ನ್ಯಾಷನಲ್ ಪದವಿ ಕಾಲೇಜು,
ಬಸವನಗುಡಿ, ಬೆಂಗಳೂರು - 560 004.

ದಿನಾಂಕ : 24/06/2011

ಸ್ಥಳ : ಬೆಂಗಳೂರು

ಮಾರ್ಗದರ್ಶಕರು

ಪ್ರೊ. ಜಿ.ಬಸವರಾಜು

ಅಧ್ಯಾಪಕರು

ನ್ಯಾಷನಲ್ ಕಾಲೇಜು

ಬಸವನಗುಡಿ, ಬೆಂಗಳೂರು.

ಪ್ರಮಾಣ ಪತ್ರ

"ಆಧುನಿಕ ಕನ್ನಡ ಕಾವ್ಯ : ಅಲ್ಲಮನ ಅನುಸಂಧಾನದ ವಿಭಿನ್ನ ನೆಲೆಗಳು" ಎಂಬ ಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ವತಿಯಿಂದ ಸಲ್ಲಿಸಲು ಪ್ರೊ. ಜಿ.ಬಸವರಾಜುರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಪ್ರಬಂಧದ ವಿಷಯವಾಗಿ ಇದುವರೆಗೂ ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : 24/06/2011

ಸ್ಥಳ : ಬೆಂಗಳೂರು

ಲಕ್ಷ್ಮೀಕಾಂತ್.ಎಸ್.ಬಿ

ಸಂಶೋಧನಾ ವಿದ್ಯಾರ್ಥಿ

“ಆಧುನಿಕ ಕನ್ನಡ ಕಾವ್ಯ : ಅಲ್ಲಮನ ಅನುಸಂಧಾನದ ವಿಭಿನ್ನ ನೆಲೆಗಳು”

(ಎಂ.ಗೋಪಾಲಕೃಷ್ಣ ಅಡಿಗ, ಎಚ್.ಎಸ್.ಶಿವಪ್ರಕಾಶ್,
ಕೆ.ಬಿ.ಸಿದ್ದಯ್ಯನವರ ಕಾವ್ಯಗಳಲ್ಲಿ)

ಪರಿವಿಡಿ

ಅಧ್ಯಾಯ – 1 : ಅಧ್ಯಯನದ ಉದ್ದೇಶ, ವ್ಯಾಪ್ತಿ

ಕನ್ನಡ ಸಾಹಿತ್ಯದಲ್ಲಿ ಇಂಗ್ಲೀಷ್ ಶಿಕ್ಷಣ ಮತ್ತು ಅದರ ಆಂತರಿಕ ಪ್ರೇರಣೆ, ಪ್ರಚೋದನೆಯಿಂದಾಗಿ ಆಧುನಿಕಯುಗವೊಂದು ಪ್ರಾರಂಭವಾಯಿತು. ಇಂಗ್ಲೀಷ್ ಸಾಹಿತ್ಯ ಪ್ರಕಾರ, ಪ್ರಭೇದಗಳಿಗೆ ಕನ್ನಡ ಸಾಹಿತ್ಯ ತನ್ನನ್ನು ತಾನು ತೆರೆದುಕೊಂಡಿತು. ಅದರ ಪ್ರೇರಣೆಯಿಂದ ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಪ್ರಕಾರದ ಸಾಹಿತ್ಯ ಸೃಷ್ಟಿಯಾಯಿತು. ಪಶ್ಚಿಮದ ಅನೇಕ ಅಂಶಗಳು ಕನ್ನಡ ಸಾಹಿತ್ಯದ ಮೇಲೆ ಪ್ರಭಾವ ಬೀರಿ ಶಾಸ್ತ್ರೀಯವಾದ ಅಧ್ಯಯನ ಕ್ರಮವೊಂದು ರೂಪು ಪಡೆಯಿತು.

ಪಶ್ಚಿಮದ ರೋಮ್ಯಾಂಟಿಸಿಸಂ, ಮಾಡ್ರನಿಸಂ, ಮಾರ್ಕ್ಸಿಸಂ ಮುಂತಾದವುಗಳ ಪ್ರೇರಣೆಯಿಂದ ಕನ್ನಡ ಸಾಹಿತ್ಯದಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ, ಸ್ತ್ರೀವಾದಿ ಸಾಹಿತ್ಯಘಟ್ಟಗಳು ಜನ್ಮತಾಳಿದವು. ಇವುಗಳೆಲ್ಲವನ್ನು ನಾವು ಆಧುನಿಕ ಕನ್ನಡ ಸಾಹಿತ್ಯದ ವ್ಯಾಪ್ತಿಯಲ್ಲಿ ಕಾಣಬಹುದಾಗಿದೆ. ಕುವೆಂಪು, ಬೇಂದ್ರೆ, ಗೋಕಾಕ್, ಶಿವರುದ್ರಪ್ಪ, ಚೆನ್ನವೀರಕಣವಿ, ಶಿವಪ್ರಕಾಶ್, ಸಿದ್ಧಲಿಂಗಯ್ಯ, ಚಂದ್ರಶೇಖರ ಕಂಬಾರ, ಪಿ.ಲಂಕೇಶ್, ಕೆ.ಷರೀಫ, ಕೆ.ಬಿ.ಸಿದ್ದಯ್ಯ, ಪ್ರತಿಭಾನಂದಕುಮಾರ್ ಮುಂತಾದವರು ಆಧುನಿಕ ಕನ್ನಡ ಕಾವ್ಯರಚನೆಯಲ್ಲಿ ಪ್ರಾತಿನಿಧಿಕ ಕವಿಗಳಾಗಿದ್ದಾರೆ. ಇವರಲ್ಲಿ ನನ್ನ ಅಧ್ಯಯನದ ವ್ಯಾಪ್ತಿಗೆ ಸೀಮಿತವಾಗಿ ಗೋಪಾಲಕೃಷ್ಣ ಅಡಿಗ, ಎಚ್.ಎಸ್.ಶಿವಪ್ರಕಾಶ್ ಮತ್ತು ಕೆ.ಬಿ.ಸಿದ್ದಯ್ಯನವರ ಕಾವ್ಯಗಳನ್ನು ತೆಗೆದುಕೊಂಡು ವಿಶ್ಲೇಷಿಸಲು ಪ್ರಯತ್ನಿಸಿದ್ದೇನೆ.

ಹನ್ನೆರಡನೆಯ ಶತಮಾನದಲ್ಲಿ ಕನ್ನಡ ನಾಡಿನೊಳಗೆ ನಡೆದ ಶರಣರ ಕ್ರಾಂತಿ ನಿಂತನೀರಾಗಿದ್ದ ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ಬದುಕಿಗೆ ಒಂದು ಚಲನೆಯನ್ನು ತಂದುಕೊಟ್ಟು ಜೀವನದ ಹೊಸ ಮೌಲ್ಯಗಳನ್ನು ಕಂಡುಕೊಳ್ಳಲು ಯತ್ನಿಸಿದ ಆಂದೋಲನವಾಗಿದೆ. ಜೇಡರದಾಸಿಮಯ್ಯ, ಅಲ್ಲಮಪ್ರಭು, ಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ, ಚೆನ್ನಬಸವಣ್ಣ, ಆಯ್ದಕ್ಕಿ ಲಕ್ಕಮ್ಮ, ಆಯ್ದಕ್ಕಿ ಮಾರಯ್ಯ, ಸೂಳೆ ಸಂಕವ್ವೆ, ಮರುಳ ಶಂಕರದೇವ, ಡೋಹರಕಕ್ಕಯ್ಯ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಉರಿಲಿಂಗಪೆದ್ದಿ, ಘಟ್ಟಿವಾಳಯ್ಯ ಮುಂತಾದ ಹಲವಾರು ಶಿವಶರಣರು, ಶಿವಶರಣೆಯರು ವಚನಗಳ ಮೂಲಕ ಸಮತೆ, ಸ್ವಾತಂತ್ರ್ಯ, ವಿಶ್ವಬಂಧುತ್ವವನ್ನು ಸಮಾಜದಲ್ಲಿ ಸ್ಥಾಪಿಸಲು ಯತ್ನಿಸಿದರು.

ಹಿಂದಿನ ಸಾಂಪ್ರದಾಯಿಕ ಆಲೋಚನೆಗಳನ್ನು ಒಡೆದು ಹಾಕಿ ಮಾನವ ಕೇಂದ್ರಿತ ಆಲೋಚನೆಗೆ ದಾರಿ ಮಾಡಿಕೊಟ್ಟ ಲಿಂಗತಾರತಮ್ಯತೆ, ಶ್ರೇಷ್ಠಾಧಾಮ ಎಂಬ ಅಮಾನವೀಯ ನೆಲೆಯನ್ನು ಒಡೆದು ಸಮಾನತೆಯ ಸಮಾಜ ನಿರ್ಮಾಣದ ಆಶೋತ್ತರವನ್ನು ಹೊಂದಿದ ಈ ಶರಣರ ವಿಚಾರಕ್ರಾಂತಿ ಭಾರತೀಯ ಇತಿಹಾಸದಲ್ಲಿ ಒಂದು ಮೈಲಿಗಲ್ಲು.

ವಚನಕಾರರು ತಮ್ಮ ವಚನಗಳಲ್ಲಿ ಜಾತಿ-ಮತಗಳ ಸಂಕೋಲೆಯನ್ನು ತೊಡೆದು ಹಾಕಿ ವಿಶಾಲವಾದ ಮಾನವಧರ್ಮವನ್ನು ಸ್ಥಾಪಿಸಲು ಪ್ರಯತ್ನಿಸಿದರು. ಇವರ ವಚನಗಳಲ್ಲಿನ ವಿಚಾರಗಳ ಫಲವಾಗಿ ದಲಿತರು, ಶೋಷಿತರು, ಸ್ತ್ರೀಯರು ವಿವಿಧ ವೃತ್ತಿಕಾರರು ಮೊದಲಾದವರಿಗೆ ಸಮಾನತೆ ಸಿಗಲು ಸಹಾಯಕವಾಯಿತು. ಹಾಗೆಯೇ ಸಮಾಜದ ಜನರಲ್ಲಿ ಆತ್ಮಗೌರವವನ್ನು ತಂದುಕೊಡುವುದರೊಂದಿಗೆ ಪ್ರಮುಖವಾಗಿ ಕಾಯಕತತ್ವವನ್ನು ಪ್ರತಿಪಾದಿಸಿದ ಇವರು ಎಲ್ಲರನ್ನೂ ಸ್ವಾಭಿಮಾನಿಗಳಾಗುವಂತೆ ಮಾಡಿದರು ಮತ್ತು ವೃತ್ತಿ ಗೌರವದೊಂದಿಗೆ ಆತ್ಮ ಗೌರವವನ್ನೂ ಎತ್ತಿಹಿಡಿದರು.

ಹನ್ನೆರಡನೆಯ ಶತಮಾನದ ಕಲ್ಯಾಣದ ಕ್ರಾಂತಿಗೆ ಕಾರಣರಾದ ಶಿವಶರಣರಲ್ಲಿ ಅಲ್ಲಮಪ್ರಭು ಮಹತ್ವದ ಸ್ಥಾನವನ್ನು ಪಡೆದಿದ್ದಾನೆ. ಶೂನ್ಯ ಸಿಂಹಾಸನದ ಅಧ್ಯಕ್ಷನಾಗಿ ತನ್ನ ಚಿಂತನೆಗಳನ್ನು ಹಲವರಲ್ಲಿ ಭಿತ್ತಿ, ಅವರಿಗೆ ಮಾರ್ಗದರ್ಶಕನಾಗಿ ಕೆಲಸ ನಿರ್ವಹಿಸಿದ್ದಾನೆ. ಅವನ ವಚನಗಳಲ್ಲಿ ಕಾಣಸಿಗುವ ಅಪಾರ ತಾತ್ವಿಕ ಚಿಂತನೆ ಹಾಗೂ ವಿಶಾಲ ಪಂಥವನ್ನು ಬೇರೆ ವಚನಕಾರರಲ್ಲಿ ನಾವು ಕಾಣಲಾರೆವು. ಆದ್ದರಿಂದ ಅವನನ್ನು ಆಧ್ಯಾತ್ಮ ಚಿಂತನೆಯ ಮೇರು ಶಿಖರವೆನ್ನಬಹುದು.

ಅಲ್ಲಮನ ಆಲೋಚನೆಯೆಲ್ಲ ಮೂಲಭೂತವಾದ ಸುಧಾರಣೆಯತ್ತ ಕೇಂದ್ರೀಕೃತವಾಗಿತ್ತು. "ವೀರಶೈವದ ಪರಿಭಾಷೆಯನ್ನೇ ಬಳಸಿಕೊಂಡು ವೀರಶೈವದ ಮತೀಯತೆಯನ್ನು ಕೊಚ್ಚಿ ಸವರುವ ಸ್ತುತ್ಯಕಾರ್ಯದಲ್ಲಿ ಅಲ್ಲಮನಷ್ಟು ಆವೇಶದಿಂದಲೂ, ಅಭಿನಿವೇಶದಿಂದಲೂ ಬಸವಣ್ಣನೂ ಶ್ರಮಿಸಲಾಗಲಿಲ್ಲವೆಂದರೆ ಚಕಿತರಾಗಬೇಕಾಗಿಲ್ಲ".[1] ಇಂತಹ ಅಲ್ಲಮನ ಚಿಂತನೆಗಳು ಆಧುನಿಕ ಕನ್ನಡ ಕಾವ್ಯದಲ್ಲಿ ಹೇಗೆ ವ್ಯಕ್ತವಾಗಿದೆ ಮತ್ತು "ಆಧುನಿಕ-ಪೂರ್ವ ಕನ್ನಡ ಸಾಹಿತ್ಯದ ಪ್ರಮುಖ ಆಶಯಗಳು ಮತ್ತು ಅಲ್ಲಮಲೋಕದ ನಡುವೆ ಉದ್ದಕ್ಕೂ ಒಂದು ರೀತಿಯ ಅನುಸಂಧಾನವಿದೆ. ಒಂದಲ್ಲ ಒಂದು ರೀತಿಯಲ್ಲಿ ಅವು ಪರಸ್ಪರ ಮಾತನಾಡುತ್ತವೆ, ಕೆಣಕುತ್ತವೆ"[2] ಎಂಬ ಮಾತನ್ನು ಆಧರಿಸಿ ನೋಡುವುದೇ ಈ ಕಿರು ಪ್ರಬಂಧದ ಉದ್ದೇಶವಾಗಿದೆ.

ಇಪ್ಪತ್ತನೆಯ ಶತಮಾನದಿಂದೀಚೆಗೆ ಬುದ್ಧ, ಬಸವ, ಅಲ್ಲಮ ಮತ್ತೆ ಮತ್ತೆ ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಪುನರಾವರ್ತನೆಗೊಳ್ಳುತ್ತಿದ್ದಾರೆ. ಸಾಂಪ್ರದಾಯಿಕ ಅಂಧಃಶ್ರದ್ಧೆಗಳು, ಮೂಢನಂಬಿಕೆ, ಜಾತಿ ಪದ್ಧತಿ, ಭಯೋತ್ಪಾದನೆ, ಅಸ್ಪೃಶ್ಯತೆ ಮುಂತಾದವುಗಳನ್ನೆಲ್ಲಾ ತುಂಬಿಕೊಂಡು ಭಾರತದಂತಹ 'ಕೆಸರೂರ'ನ್ನು ಈ ಎಲ್ಲಾ ಭವ ಬಂಧನಗಳಿಂದ ಮುಕ್ತಗೊಳಿಸಿ ಸ್ವಚ್ಛ ನಾಡನ್ನಾಗಿ ಮಾಡುವಲ್ಲಿ ಬುದ್ಧನ ತತ್ವಗಳು, ಅಲ್ಲಮ-ಬಸವಣ್ಣನವರ ಚಿಂತನೆಗಳು ಪ್ರೇರಕ ಶಕ್ತಿಯಾಗಿವೆ.

ಭ್ರಷ್ಟಾಚಾರ, ಲಂಚಗುಳಿತನ, ಶೋಷಣೆ, ಮೋಸ, ಸುಳ್ಳು, ವಂಚನೆ, ಡೋಂಗಿತನ, ಅಧಿಕಾರ ದರ್ಪ, ಹಿಂಸಾಪ್ರವೃತ್ತಿ, ಸರ್ವಾಧಿಕಾರಿ ಧೋರಣೆ ಮುಂತಾದ ಅಪಮೌಲ್ಯಗಳಿಂದ ತುಂಬಿ ತುಳುಕುತ್ತಿರುವ ಸಮಕಾಲೀನ ರಾಜಕೀಯ ಮತ್ತು ಸಾಮಾಜಿಕ ಸಂದರ್ಭದಲ್ಲಿ ಅಲ್ಲಮನಂತಹ ನಿಷ್ಠುರ ವಿಚಾರವಾದಿಯ ಚಿಂತನೆಗಳ ಓದು, ಅಧ್ಯಯನ, ಸಂಶೋಧನೆ ಮತ್ತು ಅವನ ತಾತ್ವಿಕ ಚಿಂತನೆಗಳು ಪ್ರಸಾರಗೊಳ್ಳಬೇಕಾದುದು ಸಮಾಜದ ಆರೋಗ್ಯಕರ ಬೆಳವಣಿಗೆಗೆ ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯವು ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಪ್ರಯತ್ನಿಸಿದೆ. ಆದರೆ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಅಲ್ಲಮನ ಕುರಿತಾದ ಸಂಶೋಧನೆಗಳು ನಡೆದಿರುವುದು ಬೆರಳೆಣಿಕೆಯಷ್ಟು ಮಾತ್ರ, ಅದರಲ್ಲೂ ಎಂ.ಫಿಲ್‌ಗಾಗಿ ನಡೆದ ಸಂಶೋಧನೆಗಳು ತೀರಾ ವಿರಳ. ಸಮಕಾಲೀನ ಬದುಕಿಗೆ ಹೆಚ್ಚು ಪ್ರಸ್ತುತವೆನಿಸುವ ಹಾಗೂ ಅನೇಕ ಮೌಢ್ಯಗಳನ್ನು ಅಳಿಸಿ ಹಾಕುವಲ್ಲಿ ಅಲ್ಲಮನಂತಹ ವಚನಕಾರರ, ಶಿವಶರಣರ ಅಧ್ಯಯನವು ಸಮಾಜಮುಖಿಯಾದ ಪ್ರತಿಯೊಬ್ಬರಿಗೂ ಮುಖ್ಯವಾಗುತ್ತದೆ. ಹೀಗಾಗಿ ಪ್ರಸ್ತುತ ನನ್ನ ಅಧ್ಯಯನವು ಆಧುನಿಕ ಕನ್ನಡ ಕಾವ್ಯದಲ್ಲಿ ಅಡಗಿರುವ ಅಲ್ಲಮನ ಚಿಂತನೆಗಳನ್ನು ಈ ಆಯ್ದ ಕವಿಗಳ ಮೂಲಕ ಶೋಧಿಸುವ ಕಾರ್ಯವಾಗಿದೆ.

ಗೋಪಾಲಕೃಷ್ಣ ಅಡಿಗ, ಎಚ್.ಎಸ್.ಶಿವಪ್ರಕಾಶ, ಕೆ.ಬಿ.ಸಿದ್ದಯ್ಯನವರು ಅಲ್ಲಮನಿಂದ ಹೆಚ್ಚು ಪ್ರಭಾವಿತರಾಗಿ ತಮ್ಮ ಕಾವ್ಯಗಳಲ್ಲಿ ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಅವನ ಪ್ರಮುಖ ತತ್ವ-ಚಿಂತನೆಗಳನ್ನು, ಪ್ರತಿಮೆ, ರೂಪಕಗಳನ್ನು ಬಳಸಿಕೊಳ್ಳುವ ಮೂಲಕ ಅಭಿವ್ಯಕ್ತಿಯನ್ನು ಕಂಡುಕೊಂಡಿದ್ದಾರೆ. ಪ್ರಸ್ತುತ ಅಧ್ಯಯನವು ಈ ಮೇಲಿನ ಮೂರು ಕವಿಗಳ ಕಾವ್ಯಗಳಲ್ಲಿರುವ ಅಲ್ಲಮನನ್ನು ಸಾಧ್ಯವಾದ ಮಟ್ಟಿಗೆ ಅನಾವರಣಗೊಳಿಸುವ ಪ್ರಯತ್ನವಾಗಿದೆ.

ಇದೇ ಸಂದರ್ಭದಲ್ಲಿ ನನ್ನ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಮುಖ್ಯವಿಚಾರವೊಂದನ್ನು ಹೇಳಬೇಕಾದ ಅನಿವಾರ್ಯತೆಯೂ ಇದೆ. ಪ್ರಸ್ತುತ ಪ್ರಬಂಧದ ವ್ಯಾಪ್ತಿ ದೊಡ್ಡದಾದರೂ ಕೂಡ ಕಿರು ಪ್ರಬಂಧದ ಸೀಮಿತ ಚೌಕಟ್ಟಿಗೆ ಒಗ್ಗಿಸಬೇಕಾದ ಅನಿವಾರ್ಯತೆ ಇರುವುದರಿಂದ ಆಧುನಿಕ ಕನ್ನಡ ಕಾವ್ಯದ ಇನ್ನೂ ಹಲವಾರು ಪ್ರಮುಖ ಕವಿಗಳಿಗೆ ಆಗಿರುವ ಅಲ್ಲಮನ ಪ್ರಭಾವ, ಪ್ರೇರಣೆಯನ್ನು ಇಲ್ಲಿ ವಿವರಿಸಲು ಸಾಧ್ಯವಾಗಿಲ್ಲ. ಇತ್ತೀಚಿನ ಯುವ ಕವಿಗಳನ್ನೂ ಕೂಡ ಇಲ್ಲಿ ಪರಿಚಯಿಸಲೂ ಸಾಧ್ಯವಾಗಿಲ್ಲ. ಒಂದು ರೀತಿಯಲ್ಲಿ ಅಲ್ಲಮ ಇಡೀ ಆಧುನಿಕ ಕನ್ನಡಕಾವ್ಯದ ಬಹುತೇಕ ಎಲ್ಲಾ ಕವಿಗಳ ಮೇಲೂ ಒಂದಲ್ಲಾ ಒಂದು ರೀತಿಯಲ್ಲಿ ಪ್ರಭಾವಿಸಿದ್ದಾನೆ. ಈ ಎಲ್ಲಾ ಕವಿಗಳು ಒಂದಲ್ಲಾ ಒಂದು ರೀತಿಯಲ್ಲಿ ಅಲ್ಲಮನನ್ನು ಅನುಸಂಧಾನಿಸಿದ್ದಾರೆ. ಹಾಗಾಗಿ ಅಡಿಗ, ಶಿವಪ್ರಕಾಶ್, ಕೆ.ಬಿ.ಸಿದ್ದಯ್ಯನವರ ಕಾವ್ಯಗಳನ್ನು ಪ್ರಬಂಧದ ಅಧ್ಯಯನಕ್ಕೆ ಒಳಪಡಿಸಿದ್ದೇನೆ. ಇದು ನನ್ನ ಪ್ರಬಂಧದ ಸೀಮಿತವ್ಯಾಪ್ತಿಗೆ ಅನುಗುಣವಾಗಿ ಮಿತಿಯೂ ಆಗಿ ಪರಿಣಮಿಸಿದೆ. ಈ ಮೂರೂ ಕವಿಗಳ ಸಮಗ್ರ ಕಾವ್ಯಗಳನ್ನು ತೆಗೆದುಕೊಂಡಾಗಲೂ ಸೀಮಿತ ವ್ಯಾಪ್ತಿಯನ್ನು ಮೀರಿಬಿಡುವ ಸಂಭವವಿರುವುದರಿಂದ ಈ ಕವಿಗಳ ಆಯ್ದ ಕವನಗಳನ್ನು ಅದರಲ್ಲೂ ವಿಮರ್ಶಕರಿಂದ ಸ್ವಲ್ಪದೂರದಲ್ಲಿದ್ದ ಕವನಗಳನ್ನು ನನ್ನ ಈ ಅಧ್ಯಯನಕ್ಕೆ ಒಳಪಡಿಸಿದ್ದೇನೆ. ಹಾಗೆಂದ ಮಾತ್ರಕ್ಕೆ ಉಳಿದ ಕವನಗಳು ಅಲ್ಲಮನ ಅನುಸಂಧಾನದಿಂದ ಹೊರತಾಗಿವೆ ಎಂದು ಭಾವಿಸುವಂತಿಲ್ಲ. ಅಲ್ಲಮನ ಗಾಢ ಪ್ರಭಾವವನ್ನು ಉಳಿದ ಕವನಗಳಲ್ಲೂ ಕಾಣಬಹುದಾಗಿದೆ. ಆಧುನಿಕ ಕನ್ನಡ ಕಾವ್ಯವೆಂಬ ದೇಹದಲ್ಲಿ ಅಲ್ಲಮ ರಕ್ತ ಪರಿಚಲನೆಯಾಗಿ ತನ್ನ ಮಹತ್ತನ್ನು ವಿಸ್ತರಿಸಿಕೊಂಡಿದ್ದಾನೆ. ಆ ನಿಟ್ಟಿನಲ್ಲಿ ಈ ಅಧ್ಯಯನ ಹಿರಿದಾಗಿ ಸಾಧ್ಯವಾಗಿಲ್ಲದಿದ್ದರೂ ಕಿರಿದಾದ ವಿಶ್ಲೇಷಣೆಯನ್ನು ಸಾಧ್ಯಗೊಳಿಸಲು ಪ್ರಯತ್ನಿಸಿದೆ.

1(ಎ) ಅಲ್ಲಮಪ್ರಭುವಿನ ಜೀವನದ ಚರ್ಚೆಯ ವಿಚಾರಗಳು

'ಅಲ್ಲಮ' ಎಂಬ ಹೆಸರಿನ ಬಗೆಗೆ ವಿಫುಲವಾದ ಊಹೆ, ಚರ್ಚೆ, ಸಂಶೋಧನೆಗಳು ನಡೆದಿವೆ. ಅಲ್ಲಮ, ಅಲ್ಲಮ ಪ್ರಭುದೇವ, ಅಲ್ಲಮದೇವ, ಪ್ರಭುದೇವ, ಅಲ್ಲಯ್ಯ, ಅಲ್ಲಮಯ್ಯ, ಪ್ರಭುದೇವ ಅಲ್ಲಮ – ಹೀಗೆ ಈ ಶಬ್ದ ಬಗೆಬಗೆಯಾಗಿ ಬಳಕೆಯಾಗಿದೆ.

"ಅಲ್ಲಮ ಕನ್ನಡ ಶಬ್ದವಲ್ಲ, ಅದು ಖುರಾನಿನ ಆಲಮ್(ಅಲ್ಲ) ಆಗಿರಬೇಕು. ಅದು ಕನ್ನಡ ಪದವಾದರೆ 'ಮ'ಕ್ಕೆ ವಿವರಣೆ ನೀಡುವುದು ಕಷ್ಟ" ಎಂದು ಶ್ರೀ ಸಿ.ಪಿ.ಬ್ರೌನ್‌ರವರು ತಮ್ಮ ತೆಲುಗು-ಇಂಗ್ಲೀಷ್ ಶಬ್ದಕೋಶದಲ್ಲಿ ಊಹಿಸಿದ್ದಾರೆ.

"ಅಲ್ಲಮ" ಎಂಬುದು ಅಮ್ಮ, ಅಬ್ಬೆಯಂತೆ ದ್ರಾವಿಡ ಭಾಷೆಯ ಪದವಾಗಿ ತೋರುತ್ತದೆ. ಇಲ್ಲಿಯೂ "ಅಲ್ಲಮ" ಶಬ್ದದಲ್ಲಿರುವ ಮೂಲ ಧಾತು 'ಅಲ್ಲ'. ಈ 'ಅಲ್ಲ'ಕ್ಕೆ ವಿವರಣೆ ದೊರೆಯುತ್ತಿಲ್ಲ. ಆಲ್-ಪಾಲ್‌ಗಳಲ್ಲಿರುವಂತೆ "ಅಲ್" ಎಂದರೆ ರಸ ಆದ್ದರಿಂದ ರಸಸ್ವರೂಪನಾದ 'ಶಿವ', ತನ್ಮೂಲಕ ಮಧು-ಮಧೂಕನಾಥ-ಮಧುಕೇಶ್ವರ-ಆತನಿಗೂ "ಅಲ್ಲಮ"ನಿಗೂ ಸಂಬಂಧವಿದೆ ಎಂದೂ, "ಅಲ್ಲ" ಎಂದರೆ ರುದ್ರ, ಶಿವ, ಆಲವಣ ಅಲ, ಹಾಲು ಹನಿವಗಿಡ=ವಟವೃಕ್ಷ.............ಅಲ್ಲ, ಆಲ ಎಂಬ ಶಿವವಾಚಕ ವ್ಯಕ್ತಿನಾಮದಲ್ಲಿ ರಸವಾಚಕ ಅರ್ಥ ಹುದುಗಿಕೊಂಡಿದೆ"[3] ಎಂದು ಶಂ.ಭಾ.ಜೋಶಿಯವರು ಊಹೆ ಮಾಡಿದ್ದಾರೆ.

'ಅಲ್'ದಿಂದ ಮೂಡಿದ ಶಬ್ದಗಳು ಶಿವ, ದೇವತೆ, ಮಾತೃ.................ಮುಂತಾದ ಅರ್ಥ ನೀಡುತ್ತಿವೆ. ಆದರೂ "ಅಲ್ಲ ಎಂಬ ಪದದ ನಿಷ್ಪತ್ತಿ ಇಂದಿಗೂ ದೊಡ್ಡ ಸಮಸ್ಯೆ" ಎಂದಿದ್ದಾರೆ ಚಿದಾನಂದಮೂರ್ತಿಯವರು. "ಅಲ್ಲಮನೆಂಬುದು ಕನ್ನಡವಲ್ಲ, ಅರಬ್ಬಿಯಲ್ಲ, ಸಂಸ್ಕೃತವಿರಲಿ, ಇರದಿರಲಿ, ಯೋಗ ಮತಾಚಾರಿಗಳಾದ ಶೈವ ಪರಂಪರೆಯೊಳಗಿನದು ಅದೊಂದು ಹೆಸರು. ಇಷ್ಟು ನಿಜ" ಎಂದು ಪ್ರಬುದ್ಧ ಕರ್ನಾಟಕ(16-4)ದ ಲೇಖನವೊಂದರಲ್ಲಿ(ಪುಟ 94) ದ.ರಾ.ಬೇಂದ್ರೆಯವರು ಅಭಿಪ್ರಾಯಪಟ್ಟಿದ್ದಾರೆ.

ಹರಿಹರನ ಬಸವರಾಜದೇವರ ರಗಳೆಯಲ್ಲಿ "ಅಲ್ಲಮ, ಅಲ್ಲಮಯ್ಯ, ಅಲ್ಲಮದೇವ", ಪ್ರಭುದೇವರ ರಗಳೆಯಲ್ಲಿ "ಅಲ್ಲಮ, ಅಲ್ಲಮದೇವ" – ಎಂಬ ಪ್ರಯೋಗಗಳೇ ಹೆಚ್ಚು; 'ಅಲ್ಲಮಯ್ಯ, ಅಲ್ಲಯ್ಯ' ಎಂದು ಒಂದೆರಡು ಬಾರಿ ಮಾತ್ರ ಬಂದಿದೆ. ಸಿದ್ಧರಾಮ ಚಾರಿತ್ರ್ಯ, ಬಸವಪುರಾಣಗಳಲ್ಲಿ 'ಅಲ್ಲಮ, ಅಲ್ಲಮಪ್ರಭು' ಎಂಬ ಪ್ರಯೋಗಗಳೇ ವಿಶೇಷ; ಪ್ರಭುಲಿಂಗಲೀಲೆಯಲ್ಲಿ ಅಲ್ಲಮ, ಅಲ್ಲಮಪ್ರಭು, ಪ್ರಭು ಮುಂತಾದ ಪ್ರಯೋಗಗಳು ಅಸಂಖ್ಯವೆಂದು ತೌಲನಿಕ ಕೋಷ್ಟಕವನ್ನೇ ನೀಡಿದ ಕಪಟರಾಳ ಕೃಷ್ಣರಾಯರು "ಅಲ್ಲಮ ಶಬ್ದವೇ ಮೂಲವಾಗಿಟ್ಟುಕೊಂಡು, ಅಲ್ಲಮದೇವ, ಅಲ್ಲಮಪ್ರಭು, ಅಲ್ಲಮಯ್ಯ, ಪ್ರಭು ಮುಂತಾದ ಅನಂತರದ ಪ್ರಯೋಗಗಳು ರೂಢಿಯಲ್ಲಿ ಬಂದಿವೆ." ಎಂದು ತಮ್ಮ ಕರ್ನಾಟಕ ಸಂಸ್ಕೃತಿ ಸಂಶೋಧನೆ ಕೃತಿಯಲ್ಲಿ ಹೇಳಿದ್ದಾರೆ.(ಪುಟ 132)

ಹನ್ನೆರಡನೇ ಶತಮಾನದಲ್ಲಿ ಅಂಗೈ ಅಗಲದಷ್ಟು ಸಿಗುವ ಅಲ್ಲಮನ ಚರಿತ್ರೆಯ ಅಂಶಗಳು ಇಂದಿಗೂ ನಿಖರವಾಗಿ ತಿಳಿದುಬಂದಿಲ್ಲ. ಅವನು ಹುಟ್ಟಿದ ಊರು, ಸಂಚರಿಸಿದ ಸ್ಥಳ, ಸಂದರ್ಶಿಸಿದ ವ್ಯಕ್ತಿಗಳು ಇತ್ಯಾದಿ ವಿಷಯಗಳು ಇನ್ನು ನಿಖರವಾಗಿ ತಿಳಿಯದೆ ಚರ್ಚೆಯ

ವಿಷಯವಾಗಿ ಸಂಗತಿಗಳು ಇಂದು ಅಲ್ಲಮನ ಜೀವನ ಚರಿತ್ರೆಯನ್ನು ತಿಳಿಯಲು ಸಹಾಯಕವಾಗಿವೆ.

ಪ್ರಭುದೇವನ ಜನ್ಮಗ್ರಾಮ ಬಳ್ಳಿಗಾವೆಯೆಂದು ಹರಿಹರ, ಬನವಾಸಿಯೆಂದು ಪ್ರಸಾದಿ ಮಹಾದೇವಯ್ಯ, ಕರವೂರೆಂದು ಘಟ್ಟಿವಾಳಯ್ಯ ಹೇಳುತ್ತಾರೆ. ಬಳ್ಳಿಗಾವೆ ಜನ್ಮಗ್ರಾಮ, ಮಾಯಾದೇವಿಯೆಂಬ ಕನ್ಯೆಯ ಸಂಪರ್ಕ ಬಂದುದು ಬನವಾಸಿಯಲ್ಲೆಂದು ಚಾಮರಸ ಹೇಳಿದರೆ; ಬಳ್ಳಿಗಾವೆ ಜನ್ಮಗ್ರಾಮ, ಕರವೂರು ಪುತ್ರಕಾಮ್ಯಕ್ಕಾಗಿ ತಂದೆ ತಪಸ್ಸು ಮಾಡಿದ ಸ್ಥಳ, ಬನವಾಸಿ ಕನ್ಯೆಯ ಸಂಪರ್ಕ ಬಂದ ಗ್ರಾಮವೆಂದು ಎಳಂದೂರು ಹರೀಶ್ವರ ಹೇಳುತ್ತಾರೆ. ಜನ್ಮಗ್ರಾಮ ಕರವೂರು, ಕನ್ಯೆಯ ಸಂಪರ್ಕ ಬಂದುದು ಬನವಾಸಿಯೆಂದು ರಾಚಪ್ಪಯ್ಯ, ರಾಚವಟ್ಟೀಶ ಹೇಳುತ್ತಾರೆ. ಈ ಎಲ್ಲಾ ಹೇಳಿಕೆಗಳಿಂದ ಡಾ.ಎಂ.ಎಂ.ಕಲ್ಬುರ್ಗಿಯವರು ಅಲ್ಲಮನ ಜನ್ಮಗ್ರಾಮ ಬಹುಶಃ ಕರುವೂರು ಆಗಿರಬಹುದು. ಹೆಣ್ಣಿನ ಮೋಹ, ವೈರಾಗ್ಯ ಮುಂತಾದ ಘಟನೆಗಳು ಬನವಾಸಿಯಲ್ಲಿ ಜರುಗಿರಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಆದರೆ ಡಾ.ಚಿದಾನಂದಮೂರ್ತಿಯವರು ಅಲ್ಲಮ ಹುಟ್ಟಿದ ತೇದಿಯಾಗಲೀ, ಐಕ್ಯನಾದ ತೇದಿಯಾಗಲೀ ನಮಗೆ ತಿಳಿದಿಲ್ಲ. ಅವನು ಹನ್ನೆರಡನೇಯ ಶತಮಾನದ ಪೂರ್ವಾರ್ಧದಲ್ಲಿ ಹುಟ್ಟಿ ಅದೇ ಶತಮಾನದ ಉತ್ತರಾರ್ಧದಲ್ಲಿ ಐಕ್ಯನಾದನೆಂಬ ಬಗ್ಗೆ ಅನುಮಾನವಿಲ್ಲ. ಅವನ ಜನ್ಮಸ್ಥಳ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವೆ. ಇದು ಕಾಲಚೂರಿ ದೊರೆಗಳ ದಕ್ಷಿಣದ ಪ್ರಬಲ ರಾಜಕೀಯ ಕೇಂದ್ರವಾಗಿದ್ದಿತು. ಈ ಪಟ್ಟಣದಲ್ಲಿದ್ದ ಗೊಗ್ಗೇಶ್ವರ ಎಂಬ ದೇವಾಲಯದ 'ನಾಗವಾಸ'ಕ್ಕೆ ಅಲ್ಲಮನ ತಂದೆ ಮುಖ್ಯಸ್ಥನಾಗಿದ್ದ. ಅಲ್ಲಮ ಒಂದು ದಿನ ಆ ದೇವಾಲಯದಲ್ಲಿ ಮೃದಂಗವಾದನ ಮಾಡುತ್ತಿದ್ದಾಗ ಅಲ್ಲಿಗೆ ಧನದತ್ತನ ಮಗಳು ಕಾಮಲತೆಯೆಂಬುವಳು ಬಂದಳು. ಇಬ್ಬರಿಗೂ ಪ್ರೇಮಾಂಕುರವಾಗಿ ಗೃಹಸ್ಥರಾಗಿ ಇರುವಾಗ ಕಾಮಲತೆ ಅಕಾಲಿಕ ಮರಣಕ್ಕೆ ತುತ್ತಾದಳು. ನಂತರ ಅಲ್ಲಮ ವೈರಾಗ್ಯಕ್ಕೆ ತುತ್ತಾಗಿ ನಿರಾಸೆಯಿಂದ ಊರಿನ ಹೊರಗೆ ಹೋಗಿ ಅನಿಮಿಷನೆಂಬ ಯೋಗಿಯ ದರುಶನವಾಗಿ ಅಲ್ಲಿಂದ ಸಾಧನೆಯ ಹಾದಿ ಹಿಡಿದ ಎಂದು ಅಭಿಪ್ರಾಯ ಪಡುತ್ತಾರೆ.

ಅಲ್ಲಮನ ತಂದೆ ತಾಯಿಗಳ ಹೆಸರೂ ಕೂಡ ಇನ್ನೂ ಸ್ಪಷ್ಟವಾಗಿ ತಿಳಿದಿಲ್ಲ. ಹರಿಹರನು ಈ ಕುರಿತು ಅಲ್ಲಮನ ತಂದೆ ತಾಯಿಗಳು ಶಿವಭಕ್ತ, ಶಿವಭಕ್ತೆ ಎಂದು ಪ್ರಸಾದಿ ಮಹಾದೇವಯ್ಯ "ಬನವಾಸಿಯೆಂಬ ಗ್ರಾಮದೊಳಗೆ ಇಪ್ಪ ನಾಗಾವಾಸಾಧಿಪತಿಯಪ್ಪ ಶಿವಭಕ್ತನ ಸತಿ ಸುಜ್ಞಾನಾದೇವಿಯ ಗರ್ಭದಿಂದೊಗೆದು...........ಅಲ್ಲಮನೆಂಬ ನಾಮ ತಳೆದು...........

ವಾದ್ಯವಿದ್ಯಾಭ್ಯಾಸದಿಂದಿರುತ್ತಮಿರಲಾ ರುದ್ರಕನ್ನಿಕೆ..........ಆ ಪುರದ ಒಬ್ಬ ಶಿವಭಕ್ತೆಯ ಬಸುರೊಳೊಗೆದು ಕಾಮಲತೆಯೆಂಬ ನಾಮಮಂ ಧರಿಸಿ.........ನೃತ್ಯ ವಿದ್ಯಾಭ್ಯಾಸದಿಂದಿರುತ್ತ, ಅಲ್ಲಮಂಗೆ ಸತಿಯಾಗಿ..........ಆ ಪುರದ ಗುಹೇಶ್ವರನೆಂಬ ಮೂಲಸ್ಥಾನದ ಪರಿಚರ್ಯೆದಿಂದಿರ್ವರು ಇರಲ್" ಎನ್ನುವಲ್ಲಿ ತಂದೆಯ ಹೆಸರನ್ನು ಹೇಳದೆ ತಾಯಿಯ ಹೆಸರನ್ನಷ್ಟೆ ಹೇಳಿದ್ದಾನೆ. ರಾಚಪ್ಪಯ್ಯ ತನ್ನ 'ಮಾಯಾ ಸಾಂಗತ್ಯ'ದಲ್ಲಿ ನಿರಹಂಕಾರ, ಸುಜ್ಞಾನಿಯೆಂಬುದನ್ನೇ ಒಪ್ಪಿಕೊಂಡಿದ್ದಾನೆ. ಆದರೂ ಇನ್ನೂ ಈ ವಿಷಯದಲ್ಲಿ ಚರ್ಚೆಗಳು ನಡೆಯುತ್ತಲೇ ಇದ್ದು ಖಚಿತವಾಗಿ ತಿಳಿಯದಾಗಿದೆ.

ಅಲ್ಲಮನಿಗೆ ಪ್ರೇಮಾಂಕುರವಾಗಿದ್ದು ಕಾಮಲತೆಯೊಂದಿಗೋ ಅಥವಾ ಮಾಯಾದೇವಿಯೊಂದಿಗೋ ಎನ್ನುವಲ್ಲಿಯೂ ಚರ್ಚೆಗಳು ನಡೆದಿವೆ. ಇದಕ್ಕೆ ಹರಿಹರ ಮತ್ತು ಚಾಮರಸರ ವಿವಿಧ ಹೇಳಿಕೆಗಳೇ ಕಾರಣವಾಗಿವೆ.

ಹರಿಹರನು ಅಲ್ಲಮನ ಜೀವನದಲ್ಲಿ ಹೆಣ್ಣಿನ ಪ್ರವೇಶವಿದೆ ಎಂದು ತಿಳಿಸಿ ಮೊದಲಿಗೆ ಆಕೆಯ ಹೆಸರನ್ನು 'ಕಾಮಲತೆ' ಎಂದು ಹೇಳಿದರು. ಅವಳ ತಂದೆ 'ಧನದತ್ತ' ಎಂದು ತಿಳಿಸುತ್ತಾನೆ. ಪ್ರಸಾದಿ ಮಹಾದೇವಯ್ಯನೂ ಆಕೆಯ ಹೆಸರನ್ನು ಕಾಮಲತೆ ಎಂದೇ ಕರೆದಿದ್ದಾನೆ. ಅವನು "ಆ ರುದ್ರಕನ್ನಿಕೆ.........ಆ ಪುರದ ಒಬ್ಬ ಶಿವಭಕ್ತೆಯ ಬಸುಱೊಳೊಗೆದು ಕಾಮಲತೆಯೆಂಬ ನಾಮಮಂ ಧರಿಸಿ.........ನೃತ್ಯ ವಿದ್ಯಾಭ್ಯಾಸದಿಂದಿರುತ್ತ ಅಲ್ಲಮಂಗೆ ಸತಿಯಾಗಿ......... ಆ ಪುರದ ಗುಹೇಶ್ವರನೆಂಬ ಮೂಲಸ್ಥಾನದ ಪರಿಚರ್ಯದಿಂದಿರ್ವರುಮಿರಲ್" ಎನ್ನುವಾಗ ಕಾಮಲತೆ ಎಂಬ ಆಕೆಯ ಹೆಸರು ಮತ್ತು ಅವಳು ಅಲ್ಲಮನಿಗೆ ಪರಿಚಯವಾದ ಬಗೆಯನ್ನು ತಿಳಿಸುತ್ತಾನೆ. ಅಲ್ಲಮ ಗುಹೇಶ್ವರ ದೇವಾಲಯದ ವಾದ್ಯಗಾರ. ಕಾಮಲತೆ ಅಲ್ಲಿ ಒಬ್ಬ ನೃತ್ಯಗಾರ್ತಿ. ಇಬ್ಬರಿಗೂ ಪ್ರೇಮಾಂಕುರವಾಗಿ, ಮದುವೆಯಾಗಿ ಜೊತೆಯಲ್ಲಿಯೇ ಇದ್ದರು. ಹೀಗಿರುವಾಗಿ ಕಾಮಲತೆಗೆ ಮಹಾಜ್ವರ ಬಂದು ಮಡಿದು ಹೋದಳು. ಆಗ ಅಲ್ಲಮನಿಗೆ ಇಡೀ ಪ್ರಪಂಚವೇ ಶೂನ್ಯವಾಯಿತು. ನಂತರ ಅನಿಮಿಷನ ದರುಶನವಾಗಿ ಅವನಿಂದ ಶಿವಲಿಂಗ ಪಡೆದು ಆಧ್ಯಾತ್ಮ ಸಾಧನೆಯತ್ತ ನಡೆದ ಎಂದು ಅನೇಕ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಆದರೆ ಪ್ರಭುದೇವ ಹೆಣ್ಣನ್ನು ಪ್ರೀತಿಸಿದ್ದ, ಮದುವೆಯಾಗಿದ್ದ ಎಂಬ ಅಂಶವೇ ಕೆಲವು ವೀರಶೈವರಿಗೆ ಅಪ್ರಿಯವೆನಿಸಿರಬೇಕು. ವೀರಶೈವದಲ್ಲಿ ಭಕ್ತಿ, ಜ್ಞಾನ, ವೈರಾಗ್ಯವು ಪ್ರಚಾರ ಪಡೆದುದೇ ಈ ಅಪ್ರಿಯತೆಗೆ ಕಾರಣವಾಗಿರಬೇಕು. ಹಾಗಾಗಿ ಆ ಹೆಣ್ಣು ಹರಿಹರನ ಕೈಯಲ್ಲಿ ಮದುವೆಯ ಮೂಲಕ ಅಲ್ಲಮನನ್ನು ಗೆದ್ದು ಕಾಮಲತೆಯಾಗಿದ್ದವಳು, ಚಾಮರಸನ ಕೈಯಲ್ಲಿ

ಪ್ರೇಮದ ಮೂಲಕ ಅಲ್ಲಮನಿಗೆ ಸೋತು ಮಾಯಾದೇವಿಯಾಗಿ ಪರಿವರ್ತನೆಗೊಂಡಳು. ಅಂದರೆ ಹರಿಹರನ ಕೈಯಲ್ಲಿ ಕಾಮಲತೆಯಾಗಿದ್ದವಳು ಚಾಮರಸನ ಕೈಯಲ್ಲಿ ಮಾಯಾದೇವಿಯಾದಳು. ಅಲ್ಲಿ ಬಳ್ಳಿಗಾವೆಯ ಧನಿಕ ಧನದತ್ತನ ಮಗಳು ಕಾಮಲತೆಯಾದವಳು ಇಲ್ಲಿ ಬನವಾಸಿಯ ಅರಸು ಮಮಕಾರ-ಮೋಹಿನಿಯರ ಮಗಳಾಗಿ ರೂಪಿತವಾದಳು. ಹರಿಹರ ಹೇಳದ ಈಕೆಯ ತಂದೆತಾಯಿಯ ಹೆಸರನ್ನು ಚಾಮರಸ ತನ್ನ ಕೃತಿಯಲ್ಲಿ ಮಮಕಾರ-ಮೋಹಿನಿಯೆಂದೂ, ಗುರುವಿನ ಹೆಸರನ್ನು ಅಹಂಕಾರಾಚಾರ್ಯನೆಂದು ಹೇಳಿದನು.

ಚಾಮರಸ ಮಾಯಾದೇವಿಯನ್ನು ರಾಜಕುಮಾರಿಯಾಗಿ ಹೇಳಿದ ಕಾರಣವಾಗಿ ಎಳಂದೂರು ಹರೀಶ್ವರ ಪ್ರಭುವನ್ನು ರಾಜಕುಮಾರನನ್ನಾಗಿ ಮಾರ್ಪಡಿಸಿದ. ನಿರಹಂಕಾರ-ಸುಜ್ಞಾನಿಗಳು ಬಳ್ಳಿಗಾವೆಯ ರಾಜದಂಪತಿಗಳು. ಕರುವೂರು ಬೆಟ್ಟದಲ್ಲಿ ತಪಸ್ಸನ್ನಾಚರಿಸಿ ಮಗುವನ್ನು ಪಡೆದರು. ಈ ಮಗು ಬೆಳೆದು ಬನವಾಸಿಯಲ್ಲಿ ಮದ್ದಲೆ ಬಾರಿಸುವಾಗ, ರಾಜಕುಮಾರಿ ಮಾಯೆ ಮೋಹಿಸಿ ವಿಫಲಗೊಂಡಳು ಎಂದು ಬರೆದ.

ರಾಚಪ್ಪಯ್ಯ ಮಮಕಾರ-ಮೋಹಿನಿ ರಾಜದಂಪತಿಗಳೆಂದು ಒಪ್ಪಿಕೊಂಡು ಹೆಣ್ಣು ಹುಟ್ಟಿದ್ದೇ ಆದರೆ ಅದನ್ನು ನರ್ತನ ಸೇವೆಗೆ ಬಿಡುವುದಾಗಿ ತಂದೆತಾಯಿಗಳು ಹರಕೆ ಹೊತ್ತರೆಂದು ಕಲ್ಪಿಸಿದ. ಹುಟ್ಟಿದ ಹೆಣ್ಣು ಮಾಯಾದೇವಿ ಹೆಸರಿನಿಂದ ಮಧುಕೇಶ್ವರ ದೇವಾಲಯದಲ್ಲಿ ನರ್ತಿಸುತ್ತ ಪ್ರಭುವನ್ನು ಮೋಹಿಸಿದಳು ಎಂದು ಚಿತ್ರಿಸಿದ್ದಾನೆ.

ಹೀಗೆ ಅಲ್ಲಮನ ಪ್ರತಿಯೊಂದು ವಿವರದ ಬಗೆಗೂ ಚರ್ಚೆಗಳು ನಡೆಯುತ್ತಿದ್ದು, ಯಾವುದೇ ವಿವರಗಳು ನಿಖರವಾಗಿ ಇನ್ನೂ ತಿಳಿದುಬಂದಿರುವುದಿಲ್ಲ.

1(ಬಿ) ಆಧುನಿಕ ಕನ್ನಡ ಕಾವ್ಯದಲ್ಲಿ ಅಲ್ಲಮನ ಅನುಸಂಧಾನ

ಹನ್ನೆರಡನೆಯ ಶತಮಾನದ ವಚನಕಾರರ ಚಿಂತನೆಗಳು, ತತ್ವಗಳು, ಅವರ ಜೀವನ ಸಾಧನೆಗಳು ಮುಂದಿನ ನಡುಗನ್ನಡದ ಕವಿಗಳ ಮತ್ತು ಕೃತಿಗಳ ಮೇಲೆ ಪ್ರಭಾವ ಬೀರಿವೆ. ಹರಿಹರ, ರಾಘವಾಂಕ, ಚಾಮರಸ ಹೀಗೆ ಅನೇಕರ ಕಾವ್ಯಗಳಿಗೆ, ಕೃತಿಗಳಿಗೆ ಮೂಲದ್ರವ್ಯ ಒದಗಿಸಿದ್ದಾರೆ. ಅಷ್ಟೇ ಅಲ್ಲದೆ ಪುರಂದರದಾಸ, ಕನಕದಾಸ ಮುಂತಾದ ದಾಸರ ಕೀರ್ತನೆಗಳು, ಉಗಾಭೋಗಗಳಂತಹ ರಚನೆಗಳ ಮೇಲೆ ಹಾಗೂ ಶಿಶುನಾಳ ಷರೀಫರು ರಚಿಸಿದಂತಹ ತತ್ವಪದಗಳಂತಹ ರಚನೆಗಳ ಮೇಲೆ ಅಪಾರವಾದ ಪ್ರಭಾವವನ್ನು ಬೀರಿವೆ. ಹಾಗೆಯೇ ಆಧುನಿಕ ಕನ್ನಡ ಕಾವ್ಯವೂ ಕೂಡ ವಚನಕಾರರ ಪ್ರಭಾವಕ್ಕೆ ಒಳಗಾಗಿದೆ. ಅದರಲ್ಲೂ ಅಲ್ಲಮ, ಬಸವಣ್ಣ,

ಅಕ್ಕಮಹಾದೇವಿ ಇವರ ಚಿಂತನೆಗಳಿಂದ ಪ್ರಭಾವಿತಗೊಂಡು ಅವುಗಳನ್ನೇ ತನ್ನ ಕಾವ್ಯದ ಅಂತಃ ಸತ್ವಗುಣಗಳನ್ನಾಗಿಸಿಕೊಂಡಿದೆ.

ಶಿಶುನಾಳ ಷರೀಫ, ಮಧುರಚೆನ್ನ, ಕುವೆಂಪು, ಬೇಂದ್ರೆ, ಜಿ.ಎಸ್.ಶಿವರುದ್ರಪ್ಪ, ಚನ್ನವೀರಕಣವಿ, ಗೋಪಾಲಕೃಷ್ಣ ಅಡಿಗ, ಚಂದ್ರಶೇಖರ ಕಂಬಾರ, ಎಚ್.ಎಸ್.ಶಿವಪ್ರಕಾಶ್, ಕೆ.ಬಿ.ಸಿದ್ದಯ್ಯ ಮುಂತಾದ ಅನೇಕ ಕವಿಗಳ ಮೇಲೆ ಅಲ್ಲಮನ ಪ್ರಭಾವ ಪ್ರಖರವಾಗಿದೆ. ಈ ಎಲ್ಲಾ ಕವಿಗಳು ತಮ್ಮ ಕಾವ್ಯಗಳಲ್ಲಿ ಅಲ್ಲಮನನ್ನು ವಿಭಿನ್ನ ನೆಲೆಗಳಲ್ಲಿ ಅನುಸಂಧಾನಿಸಿಕೊಂಡಿದ್ದಾರೆ. ಮತ್ತೆ ಮತ್ತೆ ಅವನನ್ನು ನೆನಪಿಸಿಕೊಂಡಿದ್ದಾರೆ ಮತ್ತು ಅವನ ಮೂಲಕ ತಮ್ಮನ್ನು ಕಂಡುಕೊಳ್ಳಲು ಯತ್ನಿಸಿದ್ದಾರೆ. ಒಂದಲ್ಲಾ ಒಂದು ರೀತಿಯಿಂದ ಅವನ ಪ್ರೇರಣೆ, ಪ್ರಭಾವಕ್ಕೊಳಪಟ್ಟು ತಮ್ಮ ಕಾವ್ಯಗಳನ್ನು ಕಟ್ಟಿದ್ದಾರೆ. ಹೀಗೆ ಅನುಸಂಧಾನ ನಡೆಸಿರುವ ಪ್ರಾತಿನಿಧಿಕ ಕವಿಗಳ ಕಾವ್ಯಗಳಲ್ಲಿ ಕೆಲವೊಂದನ್ನು ಉದಾಹರಣೆಗಾಗಿ ನೋಡಬಹುದಾಗಿದೆ.

ಶಿಶುನಾಳ ಷರೀಫ: ಶಿಶುನಾಳ ಷರೀಫರ ಮೇಲೆ ಅಲ್ಲಮ, ಬಸವಣ್ಣ ಮುಂತಾದ ವಚನಕಾರರ ಪ್ರಭಾವವಿದೆ. ಅಲ್ಲಮನ ಬಹುತೇಕ ಚಿಂತನೆಗಳು, ಪ್ರತಿಮೆಗಳು, ರೂಪಕಗಳು, ಭಾಷಾಬಳಕೆ, ಬೆಡಗಿನ ವಚನಗಳಂತೆಯೇ ತತ್ವವನ್ನು ತುಂಬಿಕೊಂಡ ತತ್ವಪದಗಳನ್ನು ಷರೀಫರ ರಚನೆಗಳಲ್ಲಿ ಕಾಣಬಹುದಾಗಿದೆ.

'ನನ್ನೊಳಗೆ ನಾ ತಿಳಕೊಂಡೆ' ಎನ್ನುವ ತತ್ವ ಪದದೊಳಗೆ ಅಲ್ಲಮನ ಅರಿವಿನ ಬಗ್ಗೆ ಹೇಳುತ್ತಿದ್ದರೆ, 'ಸಂಸಾರದಿಂದ ಸದ್ಗತಿ ಹೊಂದಿ, ಹವಣವರಿತು ಮಾಯೆಯ ಜಯಿಸಿ, ಮರಣಗೆಲಿದವನೇ ಶಿವಯೋಗಿ' ಎನ್ನುವ ಸಾಲಿನಲ್ಲಿ ಸಾಂಸಾರಿಕ ಜೀವನದಿಂದ, ಲೌಕಿಕ ಸುಖಗಳೆಂಬ ಮಾಯೆಯನ್ನು ತ್ಯಜಿಸಿ ಪಾರಮಾರ್ಥದ ಕಡೆಗೆ ಚಲಿಸಬೇಕೆನ್ನುವ ತತ್ವವನ್ನು ಹೇಳುತ್ತಿದ್ದಾರೆ. 'ಸೋರುತಿಹುದು ಮನೆಯ ಮಾಳಿಗೆ'; 'ಗುಡಿಯ ನೋಡಿರಣ್ಣ, ದೇಹದ ಗುಡಿಯ ನೋಡಿರಣ್ಣ'; 'ಕೋಡಗನ ಕೋಳಿ ನುಂಗಿತ್ತ'; 'ಸಂಸಾರಗೊಡವಿ ಇನ್ನ್ಯಾಕೆ?' ಮುಂತಾದ ಅನೇಕ ತತ್ವಪದಗಳಲ್ಲಿ ಅಲ್ಲಮನ ತಾತ್ವಿಕ ಚಿಂತನೆಗಳ ದಟ್ಟ ಪ್ರಭಾವವಿರುವುದನ್ನು ಕಾಣಬಹುದಾಗಿದೆ ಹಾಗು 'ಎಡೆಯ ಒಯ್ಯೋಣು ಬಾರ ದೇವರಿಗೆ' ಎಂಬ ಭಜನೆಯಲ್ಲಿ ಪ್ರಭುದೇವರ ವರ್ಣನೆಯನ್ನು ಕಾಣಬಹುದಾಗಿದೆ.

ಮಧುರಚೆನ್ನ: ಮಧುರಚೆನ್ನರು ಪರಮಾತ್ಮನ ಶೋಧನೆಯನ್ನೇ ತಮ್ಮ ಕಾವ್ಯ ಹಾಗೂ ಜೀವನದ ಗುರಿಯಾಗಿಸಿಕೊಂಡವರು. ಇವರು ಕವಿ–ಅನುಭಾವಿ, ಸಂಶೋಧಕ, ಜಾನಪದ ವಿದ್ವಾಂಸ. ಆಧುನಿಕ ಕನ್ನಡ ಸಾಹಿತ್ಯಕ್ಕೆ ಒಬ್ಬ ಶೋಧಕನಾಗಿ ಹೆಚ್ಚು ಕೊಡುಗೆಯನ್ನು ನೀಡಿದವರು. ಶರಣರ

ಷಟ್‌ಸ್ಥಲ ಸಿದ್ಧಾಂತ ಮತ್ತು ಅರವಿಂದರ 'ಪೂರ್ಣಯೋಗ' ಸಿದ್ಧಾಂತಗಳನ್ನು ಸಮನ್ವಯಗೊಳಿಸಿದವರು. ಇವರ 'ನನ್ನ ನಲ್ಲ' ಕವನದಲ್ಲಿ ಅಲ್ಲಮನ ಗಾಢ ಪ್ರಭಾವವನ್ನು ಕಾಣಬಹುದಾಗಿದೆ.

ನಿಶ್ಯಬ್ದ ನಿಶ್ಯಬ್ದ ಶಬ್ದದಾಚೆಯ ಶಬ್ದ
ನಿಶ್ಯಬ್ದವಿದ್ದರೂ ಮೌನವಲ್ಲ,
ನಿಸ್ಸೀಮ ನಿಸ್ಸೀಮ ಸೀಮದಲೆ ನಿಸ್ಸೀಮ
ನಿಸ್ಸೀಮವೆಂದರೂ ಶೂನ್ಯವಲ್ಲ[4]

ಎಂದು ಮಧುರಚೆನ್ನರು ಈ ಕವನದಲ್ಲಿ ಹೇಳುತ್ತಿದ್ದಾರೆ. ಇದೊಂದು ಆಧ್ಯಾತ್ಮಿಕ ಚಿಂತನೆಗಳಿಂದ ಕೂಡಿದ ಕವನವಾದ್ದರಿಂದ ಅಲ್ಲಮನ ತತ್ವಗಳನ್ನು ಕವಿ ಇಲ್ಲಿ ಸಮರ್ಥವಾಗಿ ತಂದಿದ್ದಾರೆ.

'ಪ್ರೀತಿಯದು ಅರಿತು ಮಾಡಿದ ಮೋಹ, ಮೋಹವದು ಅರಿವಿಲ್ಲಹೊಂದಲವು' ಎಂದು ಪ್ರೀತಿ-ಮೋಹಗಳ ಪರಿಯನ್ನು ಬಿಚ್ಚಿ ನೋಡಿದ ಮಧುರಚೆನ್ನರು ಜೀವದ, ಕಾಯದ, ಆತ್ಮದ ಸಂಬಂಧಗಳನ್ನು ಚರ್ಚೆಗೆ ಒಳಪಡಿಸುತ್ತಾರೆ.

ಸಲಿಗೆಯ ಸಲ್ಲಾಪ, ನೋಂಪಿ, ಕೆಸರೊಳಗಿನ ಕಮಲ ಕವಿತೆಗಳಲ್ಲಿ ಪ್ರಶ್ನಿಸುವ ರೀತಿ, ದೇವರ ಅಸ್ತಿತ್ವವನ್ನು ಆಹ್ವಾನಿಸುತ್ತಾ ಹೋಗುವ ರೀತಿಯನ್ನು ಕಾಣಬಹುದಾಗಿದೆ.

ಬರುವನೆಂಬರು ಕೆಲರು, ಬಾರೆನೆಂಬುವರು ಕೆಲರು
ಸತ್ತು ಬಹುದಿನವಾಯಿತೆಂಬ ಕೆಲರು
ಬೆರಗು ಬಡುವರು ಕೆಲರು, ಬೆರಳು ಮುರಿವರು ಕೆಲರು
ಬಲ್ಲಂತೆ ಬಾಯಿಬಡಿವವರು ಕೆಲರು[5]

ಎಂದು ಹೇಳುವಲ್ಲಿ ಅಲ್ಲಮ ಅಪೂರ್ಣ ಜ್ಞಾನಿಗಳನ್ನು ಕುರಿತು ಮಾಡುವ ಟೀಕೆ, ವಿಡಂಬನೆಗಳು ಕಾಣಿಸುತ್ತವೆ. ಸಮಾಜದ ಜನರನ್ನು ಸರಿದಾರಿಯಲ್ಲಿ ನಡೆಸಬೇಕಾದವರು ದಿಕ್ಕುಗೆಡಿಸುವ, ಆಸೆ ಹಚ್ಚುವ ಕೆಲಸದಲ್ಲಿ ತೊಡಗಿದ್ದಾರೆ ಎಂದು ಕವಿ ಹೇಳುತ್ತಾ ಅಂತಹ ವ್ಯಕ್ತಿಗಳ ಭಾವವನ್ನು ಇಲ್ಲಿ ಸೂಚಿಸುತ್ತಿದ್ದಾರೆ.

ಕುವೆಂಪು : ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದ ಆಧ್ಯಾತ್ಮಿಕ ಚಿಂತನೆಗಳಿಗೆ ಒಳಗಾಗಿ ತಮ್ಮ ಬದುಕು-ಬರಹಗಳಲ್ಲಿ ದರ್ಶನ ತತ್ವವನ್ನು, ಹೊಸ ವೈಚಾರಿಕ ಪ್ರಜ್ಞೆಯನ್ನು ಬೆಳೆಸಿಕೊಂಡವರು. ಗಾಂಧೀಜಿ, ಲೋಹಿಯಾ ಮುಂತಾದವರ ಸಮಾಜವಾದಿ ತತ್ವವನ್ನು

ಅಂತರ್ಗತಗೊಳಿಸಿಕೊಂಡವರು. ವಚನ ಚಳುವಳಿಯ ಚಿಂತನೆಗಳನ್ನು ಬದುಕು-ಬರಹದಲ್ಲಿ ವೈಚಾರಿಕ ದೃಷ್ಟಿಕೋನದಿಂದ ಅಳವಡಿಸಿಕೊಂಡವರು.

ಹನ್ನೆರಡನೆಯ ಶತಮಾನದ ವಚನಕಾರರ ವಿಚಾರಗಳು ಕುವೆಂಪುರವರ ಮೇಲೂ ಪ್ರಭಾವಿಸಿವೆ. ಹಿಂದಿನ ಕನ್ನಡ ಸಾಹಿತ್ಯ ಪರಂಪರೆಯ ಹಲವಾರು ದೋಷಗಳನ್ನು ತಮ್ಮ ದರ್ಶನತತ್ವದಿಂದ ಜಗತ್ತಿಗೆ ತೋರಿಸುವುದರೊಂದಿಗೆ ಅವುಗಳನ್ನು ತಮ್ಮ ಕೃತಿಗಳ ಮೂಲಕ ವೈಚಾರಿಕತೆಯಿಂದ ಅಪ್ರಸ್ತುತವನ್ನು ಪ್ರಸ್ತುತಗೊಳಿಸಿದ್ದಾರೆ. ಕುವೆಂಪುರವರಿಗೂ ಕೂಡ ಅಲ್ಲಮನ ಚಿಂತನೆಗಳು, ತತ್ವಗಳು ಪ್ರಭಾವಿಸದೇ ಬಿಟ್ಟಿಲ್ಲ. ಅವರ ಕಾವ್ಯದಲ್ಲಿ ಅಲ್ಲಮನನ್ನು ಅನುಸಂಧಾನಿಸಿದ್ದಾರೆ.

'ಅಮ್ಮನ ಮೂರ್ತಿ' ಎನ್ನುವ ಕವಿತೆಯಲ್ಲಿ

"ನೀನಾರೆಂಬುದನರಿಯೆಯೊ ನೀನು
ಕೇಳ್ಳೆ ನಿಜವನು ತಿಳಿಸುವೆ ನಾನು,
ಕಾಲಾತೀತನು ನೀನಾಗಿರುವೆ,
ದೇಶಾತೀತನು ನೀನಾಗಿರುವೆ,
ಜನನ ಮರಣಗಳ ಮೀರಿಹೆ ನೀನು,
ಪಾಪ ಪುಣ್ಯಗಳ ದಾಂಟಿಹೆ ನೀನು,
ನಿನ್ನೊಳಗಡಗಿದೆ ಬ್ರಹ್ಮಾಂಡ,
ಮೂರ್ತಿ, ನೀನೇ ಬ್ರಹ್ಮಾಂಡ!"[6]

ಎಂದು ಅರಿವು ಮತ್ತು ಅದ್ವೈತದ ಪ್ರತಿಪಾದನೆಯನ್ನು ಮಾಡುತ್ತಿದ್ದಾರೆ. ಅಲ್ಲಮನೂ ಕೂಡ ಸ್ವಅರಿವನ್ನು ಕುರಿತು ಬಹಳಷ್ಟು ಚಿಂತಿಸಿದ್ದಾನೆ. ಅವನು ತನ್ನ ವಚನವೊಂದರಲ್ಲಿ 'ನಿಮ್ಮಲ್ಲಿ ನೀವು ತಿಳಿದು ನೋಡಿರೇ ಅನ್ಯವಿಲ್ಲ ಕಾಣಿರಣ್ಣ' (ಅಲ್ಲಮನ ವಚನ ಚಂದ್ರಿಕೆ, ವಚನ ಸಂಖ್ಯೆ-376)* ಎಂದು ಅರಿವನ್ನು ಕುರಿತು ಹೇಳುತ್ತಾರೆ.

ಹಾಗೆಯೇ 'ತತ್‌ತ್ವಮಸಿ' ಎನ್ನುವ ಇನ್ನೊಂದು ಕವನದಲ್ಲಿಯೂ ಕೂಡ ನಿನ್ನ ಅರಿವನ್ನು ನೀನು ಕಾಣು ಎಂದು ಕುವೆಂಪುರವರು ಹೇಳುತ್ತಾರೆ.

'ಎದ್ದೇಳು! ನಿನ್ನ ಮಹಿಮೆಯ ನೀನು ಕಾಣು! ತತ್‌ತ್ವಮಸಿ' ಎನ್ನುವ ಸಾಲಿನಲ್ಲಿಯೇ ಒಬ್ಬ ವ್ಯಕ್ತಿಗೆ ಮೊದಲು ತನ್ನನ್ನು ತಾನು ತಿಳಿಯುವುದು ಮುಖ್ಯ ಆಶಯವಿದೆ. ಅಲ್ಲಮನಂತೆ ಕುವೆಂಪುರವರೂ ಕೂಡ ಅರಿವಿನ ಜಿಜ್ಞಾಸೆಯನ್ನು ನಡೆಸಿದವರಾಗಿದ್ದಾರೆ. ಅಲ್ಲಮ ತನ್ನ ಒಂದು ವಚನದಲ್ಲಿ 'ಗುಹೇಶ್ವರಲಿಂಗವರಿಯಬಲ್ಲಡೆ ನಿನ್ನ ನೀ ತಿಳಿದು ನೋಡಾ'(373) ಎಂದು ಅರಿವಿನ

*ಇದು ಅಲ್ಲಮನ ವಚನ ಚಂದ್ರಿಕೆಯಲ್ಲಿನ ವಚನ ಸಂಖ್ಯೆಯಾಗಿದೆ. ಇನ್ನು ಮುಂದೆ ನನ್ನ ಪ್ರಬಂಧದಲ್ಲಿ ವಚನಗಳ ಮುಂದೆ ಬಳಸಲಾಗಿರುವ ಸಂಖ್ಯೆ ಎಲ್.ಬಸವರಾಜುರವರ 'ಅಲ್ಲಮನ ವಚನ ಚಂದ್ರಿಕೆ'ಯ ವಚನದ ಸಂಖ್ಯೆಯೇ ಆಗಿರುತ್ತದೆ.

ಬಗ್ಗೆ ಹೇಳುತ್ತಾನೆ. ತತ್ವಮಸಿ ಬಗ್ಗೆ ಅಲ್ಲಮನ ಜಿಜ್ಞಾಸೆಯೇ ಮಹತ್ತದುದಾಗಿದೆ. 'ತತ್ ಪದವೇ ಲಿಂಗ, ತ್ವಂ ಪದವೇ ಅಂಗ, ಈ ಎರಡರ ಐಕ್ಯವೇ ಅಸಿ ಎಂದುದಾಗಿ'(782) ಅಲ್ಲಮ ವಿವರಿಸಿ ಹೇಳುತ್ತಾನೆ. ಮತ್ತೊಂದು ವಚನದಲ್ಲಿ 'ವೇದವಿಜ್ಞಾನವೆಂಬುದಾಗಿ – ತತ್ವಮಸಿ ವಾಕ್ಯಗಳೆಲ್ಲವೂ ಹುಸಿಯಾಗಿ ಹೋದವು'(652) ಎಂದು ತತ್ವಮಸಿಯೆಂಬುದನ್ನೇ ಪಲ್ಲಟಗೊಳಿಸುತ್ತಾನೆ ಹಾಗು ಅದನ್ನು ವಿರೋಧದ ನೆಲೆಯಲ್ಲಿ ನಿಲ್ಲಿಸಿ ನೋಡುತ್ತಾನೆ. ಕುವೆಂಪುರವರೂ ಕೂಡ ಅದೇ ಜಿಜ್ಞಾಸೆಯನ್ನು ಇಲ್ಲಿ ನಡೆಸುತ್ತಾರೆ.

'ನಾ ಜಂಗಮ ದೇವಸ್ಥಾನ' ಎನ್ನುವ ಕವಿತೆಯಲ್ಲಿ ಗುಹೇಶ್ವರನ, ಆತ್ಮಲಿಂಗದ ಪರಿಕಲ್ಪನೆಯನ್ನು ತರುತ್ತಾರೆ.

ಎಲ್ಲ ದೇವರೂ ನನ್ನೊಳಗಾಗಿ
ನನ್ನ ಎಲ್ಲವೂ ಅನ್ಯವೆ ಆಗಿ
ರಸಯೋಗದೊಳಿರೆ ಎಲ್ಲಮೆ ಆಗಿ
ನಾ ಜಂಗಮ ದೇವಸ್ಥಾನ![7]

ಎಂದು ಕುವೆಂಪುರವರು ಸ್ಥಾವರಲಿಂಗದ ಕಲ್ಪನೆಯನ್ನು ಅಲ್ಲಮ, ಬಸವಣ್ಣನವರು ನಿರಾಕರಿಸಿದ ಪರಿಯಲ್ಲಿಯೇ ನಿರಾಕರಿಸಿ ಜಂಗಮ ದೇವಾಲಯದ ಕಲ್ಪನೆಯನ್ನು ಪ್ರತಿಪಾದಿಸುತ್ತಾರೆ. 'ಕಾಲೇ ಕಂಭಗಳಾದವೆನ್ನ! ದೇಹವೇ ದೇಗುಲವಾಯಿತ್ತಯ್ಯ!'(195) ಪ್ರಾಣಲಿಂಗಕ್ಕೆ ಕಾಯವೇ ಸೆಜ್ಜೆ, ಆಕಾಶಗಂಗೆಯಲ್ಲಿ ಮಜ್ಜನ(198); ಕಲ್ಲು ದೇವರೆಂದು ಪೂಜಿಸುವರು ಆಗದು ಕಾಣಿರೋ(210); ಕಳಶವುಳ್ಳ ಶಿವಾಲಯಕ್ಕೆ ಚೌಕದವೆರಡು ಕಂಭ(194) ಮುಂತಾದ ಅನೇಕ ವಚನಗಳಲ್ಲಿ ಅಲ್ಲಮ ಆತ್ಮಲಿಂಗದ ಜಂಗಮ ಪರಿಕಲ್ಪನೆಯನ್ನು ಹೇಳುತ್ತಾನೆ.

'ಅಪರೋಕ್ಷಾನುಭೂತಿ' ಎನ್ನುವ ಕವಿತೆಯಲ್ಲಿ ಅಲ್ಲಮನು ಹೇಳುವ ಮೋಹಬಂಧನ, ಶೂನ್ಯತೆ, ನಿರಾಕಾರ, ಮುಟ್ಟು ಮುಂತಾದವುಗಳ ಬಗ್ಗೆ, 'ಸಂನ್ಯಾಸಿ ಗೀತೆ' ಕವಿತೆಯಲ್ಲಿ ಆತ್ಮ, ಕಾಮ, ಮುಕ್ತಿ, ಮಾಯೆಗಳ ಬಗ್ಗೆ, 'ಪ್ರೇಮವನ್ನುಳುಹಯ್ಯ ಕಾಮವನ್ನಳಿಸಿ' ಎನ್ನುವ ಕವಿತೆಯಲ್ಲಿ ಕಾಮನಿಗ್ರಹ, ವಿಷಯಾಸಕ್ತಿಗಳಿಂದ ದೂರವಾಗುವುದರ ಬಗ್ಗೆ, 'ಶೂನ್ಯ ಶೋಧನೆ' ಕವಿತೆಯಲ್ಲಿ ಪ್ರೇಮವಿರಹವನ್ನು ಕುರಿತು ಹೇಳುತ್ತಿದ್ದರೂ ಶೂನ್ಯವಾಗುವುದನ್ನು, ಬಯಲುಗೊಳ್ಳುವ ಅನಿಸಿಕೆಯನ್ನು ವ್ಯಕ್ತಪಡಿಸುತ್ತಾರೆ.

ಕುವೆಂಪುರವರು 'ಗಗನಗುರು' ಎನ್ನುವ ಕವನದಲ್ಲಿ 'ಮಾತಿಗೊಂದು ಅರ್ಥವೇಕೆ? ಅರ್ಥವಿದ್ದರರ್ಥ ಸಾಕೆ?' ಎಂದು ಮಾತು-ಅರ್ಥಗಳ ಸಂಬಂಧಗಳನ್ನು ಕುರಿತು ಹೇಳುತ್ತಾರೆ.

ಅಲ್ಲಮನೂ ಕೂಡ ಮಾತು ಎನ್ನುವುದು ಸೂಕ್ಷ್ಮವಾದದ್ದು, ಮೌಲ್ಯವುಳ್ಳದ್ದು ಅದನ್ನು ಎಚ್ಚರಿಕೆಯಿಂದ ಬಳಸಬೇಕು, 'ಮಾತೆಂಬುದು ಜ್ಯೋತಿರ್ಲಿಂಗ'(951) ಎಂದು ಹೇಳುತ್ತಾನೆ.

ಅಲ್ಲಮನ ಮಾಯೆ, ಮುಕ್ತಿ, ಬಯಲು ಮುಂತಾದ ಕಲ್ಪನೆಗಳನ್ನು ಕವಿ ಕುವೆಂಪುರವರು ತಮ್ಮ 'ಮಾಯೆ–ಮುಕ್ತಿ' ಎನ್ನುವ ಕವನದಲ್ಲಿ ಬಳಸುತ್ತಾರೆ. ಅವರ ಮತ್ತೊಂದು ಕವನ 'ದೇವರು ಪೂಜಾರಿ'ಯಲ್ಲಿ ಪೂಜಾರಿಯ ಡಾಂಭಿಕತೆಯನ್ನು ಹೇಳುವುದರೊಂದಿಗೆ ಅವನ ಕಾರ್ಯಗಳನ್ನು ವಿಡಂಬಿಸುತ್ತಾರೆ. ವೇಷಧಾರಿಗಳನ್ನು, ಲಿಂಗದಲ್ಲಿ ನಿಷ್ಠೆಯಿಲ್ಲದವರನ್ನು ಡಾಂಭಿಕ ಭಕ್ತಿಯವರನ್ನು, ಲಿಂಗಭಕ್ತರಲ್ಲದವರನ್ನು ಅಲ್ಲಮ ತನ್ನ ಅನೇಕ ವಚನಗಳಲ್ಲಿ ಕಟುವಾಗಿ ಟೀಕಿಸುತ್ತಾನೆ, ವಿಡಂಬಿಸುತ್ತಾನೆ.(ನೋಡಿ ವಚನಗಳು 126, 135, 136, 68, 73, 176)

ಹೀಗೆ ಕುವೆಂಪುರವರು ಅಲ್ಲಮನೊಂದಿಗೆ, ಅವನ ತತ್ವ–ಚಿಂತನೆಗಳೊಂದಿಗೆ ತಮ್ಮ ಅನೇಕ ಕವಿತೆಗಳಲ್ಲಿ ಅನುಸಂಧಾನ ನಡೆಸಿದ್ದಾರೆ. ಅಲ್ಲಮನ ಬಹಳ ಮುಖ್ಯವಾದ ಗ್ರಹಿಕೆಗಳನ್ನು ಕುವೆಂಪುರವರೂ ತಮ್ಮ ಕವಿತೆಗಳಲ್ಲಿ ಹಿಡಿದಿಡಲು ಪ್ರಯತ್ನಿಸಿದ್ದಾರೆ ಎಂದು ಹೇಳಬಹುದಾಗಿದೆ.

ಬೇಂದ್ರೆ : ಕನ್ನಡ ಕಾವ್ಯ ಕ್ಷೇತ್ರದಲ್ಲಿ ಬೇಂದ್ರೆಯವರದು ವಿಶಿಷ್ಟಸ್ಥಾನ. ಜೀವನಾನುಭವವನ್ನೇ ತಮ್ಮ ಕವಿತೆಗಳ ಅಂತಃಶಕ್ತಿಯಾಗಿಸಿದವರು. ಆಧ್ಯಾತ್ಮವನ್ನು ಪರಿಭಾವಿಸಿಕೊಂಡು ಒಂದು ರೀತಿಯ ಹೊಸ ತಾತ್ವಿಕ ಜಿಜ್ಞಾಸೆಯನ್ನು ತಮ್ಮ ಕಾವ್ಯಗಳ ಮೂಲಕ ಹುಟ್ಟಿಸಿದವರು. ಸಮಾಜದ ಸೂಕ್ಷ್ಮ ಘಟನೆಗಳನ್ನು ತಮ್ಮ ಅತೀಸೂಕ್ಷ್ಮ ಪ್ರಜ್ಞೆಯಿಂದ ಗ್ರಹಿಸಿ ತಮ್ಮ ಕಾವ್ಯಗಳಲ್ಲಿ ಅವುಗಳನ್ನು ತಂದವರು. ಬದುಕಿನ ಕಷ್ಟ–ನಷ್ಟಗಳನ್ನು, ನೋವು–ನಲಿವುಗಳನ್ನು, ಬಡತನದ ಬವಣೆಯನ್ನು ಪ್ರೀತಿಯ ಸಿಂಚನದಿಂದ ಜೀವನೋತ್ಸಾಹಗೊಳಿಸಿದವರು. ಈ ಕ್ರೂರ ವ್ಯವಸ್ಥೆಯ ವಿರುದ್ಧ ಎಲ್ಲರಲ್ಲಿ ಸಾಮಾಜಿಕ ಎಚ್ಚರವನ್ನು ಜಾಗೃತಿಗೊಳಿಸಿದವರು. ಹಾಗಾಗಿಯೇ ಬೇಂದ್ರೆ ಕನ್ನಡ ಕಾವ್ಯ ಕಂಡ ಒಬ್ಬ ಅದ್ಭುತ ಪ್ರತಿಭೆ.

ಬೇಂದ್ರೆಯವರೂ ಕೂಡ ಅಲ್ಲಮನ ವಿಚಾರಗಳಿಂದ ಪ್ರಭಾವಿತರಾಗಿದ್ದಾರೆ. ಅಲ್ಲಮನ ಮಾಯೆ, ಅರಿವು, ಶೂನ್ಯ ಕಲ್ಪನೆ ಹಾಗೂ ಅದ್ವೈತದಂತಹ ಆಧ್ಯಾತ್ಮಿಕ ಚಿಂತನೆಗಳನ್ನು ತಮ್ಮ ಚಿಂತನಾಗ್ರಹಿಕೆಗಳ ಜೊತೆಗೆ ಬೆರಸಿ ಹೊಸರೂಪದಲ್ಲಿ ಕವಿತೆಗಳಲ್ಲಿ ತಂದಿದ್ದಾರೆ.

'ಬದುಕು ಮಾಯೆಯ ಮಾಟ'; 'ಅರಿವಿನೊಳೇ ಇರವಿದೆಯೋ, ಇರವಿದೆ ಅರಿವೆಲ್ಲಿ?'; 'ಅರಿವಿನ್ಯಾಗ ಮರೆವು ಮರತಿರತೈತಿ' ಎಂದು ಬೇಂದ್ರೆ ಹೇಳುತ್ತಿರುವಾಗಲೇ ಅರಿವು–ಮರೆವಿನ ಪ್ರಶ್ನೆ ಅಲ್ಲಮನನ್ನು ಕಾಡಿದಂತೆಯೇ ಕವಿ ಬೇಂದ್ರೆಯನ್ನು ಅತಿಯಾಗಿ ಕಾಡಿದೆ.

'ಕತ್ತಲೆಯಲ್ಲಿ ಹೇಳಬಹುದು, ಕೇಳಬಹುದು
ಬತ್ತಲೆಯಾಗಿ ಬದುಕಬಹುದು, ಬಾಳಬಹುದು
ನಾನು ಇತ್ತಲೆಯಾದರೆ
ನೀನು ಅತ್ತಲೆಯಾದರೆ
ಹಾದಿ ಯಾವುದು?
ರಾಮ, ಕೃಷ್ಣ, ಹರಿ, ವಿಟ್ಠಲ ಅಲ್ಲದೇ?
ಈ ಬ್ರಹ್ಮ ಚೈತನ್ಯ'[8]

ಎಂದು ಕವಿ ಬೇಂದ್ರೆಯವರು ಅಲ್ಲಮನು ಅನುಸರಿಸಿದ ಅದ್ವೈತದ ಚಿಂತನೆಯನ್ನು ಹೇಳುತ್ತಲೇ, ಅದೇ ಅದ್ವೈತವನ್ನೂ ಪ್ರಶ್ನಿಸುವ ನೆಲೆಯನ್ನು ಅಲ್ಲಮನಂತೆಯೇ ಕವಿಯೂ ತಾಳುತ್ತಾರೆ.

ಬೇಂದ್ರೆಯವರು "ಅಲ್ಲಮ್ಮಪ್ರಭು"[9] ಎಂಬ ಕವನವನ್ನು ರಚಿಸಿದ್ದಾರೆ. ಅದರಲ್ಲಿ ಅಲ್ಲಮಪ್ರಭುವಿನ ವ್ಯಕ್ತಿತ್ವವನ್ನು ಕುರಿತಾದ ಚಿತ್ರಣವಿದೆ. ಇದರಿಂದ ಬೇಂದ್ರೆಯವರಿಗೆ ಅಲ್ಲಮನ ಪ್ರಭಾವವಾಗಿರುವುದನ್ನು ಕಾಣಬಹುದಾಗಿದೆ.

ಆವು ಈವಿನ
ನಾವು ನೀವಿಗೆ
ಆವು ತಾನದ
ತನನನಾ[10]

ಎಂದು ನಾಕುತಂತಿ ಕವನದ ಸಾಲುಗಳನ್ನು ಅಲ್ಲಮನ

ಆನು ನೀನೆಂಬದು ತಾನಿಲ್ಲ
ತಾನಂತಿದ ಬಳಿಕ ಮತ್ತೇನೂ ಇಲ್ಲ! ಇಲ್ಲ!(305)

ಎಂಬ ವಚನದ ಸಾಲುಗಳಲ್ಲಿ ಗುರುತಿಸಬಹುದಾಗಿದೆ. ಹಾಗೆಯೇ ಬೇಂದ್ರೆ ಬಳಸುವ 'ಲೀಲೆ'ಯ ಪರಿಕಲ್ಪನೆ, 'ನಾದ'ದ ಕಲ್ಪನೆಯೂ ಕೂಡ ನಾದ, ಲೀಲೆಯ ಪರಿಕಲ್ಪನೆಯಾಗಿಯೇ ಇದೆ. ಅಲ್ಲಮನು ಹೇಳುವ ನಾದ-ಬಿಂದು-ಕಳೆ-ಲೀಲೆ ಎನ್ನುವ ಹಿನ್ನಲೆಯಲ್ಲಿಯೇ ಬೇಂದ್ರೆಯವರೂ ನಾದಲೀಲೆ ಎಂದು ಹೇಳುತ್ತಿದ್ದಾರೆ. ಬೇಂದ್ರೆಯವರು ನಾಕುತಂತಿ ಕವನದಲ್ಲಿ ನಾನು, ನೀನು ಎಂಬ ಭಾವಗಳ, ಹುಟ್ಟು-ಮುಟ್ಟುವಿನ ಪ್ರಶ್ನೆಯನ್ನು, ಬಯಲಿನ ಪ್ರಸ್ತಾಪವನ್ನು ಮಾಡುತ್ತಾರೆ. ಅಲ್ಲಮನೂ ಕೂಡ ಹುಟ್ಟು-ಮುಟ್ಟು(166, 667), ಬಯಲು, ನಾನು-ನೀನು ಮುಂತಾದವುಗಳನ್ನು ಕುರಿತು ಅನೇಕ ವಚನಗಳಲ್ಲಿ ಮಾತನಾಡಿದ್ದಾನೆ. ಬೇಂದ್ರೆಯವರ 'ಮಾಯಾಕಿನ್ನರಿ', 'ಏಳು ಕನ್ನಿಕೆಯರು' ಮುಂತಾದ ಕವಿತೆಗಳಲ್ಲಿ ಅಲ್ಲಮನ ಪ್ರಭಾವವಿರುವುದನ್ನು ಗುರುತಿಸಬಹುದಾಗಿದೆ.

ಹೀಗೆ ಬೇಂದ್ರೆಯೂ ಕೂಡ ಅಲ್ಲಮನನ್ನು ಅನುಭಾವದ ನೆಲೆಯಲ್ಲಿ, ಆಧ್ಯಾತ್ಮದ ನೆಲೆಯಲ್ಲಿ ಅನುಸಂಧಾನಿಸಿದ್ದಾರೆ.

ಜಿ.ಎಸ್.ಶಿವರುದ್ರಪ್ಪ : ಜಿ.ಎಸ್.ಎಸ್ ಆಧುನಿಕ ಕನ್ನಡ ಕಾವ್ಯಕ್ಕೆ ತಮ್ಮ ಹಲವಾರು ಕವನ-ಸಂಕಲನಗಳ ಮೂಲಕ ಕೊಡುಗೆಯನ್ನು ನೀಡಿದ್ದಾರೆ. ಸಾಮಗಾನದ 'ಬಯಲು' ಕವನದಲ್ಲಿ

ಎರಡು ಬಯಲು ಬೇಟಕಾಗಿ
ಇರುಳು ತೆರೆಯ ಕಟ್ಟಿದೆ
ಮೌನವೊಂದೆ ಹಾಡಿದೆ.
ಎರಡು ಬಯಲ ಸಂಗಮದಲಿ
ಕವಿಯ ಜೀವ ಕರಗಿದೆ
ಬಟ್ಟ ಬಯಲೆ ಆಗಿದೆ![11]

ಎಂದು ಕವಿ ಎಲ್ಲವೂ ಬಯಲಾಗಿ ಕಾಣುತ್ತಿರುವ ಬಗೆಯನ್ನು ಹೇಳುತ್ತಿದ್ದಾರೆ. ಅಲ್ಲಿ ಆವರಿಸಿರುವ ಪ್ರಶಾಂತ ಮೌನ ಮತ್ತು ಶಬ್ದದೊಳಗಣ ನಿಶ್ಯಬ್ದ ಎನ್ನು ನೆಲೆಯಲ್ಲಿಯೂ ಕವಿ ಹೇಳುತ್ತಿದ್ದಾರೆ. ಅಲ್ಲಮನು ಬಟ್ಟಬಯಲನ್ನು ಕುರಿತು ಅನೇಕ ವಚನಗಳಲ್ಲಿ(99, 545, 986) ಜಿಜ್ಞಾಸೆಯನ್ನು ನಡೆಸಿದ್ದಾನೆ. ಅಮೃತ ಮಹೂರ್ತ, ಅಸ್ತಮಾನ, ನನ್ನ ಹಣತೆ ಮುಂತಾದ ಕವನಗಳಲ್ಲಿ ಅಲ್ಲಮನ ಪ್ರಭಾವವಿರುವುದನ್ನು ಗುರುತಿಸಬಹುದಾಗಿದೆ.

ಚೆನ್ನವೀರಕಣವಿ: ಮಧುರಚೆನ್ನ, ಬೇಂದ್ರೆ, ಆನಂದಕಂದ ಮುಂತಾದ ಗೆಳೆಯರ ಗುಂಪಿನ ಗೆಳೆಯರ ಕಾವ್ಯ ಪ್ರಯೋಗಗಳಿಂದ ಆಕರ್ಷಿತರಾಗಿ ಕಣವಿಯವರು ಕಾವ್ಯ ರಚನೆಯನ್ನು ಮಾಡಿದವರು. ಕಣವಿಯವರ ಕಾವ್ಯದಲ್ಲಿ ವರ್ಣನೆಯೇ ಹೆಚ್ಚು ಮೇಲುಗೈ ಪಡೆದಿದ್ದರೂ ಚಿಂತನೆಗೆ ಪ್ರಾಮುಖ್ಯವಿದೆ. ನವೋದಯ ಕಾವ್ಯಗಳ ಪ್ರಮುಖ ಕೇಂದ್ರವಾದ ಕಾಮ, ಪ್ರೇಮ, ವಿರಹ, ಸ್ನೇಹ, ವಾತ್ಸಲ್ಯ, ಮಾನವೀಯ ಸಂಬಂಧ ಇವುಗಳು ಕಣವಿಯವರ ಕಾವ್ಯದಲ್ಲಿ ಕಾಣಬಹುದಾದರೂ ಅಲ್ಲಮನು ಬಳಸುವ ಶೈಲಿಯ ಸಾಂಕೇತಿಕತೆ, ಪ್ರತಿಮೆಗಳು ಹಾಗೂ ಆಧ್ಯಾತ್ಮಿಕತೆಯನ್ನು ಸ್ವಲ್ಪಮಟ್ಟಿಗೆ ಕಾಣಬಹುದಾಗಿದೆ.

'ಮಾಯಾ ಕೋಲಾಹಲ' ಕವಿತೆಯಲ್ಲಿ ಅಲ್ಲಮನ ಜೀವನವೃತ್ತಾಂತವನ್ನು ಕವಿ ಕಣವಿಯವರು ಚಿತ್ರಿಸಿರುವುದರಿಂದಲೇ ಅವನ ಪ್ರಭಾವಕ್ಕೆ ಒಳಪಟ್ಟಿದ್ದಾರೆ ಎಂದು ತಿಳಿಯಬಹುದಾಗಿದೆ. 'ಮಣ್ಣಿನ ಮೆರವಣಿಗೆ' ಕವನ ಸಂಕಲನದಲ್ಲಿ ತಂತ್ರ-ಪ್ರಯೋಗ, ಜೀವರಾಶಿಯ ಉಗಮ, ಮಾನವನ ಬುದ್ಧಭಾವಗಳ ಉಗಮ, ಪೃಥ್ವಿಯ ಉಗಮದ ಕಲ್ಪನೆಯಿದೆ. ಅಲ್ಲಮನೂ ಕೂಡ ಈ ಚಿಂತನೆಯನ್ನು ನಡೆಸಿದವನಾಗಿದ್ದಾನೆ.(ವಚನ ಸಂಖ್ಯೆ 5, 722). 'ಶಬ್ದ-

ನಿಶ್ಶಬ್ದ' ಕವನದಲ್ಲಿ ಅಲ್ಲಮನ ಪರಿಲಕ್ಷನೆಗಳನ್ನು ಕವಿ ನವೀನತೆಯಿಂದ ತಮ್ಮದೇ ಶೈಲಿಯಲ್ಲಿ ಪ್ರಶ್ನಿಸುವ, ಮೀರುವ ಕ್ರಮವನ್ನು ಕಾಣಬಹುದಾಗಿದೆ.

'ನಾ' 'ನೀ' ಎಂದು ಹಿಗ್ಗಿ, ನುಗ್ಗಿ ಬರುತ್ತಿದ್ದ
ನನ್ನ ಅಂತಃಕರಣದ ಮುಗ್ಧ
ಸ್ನಿಗ್ಧ ಶಬ್ದಗಳೆ, ಶೂನ್ಯಕ್ಕೆ
ಕೊಂಬುಕೊಟ್ಟು, ಜಗ್ಗಿ ಕೆಳಗಿಳಿಸಿದಿ'ರಾ'?
- - - - - - - - - - - - - -
- - - - - - - - - - - - - -
ಚೂರಿ ಇರಿತಕ್ಕೆ ಕುಸಿದ ನಿಶ್ಶಬ್ದ ಶಬ್ದಗಳೆ
ಮೆಲ್ಲಗೆ ಎತ್ತಿ, ಗಲ್ಲಕ್ಕೆ ಒತ್ತಿಕೊಳ್ಳುತ್ತೇನೆ.
ಅಕ್ಷರಕ್ಷರದಲ್ಲಿ ಬೆಸದು, ಭಾಷೆ
ಕೊಟ್ಟಿದ್ದೀರಿ ಭಾವಕ್ಕೆ
ಹೃದಯ ಸಂವಾದಕ್ಕೆ, ಅನುಭಾವ ಗೀತಕ್ಕೆ
ಈಗ ಏತಕ್ಕೆ ಮೂಕವಾಗಿದ್ದೀರಿ?[12]

ಅಲ್ಲಮ 'ನಾ', 'ನೀ' ಎಂಬುದನ್ನು ಅಳಿಸಿ 'ತಾನೇ' ಆಗುವ ಅದ್ವಯದ ಮಾದರಿಯೊಂದನ್ನು ಅನುಸರಿಸುವ ಮೂಲಕ ಗುಹೇಶ್ವರಲಿಂಗ ತಾನೇ ಆಗುವ ಸ್ಥಿತಿಯನ್ನು ಪ್ರತಿಪಾದಿಸುತ್ತಾನೆ.

ನಾ ನೀನೆಂಬ ಭೇದ ಅಂದೂ ಇಲ್ಲ ಇಂದೂ ಇಲ್ಲ
ಸಾಲೋಕ್ಯನಲ್ಲ, ಸಾಮೀಪ್ಯನಲ್ಲ ಶರಣ;
ಸಾರೂಪ್ಯನಲ್ಲಿ ಸಾಯುಜ್ಯನಲ್ಲ ಶರಣ;
ಸಕಾಯನಲ್ಲ ಅಕಾಯನಲ್ಲ ಗುಹೇಶ್ವರಲಿಂಗ ತಾನೆಯಾಗಿ(69)

ಅಲ್ಲಮನ ಈ ಆಶಯವನ್ನೇ ಕಣವಿಯವರು ಈ ಮೇಲಿನ ಕವನದಲ್ಲಿ ಹೇಳುತ್ತಿರುವುದಾಗಿದೆ. ಹೀಗೆ ಕಣವಿಯವರು ತಮ್ಮ ಅನೇಕ ಕವಿತೆಗಳಲ್ಲಿ ಅಲ್ಲಮನ ತತ್ವಚಿಂತನೆ, ಭಾಷಾ ಪ್ರಯೋಗ, ಪ್ರಶ್ನಿಸುವ ಗುಣ, ಸಿದ್ಧ ಮಾದರಿಯನ್ನು ಮೀರುವ ಕ್ರಮ ಮತ್ತು ಅವನು ನಡೆಸುವ ಜಿಜ್ಞಾಸೆಯೊಂದಿಗೆ ಅನುಸಂಧಾನ ನಡೆಸಿದ್ದಾರೆ.

ಟಿಪ್ಪಣಿಗಳು

1. ಎಲ್.ಬಸವರಾಜು : (ಸಂ) ಅಲ್ಲಮನ ವಚನಗಳು, ಪೀಠಿಕೆ, ಗೀತಾಬುಕ್‌ಹೌಸ್, ಮೈಸೂರು, 1969 ಪುಟ 43
2. ಡಿ.ಆರ್.ನಾಗರಾಜ್ : ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ, ಅಕ್ಷರ ಪ್ರಕಾಶನ, ಹೆಗ್ಗೋಡು, 1999, ಪುಟ 233
3. ಜೋಶಿ.ಶಂ.ಬಾ : ಶಂ.ಬಾ ಸಮಗ್ರ ಸಂಪುಟ-3, ಹಾಲುಮತ ದರ್ಶನ, ಕನ್ನಡ ಪುಸ್ತಕ ಪ್ರಾಧಿಕಾರ, 1999, ಪುಟ 189
4. ಜಿ.ಎಸ್. ಕಾಪಸೆ : 'ಮಧುರ ಚೆನ್ನ', ಜೀವನ ಹಾಗೂ ಕೃತಿಗಳ ಸಮೀಕ್ಷೆ, ಪುಟ 89
5. ಅದೇ ಪುಟ 224
6. ಕುವೆಂಪು : ಸಮಗ್ರ ಕಾವ್ಯ ಸಂಪುಟ 2, ಪುಟ 793
7. ಅದೇ ಪುಟ 186
8. ಡಾ. ವಾಮನ ಬೇಂದ್ರೆ : (ಸಂ) ಅಂಬಿಕಾತನಯ ದತ್ತ ಸಮಗ್ರ ಕಾವ್ಯ, ನಮನ 1, ಪುಟ 25
9. ಡಾ. ವಾಮನ ಬೇಂದ್ರೆ : (ಸಂ) ಅಂಬಿಕಾತನಯ ದತ್ತ ಸಮಗ್ರ ಕಾವ್ಯ, ನಮನ 1, ಪುಟ 637
10. ಡಾ. ವಾಮನ ಬೇಂದ್ರೆ : (ಸಂ) ನಾಕುತಂತಿ, ಪುಟ 9
11. ಜಿ.ಎಸ್. ಶಿವರುದ್ರಪ್ಪ : ಸಮಗ್ರಕಾವ್ಯ, ಪುಟ 51
12. ಚನ್ನವೀರ ಕಣವಿ : ಕಣವಿ ಸಮಗ್ರಕಾವ್ಯ, ಪುಟ 478

ಅಧ್ಯಾಯ – 2 : ಅಡಿಗರ ಕಾವ್ಯದಲ್ಲಿ ಅಲ್ಲಮ

ಕನ್ನಡ ನವ್ಯ ಕಾವ್ಯದ ಹರಿಕಾರರಲ್ಲಿ ಎಂ.ಗೋಪಾಲಕೃಷ್ಣ ಅಡಿಗರು ಪ್ರಮುಖರಾಗಿದ್ದಾರೆ. ಅಡಿಗರು 'ಅನ್ಯರೊರೆದುದನೆ ಬರೆದುದನೆ ಬರೆ ಬರೆದು ಭಿನ್ನಗಾಗಿದೆ ಮನವು' ಎಂದು ತಮ್ಮ ಹಿಂದಿನ ಕಾವ್ಯಶೈಲಿಯನ್ನು ಬಿಟ್ಟು ವಿಭಿನ್ನವಾದ ಶೈಲಿಯಲ್ಲಿ ಕಾವ್ಯ ರಚಿಸಿದ ಕವಿಗಳು, ನವೋದಯದ ಭಾವಗೀತಾತ್ಮಕ ಶೈಲಿಯಿಂದ ಪ್ರತಿಮೆ, ರೂಪಕ, ಸಂಕೇತಗಳಿಂದ ಕೂಡಿದ ನವ್ಯ ಶೈಲಿಯಲ್ಲಿ ಕಾವ್ಯವನ್ನು ಬರೆದವರಾಗಿದ್ದಾರೆ. ಟಿ.ಎಸ್.ಎಲಿಯಟ್ ನಂತಹ ಇಂಗ್ಲೀಷ್‌ನ ಆಧುನಿಕ ಕವಿಗಳ ಪ್ರಭಾವ, ಪ್ರೇರಣೆ ಅಡಿಗರ ಕಾವ್ಯ ನಿರ್ಮಿತಿಯ ಮೇಲೆ ಪ್ರಭಾವ ಬೀರಿದೆ.

ಕನ್ನಡದ ನವ್ಯಕಾವ್ಯಕ್ಕೆ ಪ್ರಮುಖ ಪ್ರೇರಣೆ ಮತ್ತು ಹೊಸ ಒಳಹುಗಳನ್ನು ನೀಡಿರುವುದು ಪಶ್ಚಿಮದ ಮಾಡ್ರನಿಸಂ ತತ್ವಗಳಲ್ಲ ಬದಲಿಗೆ ಇಲ್ಲೇ ಇದ್ದ ವಚನ ಚಳುವಳಿಯಲ್ಲಿ ಶಿವಶರಣರಿಂದ ರಚಿತವಾದ ವಚನಗಳೇ ಆಗಿವೆ ಎನ್ನುವುದನ್ನು ಮನಗಾಣಬೇಕಾಗಿದೆ.

"ವಚನಗಳಲ್ಲಿ ಇತ್ತೀಚಿನ ನವ್ಯ ಕಾವ್ಯದ ಸಂಕೀರ್ಣ, ಸಾಂಕೇತಿಕತೆಯ ಕಸುವು ಕಂಡು ಬರುತ್ತದೆ. ನವ್ಯ ಕಾವ್ಯದ ಸಾಂಕೇತಿಕ ಪಟ್ಟು, ಸಂಕೀರ್ಣಾರ್ಥದ ಶಕ್ತಿ, ಉಪಮಾ, ರೂಪಕ, ಪ್ರತಿಮಾ ಸಂಪತ್ತು ಕಂಡು ಬರುತ್ತದೆ. ವಿಶೇಷವಾಗಿ ನವ್ಯ ಕಾವ್ಯದ ಬೀಜ ಪಾಶ್ಚಾತ್ಯರ ಕೊಡುಗೆಯಾಗದೇ ನಮ್ಮ ವಚನ ಕಾವ್ಯಗಳಲ್ಲೇ ಇತ್ತು, ಇದೆ ಎಂದು ಮನಗಾಣುವುದು ಅನಿವಾರ್ಯವಾಗಿದೆ" ಎಂಬ ಡಿ.ಲಿಂಗಯ್ಯನವರ ಕಾವ್ಯಾಸ್ವಾದನ ಕೃತಿಯಲ್ಲಿನ ಮಾತು ಅಡಿಗರ ಕಾವ್ಯವನ್ನು ನೋಡಿದಾಗ ಸತ್ಯವೆನಿಸುತ್ತದೆ. ಆದರೂ ಅಡಿಗರು ತಮ್ಮ ಹಿಂದಿನ ಕನ್ನಡ ಸಾಹಿತ್ಯ ಪರಂಪರೆಯಿಂದ ಮತ್ತು ಪಾಶ್ಚಾತ್ಯರ ಆಧುನಿಕ ಕವಿಗಳ ಕಾವ್ಯ ಪ್ರಭಾವಕ್ಕೆ ಒಳಗಾಗಿ ತಮ್ಮ ಕೃತಿಗಳನ್ನು ರಚಿಸಿದ್ದಾರೆ. ಅವರಿಗೆ ವಚನ ಚಳುವಳಿಯ ತಾತ್ವಿಕ ಚಿಂತನೆಗಳೂ ಪ್ರಮುಖವಾಗುತ್ತವೆ. ಹಾಗೆಯೇ ಪಾಶ್ಚಿಮಾತ್ಯರ ಅದರಲ್ಲೂ ಎಲಿಯಟ್‌ನಂತಹ ಆಧುನಿಕ(ಮಾಡ್ರನಿಸ್ಟ್) ಕವಿಗಳ ಕಾವ್ಯ ತಿರುಳೂ ಪ್ರಮುಖವಾಗುತ್ತದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಲ್ಲಮನಿಂದ ಪ್ರಭಾವಿತಗೊಂಡ ಕವಿಗಳಲ್ಲಿ ಗೋಪಾಲಕೃಷ್ಣ ಅಡಿಗರೂ ಒಬ್ಬರು. ಒಂದು ರೀತಿಯಲ್ಲಿ ಅಡಿಗರು ಅಲ್ಲಮನನ್ನು ಜೀರ್ಣಿಸಿಕೊಂಡು ಕಾವ್ಯ ಸೃಷ್ಠಿ ಮಾಡಿದ್ದಾರೆ. ಅಲ್ಲಮನು ಅನುಭವಿಸುವ ವಿರಹ, ಅವನು ಬಳಸುವ ಭಾಷೆ, ಪ್ರತಿಮಾಲೋಕದ ಸೃಷ್ಠಿ, ಸಂಕೀರ್ಣಗೊಳಿಸುವ ಶೈಲಿ. ಇವು ಅಡಿಗರ ಕಾವ್ಯದಲ್ಲಿ ಮೇಲ್ನೋಟಕ್ಕೆ ಕಾಣಬಹುದಾಗಿದೆ. ಅಲ್ಲಮನ ಹಾಗೇ ಅಡಿಗರು ದ್ವಂದ್ವ, ವೈರುಧ್ಯಗಳ ಬಳಕೆಯಿಂದಾಗಿ ಚಿಂತನೆಗಳಾಚೆಗೆ ಇರುವ ಸತ್ಯಗಳನ್ನು ಹುಡುಕಲು ಪ್ರಯತ್ನಿಸಿದವರಾಗಿದ್ದಾರೆ.

ಆದ್ದರಿಂದ ಲಂಕೇಶ್‌ರವರು ಅಡಿಗರನ್ನು ಕುರಿತು ಒಂದು ಜನಾಂಗದ ಕಣ್ಣು ತೆರೆಸಿದ ಕವಿ ಎಂದು ಹೇಳಿದ್ದಾರೆ.

ಗುರು-ಶಿಷ್ಯ ಸಂಬಂಧ, ಹೆಣ್ಣು-ಗಂಡಿನ ಸಂಬಂಧ, ಮತಮಾನ್ಯಗಳ ನಿರಾಕರಣೆ, ವಿಡಂಬನೆ ಮುಂತಾದ ಸಾಮಾಜಿಕ ನೆಲೆಯಿಂದ ಹಾಗೂ ಭಾಷಿಕ ನೆಲೆಯಿಂದ ಮತ್ತು ಆಧ್ಯಾತ್ಮದ ನೆಲೆಯಂತಹ ವಿವಿಧ ನೆಲೆಗಳಲ್ಲಿ ಅಡಿಗರು ಅಲ್ಲಮನನ್ನು ಅನುಸಂಧಾನಿಸಿಕೊಂಡಿರುವ ಬಗೆಯನ್ನು ಈ ಪ್ರಸ್ತುತ ಅಧ್ಯಾಯದಲ್ಲಿ ವಿವರಿಸಲು ಪ್ರಯತ್ನಿಸುತ್ತೇನೆ.

(ಎ) ಸಾಮಾಜಿಕ ಮತ್ತು ಭಾಷಿಕ ನೆಲೆಯಲ್ಲಿ ಅಲ್ಲಮನ ಅನುಸಂಧಾನ

ಸಾಮಾಜಿಕ ನೆಲೆಯಲ್ಲಿ:

ಅಡಿಗರ ಕವನಗಳನ್ನು ಮುಂದಿಟ್ಟುಕೊಂಡು ಅಲ್ಲಮನ ಅನುಸಂಧಾನವನ್ನು ನೋಡ ಹೊರಟರೆ ನಮಗೆ ಮೊದಲಿಗೆ ಮತಮಾನ್ಯಗಳ ವಿಡಂಬನೆ, ವೇದ, ಧರ್ಮಶಾಸ್ತ್ರ ಮುಂತಾದವುಗಳ ಟೀಕೆ, ಹಿರಿಯರ ಟೀಕೆ, ಗಂಡು-ಹೆಣ್ಣಿನ ಸಂಬಂಧಗಳಲ್ಲಿ ಪ್ರೇಮ, ವಿರಹಯಾತನೆ ಇವುಗಳು ಕಾಣಸಿಗುತ್ತವೆ. ಅಲ್ಲಮನ ಅರಿವು ಅಡಿಗರ ಕವನಗಳಲ್ಲಿಯೂ ಅಲ್ಲಲ್ಲಿ ವ್ಯಕ್ತವಾಗುವುದನ್ನು ಕಾಣಬಹುದಾಗಿದೆ. ಅಡಿಗರಿಗೆ ಬಹುಮುಖ್ಯ ಕಾಡಿರುವ ಸಂಗತಿಯೆಂದರೆ ಕಾಮ. ಕಾಮವನ್ನು ಕುರಿತು ಅತಿಯಾದ ಆಲೋಚನೆಯನ್ನು ತಮ್ಮ ಕವಿತೆಗಳಲ್ಲಿ ಮಾಡಿದ್ದಾರೆ. ಅಲ್ಲಮನಂತೆಯೇ ಅಡಿಗರೂ ಕಾಮದಿಂದ ಬಿಡುಗಡೆ ಹೊಂದಲು ಹವಣಿಸಿದ್ದಾರೆ.

ಅಡಿಗರು ತಮ್ಮ "ಕಟ್ಟುವೆವು ನಾವು" ಕವನ ಸಂಕಲನದ 'ಸುಲಿಗೆಯೆಂಬ ಯಾಗ' ಕವಿತೆಯಲ್ಲಿ –

ಸ್ವಾರ್ಥದ ವೇದಿಕೆಯಲಿ ನಿರ್ದಯತೆಯ
ಯಜ್ಞಕುಂಡ ಹೂಡಿ,
ವಿಷಯ ವಿಲಾಸದ ಬೆಂಕಿಯೊಟ್ಟಿದರು
ಭೋಗದಾಜ್ಯ ನೀಡಿ,
ಸುಲಿಗೆಯಾಗವನು ಯಜಿಸಿದರೀ ಭೂ-
ಯಜ್ಞ ಶಾಲೆಯಲ್ಲಿ
ಗುರುಗಳು, ರಾಜರು, ವಣಿಜರು, ದುರ್ಬಲ
ದೀನ ಮಾನವಾಳಿ
ಧರ್ಮಶಾಸ್ತ್ರಗಳ ಮಧ್ಯ ಕುಡಿದು ಮೈ
ಮರೆಯಿತು ಪಶುವಾಗಿ;
ಯೂಪಸ್ತಂಭವೇ ದೇವರ ಬಿಂಬವೋ
ಎಂದು ಭ್ರಮಿಸಿಬಾಗಿ;
ಕೊರಲನಿರಿದರೂ ಕೆರಳಲಿಲ್ಲ; ನೆ

ತ್ತರನೆ ಹೀರಿ ಹೀರಿ
ಊದಿಕೊಂಡರೂ ಒಡೆಯಲಿಲ್ಲವೋ
ಧರ್ಮವಾಕ್ಯ ಮೀರಿ!

ಎಂದು ಸ್ವೇಚ್ಛಾಚಾರದ ದುಷ್ಕೃತ್ಯಗಳಿಂದ, ಸರ್ವಾಧಿಕಾರದ ಧೋರಣೆಯಿಂದ ಸಮಾಜದ ಕೆಳಸ್ಥರದ ಜನರನ್ನು ತಮ್ಮ ಸ್ವಾರ್ಥ ಸುಖಕ್ಕಾಗಿ ತುಳಿಯುತ್ತಿರುವುದನ್ನು ಕಂಡರಿಸಿದ್ದಾರೆ. ಇಲ್ಲಿ ಸಮಾಜದ ಜನರ ಬದುಕು ನರಕವಾಗಿದೆ. ರಾಜ, ಗುರು, ವಣಿಜ, ಶಾಸ್ತ್ರಿಗಳು ಮುಂತಾದವರು ಧರ್ಮದ ಹೆಸರಿನಲ್ಲಿ ನರಹಿಂಸೆ ನಡೆಸಿದ್ದಾರೆ ಎಂದು ಅಡಿಗರು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಅದನ್ನೇ ಅಲ್ಲಮ

ವೇದ ವೇದಿಸಲರಿಯದೆ ಕೆಟ್ಟವು,
ಪುರಾಣ ಪೂರೈಸಲರಿಯದೆ ಕೆಟ್ಟವು,
ಶಾಸ್ತ್ರ ಸಾಧಿಸಲರಿಯದೆ ಕೆಟ್ಟವು,
ಹಿರಿಯರು ತಮ್ಮ ತಾವರಿಯದೆ ಕೆಟ್ಟರು,
ತಮ್ಮ ಬುದ್ಧಿ ತಮ್ಮನೆ ತಿಂದಿತ್ತು,
ನಿಮ್ಮನೆತ್ತ ಬಲ್ಲರು ಗುಹೇಶ್ವರ (ಅ.ವ.ಚಂ.324)

ಎಂದು ಹೇಳುತ್ತಾನೆ. ಮತ್ತೊಂದು ವಚನ 'ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರಗೋಷ್ಠಿ, ...(465)' ಎಂದು ವೇದ, ಪುರಾಣ, ಧರ್ಮಶಾಸ್ತ್ರ ಹಾಗೂ ಹಿರಿಯರನ್ನು ವಿಡಂಬನೆಗೆ ಒಳಪಡಿಸಿದ್ದಾನೆ. ಅಲ್ಲಮನಿಗೆ ತಮ್ಮ ಶೈವ ಧರ್ಮದ ಹಿರಿಯರ ಮೇಲೆ ಒಂದು ರೀತಿಯ ವ್ಯಗ್ರತೆ, ಸಿಟ್ಟು, ಅಸಹನೆಯಿದೆ. ಅಡಿಗರು ಅದೇ ಕವನದಲ್ಲಿ

ವಿಧಿನಿಷೇಧಗಳ ಕಟ್ಟು ಕಟ್ಟಳೆಯ
ದೊಡ್ಡಿಯನ್ನು ತೆರೆದು,
ಜಾತಿನೀತಿಗಳ ಮುಳ್ಳು ಬೇಲಿಯನು
ಸುತ್ತು ಮುತ್ತು ಬಿಗಿದು
ದೀನದಲಿತ ನರಪಶು ಸಂಘಾತವ
ಒಳಗೆ ಕೂಡಿಸಿಟ್ಟು
ಅರಸುತನದ ಹಿರಿಗಾವಲಿಟ್ಟು
ಕುಣಿ ಕುಣಿದರು ಮೈಬಿಟ್ಟು!

ಎಂದು ಹೇಳುತ್ತಾರೆ. ಮತೀಯವಾದವನ್ನು ನಿರಾಕರಿಸುತ್ತಾ ಕೋಮು ಸೌಹಾರ್ದತೆಯನ್ನು, ಭ್ರಾತೃತ್ವವನ್ನು ಸಮಾಜದಲ್ಲಿ ಸಮಾನತಾ ಭಾವನೆಯನ್ನು ಸ್ಥಾಪಿಸಲು ಆಶಿಸುತ್ತಾರೆ. ವಿಧಿ ನಿಷೇಧಗಳನ್ನು ಹೇರುವ, ಕಟ್ಟುಕಟ್ಟಳೆಗಳನ್ನು ವಿಧಿಸುವ ಜಾತಿಯ ವಿಷಬೀಜಗಳ ಬಿತ್ತುವ ಸಮಾಜದ ಪ್ರಮುಖರನ್ನು, ಹಿರಿಯರನ್ನು ಕವಿ ಟೀಕಿಸುತ್ತಾನೆ.

ಧರೆಯ ಮೇಲುಳ್ಳ ಅರು ಹಿರಿಯರೆಲ್ಲರೂ
ಮರುಳುಗೊಂಡಾಡುತ್ತಿದ್ದಾರೆ ನೋಡಾ!
ಮಂಜಿನ ಮಡಕೆಯೊಳಗೆ ರಂಜನೆಯ ಭಂಡವ ತುಂಬಿ
ಅಂಜದೆ ಪಾಕವ ಮಾಡಿಕೊಂಡು
ಭಂಡದ ಮಾರುತ್ತಿಪ್ಪರು ನೋಡಾ!
ಸಂಜೀವಿನಿಯ ಬೇರ ಕಾಣದೆ
ಮರಣಕ್ಕೊಳಗಾದರು ಗುಹೇಶ್ವರನರಿಯದ
ಭವಭಾರಕರೆಲ್ಲರೂ (467)

ಈ ವಚನದಲ್ಲಿ ಅಲ್ಲಮನಿಗೂ ಕೂಡ ತನ್ನ ಸಾಂಪ್ರದಾಯಿಕ ನೆಲೆಯ ಹಿರಿಯರ ಅಥವಾ ಶೈವ ಹಿರಿಯರ ಬಗ್ಗೆ ಒಟ್ಟಾರೆಯಾಗಿ ಪರಂಪರೆಯ ಕಲ್ಪನೆಯ ಬಗ್ಗೆ ವಿರೋಧವಿದೆ. "ಹಿರಿಯರೇ ಪರಂಪರೆಯ ಸಾರರೂಪಿಗಳು, ಅವರೇ ಅದಕ್ಕೆ ಅಂತಿಮಾಧಿಕಾರಿಗಳು ಎಂಬ ನಿಲುವನ್ನು ಪ್ರಭು ಮತ್ತೆ ಮತ್ತೆ ಗೇಲಿಮಾಡುತ್ತಾನೆ. ಹಿರಿಯರನ್ನು ಇಷ್ಟು ಉಗ್ರವಾಗಿ ವಿರೋಧಿಸುವ ಇನ್ನ್ಯಾವ ವಚನಕಾರರನ್ನೂ ಕಾಣಲಾಗುವುದಿಲ್ಲ."[1] ಎಂಬ ಮಾತು ಅಲ್ಲಮಪ್ರಭುವಿನ ವಚನಗಳನ್ನು ಅಭ್ಯಸಿಸುವಾಗ ನಮಗೆ ತಿಳಿಯುತ್ತದೆ. ಅಲ್ಲಮಪ್ರಭು ಮತ್ತೊಂದು ವಚನದಲ್ಲಿ ಈ ಹಿರಿಯರನ್ನು ಕುರಿತು 'ಆದ್ಯರಲ್ಲ, ವೇದ್ಯರಲ್ಲ, ಸಾಧ್ಯರಲ್ಲದ ಹಿರಿಯರ ನೋಡಾ! ತನುವಿಕಾರ, ಮನವಿಕಾರ, ಇಂದ್ರಿಯ ವಿಕಾರದ ಹಿರಿಯರ ನೋಡಾ!'(129) ಎಂದೂ ಗೇಲಿ ಮಾಡಿದ್ದಾನೆ.

ಭಾವ ತರಂಗದ 'ಕಲ್ಲಾಗು ಕಲ್ಲಾಗು', 'ನನ್ನ ಕಣ್ಣಮುಂದೆ ನಿಲ್ಲು', 'ಒಡಲೆಳಸುತಿಹುದು ಜೀವ' ಈ ಕವನಗಳಲ್ಲಿ ಅಲ್ಲಮನ ಜೀವನದಲ್ಲಾದ ಅನುಭವ ಸಾಮ್ಯತೆಯನ್ನು ಕಾಣಬಹುದು.

ಅಲ್ಲಮನು ಯಾವ ಮಾಯೆಯಿಂದ ಬಿಡುಗಡೆ ಹೊಂದಿ ಅನಿಮಿಷನ ಮಾರ್ಗದರ್ಶನದಿಂದ ಗುಹೇಶ್ವರನನ್ನು ಹುಡುಕಿ ಹೊರಟನೋ ಹಾಗೆಯೇ ಅಡಿಗರೂ ಮಾಯೆಯಿಂದ ಬಿಡುಗಡೆ ಹೊಂದಬೇಕೆಂಬ ಹಂಬಲವನ್ನು ಇಲ್ಲಿ ವ್ಯಕ್ತಪಡಿಸುತ್ತಾರೆ.

ಮೋಹಮಾಯೆಗೆ ಸಿಲುಕದೆಯೆ ನಿಲ್ಲು, ನಿಲ್ಲು! (ಅ.ಸ.ಕಾ.ಪುಟ 27)•

ಬೆಳಯಲೆಳಸುತಿಹುದು ಮನವು,
ಬೆಳಗ ಬಯಸುತಿರುವುದಾತ್ಮ;
ಇಲ್ಲಿ ಬಾಳಿ, ಇಲ್ಲಿ ಬದುಕಿ,
ಮೋಹದ ಸುಳಿಯೊಳಗೆ ಸಿಲುಕಿ (ಪುಟ 34)

ಅಲ್ಲಮನು ಮಾಯೆಯ ಬಗ್ಗೆ ಬಹಳವಾಗಿ ಆಲೋಚಿಸಿದ್ದಾನೆ. ಅವನು ತನ್ನ ಅನೇಕ ವಚನಗಳಲ್ಲಿ ಈ ಮಾಯೆಯ ಬಗ್ಗೆ ಚಿಂತನೆಯನ್ನು ನಡೆಸಿದ್ದಾನೆ. 'ಮಾಯೆ'ಯಿಂದ ಬಿಡುಗಡೆ ಹೊಂದಿದಾಗಲೇ ಬಯಲು, ಮುಕ್ತಿ ಸಾಧ್ಯ ಎಂದು ಅಲ್ಲಮ ಅಭಿಪ್ರಾಯಪಟ್ಟಿದ್ದಾನೆ. ಮಾಯೆ ಎಂಬುದಕ್ಕೆ ತನ್ನದೇ ಆದ ಹೊಸ ಅರ್ಥಗಳನ್ನು ನೀಡಿದ್ದಾನೆ. [ನೋಡಿ: ವಚನ ಸಂಖ್ಯೆ. –14.22.23.24.348.418]

•ಇನ್ನು ಮುಂದೆ ಈ ಅಧ್ಯಾಯದ ಕವನಗಳ ನಂತರ ಬರುವ ಪುಟಸಂಖ್ಯೆಗಳು 'ಅಡಿಗರ ಸಮಗ್ರ ಕಾವ್ಯ' (ಅ.ಸ.ಕಾ)ದ ಪುಟಸಂಖ್ಯೆಗಳಾಗಿರುತ್ತವೆ.

"ನಡೆದು ಬಂದ ದಾರಿ" ಸಂಕಲನದ 'ಅಲ್ಲಾಗಲಿ' ಕವನದಲ್ಲಿ

ಅಲ್ಲಾಗಲಿ ಅಥವಾ ಇಲ್ಲಾಗಲಿ
ಸಲ್ಲದೆನ್ನ ಬೇಡ-
ಒಳ್ಳಿತು-
ಎಲ್ಲೂ ಒಂದೆ ನೋಡ(ಪುಟ 141) ಎಂದು ಅಡಿಗರು ಹೇಳುತ್ತಿದ್ದರೆ, ಅಲ್ಲಮ

ಕೊಟ್ಟ ಕುದುರೆಯನೇರಲರಿಯದೆ
ಮತ್ತೊಂದು ಕುದುರೆಯ ಬಯಸುವವರು
ವೀರರೂ ಅಲ್ಲ, ಧೀರರೂ ಅಲ್ಲ(127) ಎಂದು ಹೇಳುತ್ತಾನೆ.

ಅಡಿಗರು ಒಳ್ಳೆಯದು ಎಲ್ಲಿರುತ್ತದೆಯೋ ಅಲ್ಲಿಗೆ ಮೊದಲು ಸಲ್ಲಬೇಕು ಎಂಬ ಆಶಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಅಲ್ಲಮನೂ ಕೂಡ ತನ್ನ ಈ ವಚನದಲ್ಲಿ ಅದೇ ಆಶಯವನ್ನು ವ್ಯಕ್ತಪಡಿಸಿ ಎಲ್ಲಿಯೂ ಸಲ್ಲದವರನ್ನು ವೀರರೂ ಅಲ್ಲ, ಧೀರರೂ ಅಲ್ಲ ಎಂದು ಹೀಗಳೆಯುತ್ತಾನೆ. ಆ ಮೂಲಕ ತನ್ನನ್ನು ತಾನು ಅರಿಯುವುದು, ಅರಿವಿನ ಚಿಂತನೆಯನ್ನು ನಡೆಸುವುದು ಮುಖ್ಯವಾಗುತ್ತದೆ ಎನ್ನುವುದು ಇವರಿಬ್ಬರ ಆಶಯವಾಗಿದೆ.

ನಿಜವ ನುಡಿ ಎನ್ನುವ ಕವನದಲ್ಲಿ –

ಮನದ ತೆರೆಯೋಳಿಯಲಿ ಬುದ್ಧಿ ರಚಿಸುವ ಕಾಮ
ನಂಬನ್ನು ತೋರಬೇಡ;
ಅಲ್ಲಿ ಬೀಸುವ ಘೋರ ನಿಶ್ಚಯ ಸಮೀರವನೆ
ನೋಡೆಂದು ಹೇಳಬೇಡ!(ಪುಟ 176)

ಎಂದು ಅಡಿಗರು ಈ ಮೇಲಿನ ಸಾಲುಗಳ ಮೂಲಕ ಕಾಮದಿಂದ ದೂರವಾಗುವ ಆಶಯವನ್ನು ವ್ಯಕ್ತಪಡಿಸುತ್ತಿದ್ದಾರೆ. ನಿಶ್ಚಲವಾದ ಮನಸ್ಸನ್ನು ವಿಷಯಾಸಕ್ತಿಗಳ ಕಡೆಗೆ ಕರೆದುಕೊಂಡು ಹೋಗದಂತೆ ಕಾಮನನ್ನು ಕೇಳಿಕೊಳ್ಳುತ್ತಿದ್ದಾರೆ. ಅಲ್ಲಮಪ್ರಭು ತನ್ನ ಅನೇಕ ವಚನಗಳಲ್ಲಿ ಈ ಕಾಮ ನಿಗ್ರಹವನ್ನು ಕುರಿತು ಮಾತನಾಡಿದ್ದಾನೆ. ಅಲ್ಲಮನಿಗೆ ಕಾಮವನ್ನು ನಿಗ್ರಹಿಸುವುದೇ ಮುಖ್ಯ ಸಂಗತಿಯಾಗಿದೆ.

ಅಮರಾವತಿಯ ಪಟ್ಟಣದೊಳಗೆ
ದೇವೇಂದ್ರನಾಳುವ ನಂದನವಯ್ಯ!
ಅತ್ತ ಸಾರೆಲೆ ಕಾಮ ಮೋಹವೆ ನಿನಗೆ?
ಲೋಕಾದಿ ಲೋಕವನೆಲ್ಲವ ಮರುಳು ಮಾಡಿದೆ;
ಕಾಮ, ಗುಹೇಶ್ವರ ಲಿಂಗವನಜಿ ಭೋ! (131)

ಎಸೆಯದಿರು, ಎಸೆಯದಿರು; ಕಾಮ,
ನಿನ್ನ ಬಾಣ ಹುಸಿಯಲೇಕೋ?

ಕಾಮ ಕ್ರೋಧ ಲೋಭ ಮೋಹ
ಮದ ಮತ್ಸರ ಇದು ಸಾಲದೆ ನಿನಗೆ?
ಗುಹೇಶ್ವರ ಲಿಂಗದ ವಿರಹದಲ್ಲಿ ಬೆಂದವರ
ಮರಳಿ ಸುಡಲುಂಟೆ ಮರುಳು ಕಾಮಾ! (147)

ಎಂದು ಅಲ್ಲಮ ಕಾಮನನ್ನು ಆ ಸಲುವಾಗಿ ಬೇಡಿಕೊಂಡಿದ್ದಾನೆ, ಮರುಳು ಕಾಮ ಎಂದು ವ್ಯಂಗ್ಯವನ್ನು ಕೂಡ ಮಾಡಿದ್ದಾನೆ. ಅಲ್ಲದೆ ತನ್ನ 'ಕಾಯವೆಂಬ ಮಹಾಕದಳಿಯ ಗೆಲ್ಲಬಲ್ಲವರನಾರನೂ ಕಾಣೆ(1166) ಎಂಬ ಮತ್ತೊಂದು ವಚನದಲ್ಲಿ ಕಾಯವನ್ನು ಕದಳಿಗೆ ಹೋಲಿಸಿ, ಪಂಚೇಂದ್ರಿಯವನ್ನು ವಿಷಯದ ಮಳೆ ಎಂದು ಹೇಳುತ್ತಾನೆ. ಇದೇ ವಚನದಲ್ಲಿ ವಿಷಯದ ಮಳೆ ತೀವ್ರವಾದಂತೆ ಕಾಮವೆಂಬ ಕೆಂಡದ ಮಳೆ ಅಡಿಯಿಡಬಾರದು ಎಂಬ ಮಾತನ್ನೂ ಹೇಳುತ್ತಾನೆ. ಇಲ್ಲಿ ಮಳೆ ಕಾಮದ ಮಳೆಯಾಗಿ ಬರುವುದು ಬೇಡ ಎಂಬ ಕೋರಿಕೆಯನ್ನು ಅಲ್ಲಮ ಮಾಡುತ್ತಾನೆ.

'ಹಿಮಗಿರಿಯ ಕಂದರ' ಕವನದಲ್ಲೂ ಅಡಿಗರು ಮನುಷ್ಯನಿಗೆ ಇರುವ ಇಂದ್ರಿಯ ಲೋಲುಪತೆಯನ್ನು ಕುರಿತು ಕೆಳಗಿನ ಸಾಲುಗಳಲ್ಲಿ ಹೇಳುತ್ತಾರೆ.

ಕಾಲನಿಟ್ಟಲ್ಲಿ ಕೀಲುಗುದುರೆ ಸವಾರಿ,
ಕೈಚಾಚಿದಲ್ಲೆಲ್ಲ ಸ್ವಿಚ್ಚು, ಸ್ವಿಚ್ಚು;
ಎಲ್ಲಿ ತಿರುಗಿದರಲ್ಲಿ ಅಮೃತ ಸೂಸುವನಲ್ಲಿ–
ಈ ಕಛೇರಿಗೆ ಮನೆಗೆ ಬೆಂಕಿಹಚ್ಚು! (ಪುಟ 228)

ಮನುಷ್ಯನಿಗೆ ಎಲ್ಲಾ ಸುಖಗಳು ಅನಾಯಾಸವಾಗಿ ದೊರೆಯಬೇಕು, ಶ್ರಮವಿರಬಾರದು. ಸದಾ ಅವನು ಲೋಲುಪನಾಗಿ, ಸುಖಿಯಾಗಿ ಜೀವಿಸುತ್ತಿರಬೇಕು ಎಂದು ಬಯಸುತ್ತಿರುತ್ತಾನೆ. ಇಂಥ ಸುಖ ಜೀವನದ ಬಯಕೆಯ ನಿರೀಕ್ಷೆಯಲ್ಲಿ ವಾಸ್ತವದ ಸಂಗತಿಗಳನ್ನು ಮರೆತು ಬಿಡುತ್ತಾನೆ. ಇದನ್ನೇ ಅಲ್ಲಮಪ್ರಭು ಕಟುವಾಗಿ ಟೀಕಿಸುವುದು. ಸಾಧನೆಗೆ ಇಂದ್ರಿಯ ನಿಗ್ರಹವೇ ಅಂತಿಮ ಗುರಿಯಾಗಿ ಇರಬೇಕು ಎನ್ನುವುದು ಪ್ರಭುವಿನ ಪ್ರಮುಖತತ್ವ ಆದ್ದರಿಂದಲೇ ಅವನು 'ಇಂದ್ರಿಯೋದ್ರೇಕದಿಂದ ಒಂದೊಂದು ಪ್ರಾಣಿಯೂ ಪ್ರಳಯವಾಯಿತ್ತು'(715) ಎಂದು ಹೇಳುವುದು. ಅದೇ ವಚನದಲ್ಲಿ ಮುಂದುವರೆಯುತ್ತಾ ಮನುಷ್ಯ ಪ್ರಾಣಿಗಳಿಗೆ ಮರವೆಯು ಆವರಿಸಿ ದೇಹ ಮೋಹ ಭ್ರಾಂತು ಮುಸುಕಿ ಮಾಯೆಯ ಪಾಶಕ್ಕೆ ಒಳಗಾಗುತ್ತಾರೆ ಎಂದು ಹೇಳುತ್ತಾನೆ.

ಅಡಿಗರು ಕಾಮದಿಂದ ದಹನಗೊಳ್ಳುತ್ತಿರುವ ಲೌಕಿಕ ಜಗತ್ತನ್ನು ಕುರಿತು ಹಿಮಗಿರಿಯ ಕಂದರ ಕವಿತೆ ಆರಂಭದಲ್ಲಿ

ಹೊಗೆ, ಬೆಂಕಿ,
ಅಯ್ಯೋ ಹಾಳಾಗ–
ಉರಿ, ಶಖೆ, ತಾಪ;
ಹೊರಗೆ ರಣರಣ ಬಿಸಿಲು, ಒಳಗೆ ಮಾರಣ ಬೆಂಕಿ
ಮಲಗಿತ್ತು ಮನ ಚಿತೆಯ ಮೇಲೆ ಆಫೀಸಿನಲಿ

ಎಂದು ಹೇಳುತ್ತಾರೆ. ಹಿಮಾಲಯ ಪುಣ್ಯಸ್ಥಳ, ತಪೋಭೂಮಿ. ಆದರೆ ಮನುಷ್ಯನಲ್ಲಿ ಕಾಮವಿದ್ದಾಗ ಅಲ್ಲೂ ರಣಬಿಸಿಲಿನ ಅನುಭವ. ಆದ್ದರಿಂದ ಇಂದ್ರಿಯ ನಿಗ್ರಹದಿಂದ ಮಾತ್ರ ಅಲೌಕಿಕ ಜಗತ್ತನ್ನು ಕಾಣಲು ಸಾಧ್ಯ ಎನ್ನುವುದು ಇವರ ಆಶಯವಾಗಿದೆ. ಜೀವಸಖಿ, ನನ್ನ ಮೋಹದ ಮೂರ್ತಿ, ಹೆಣ್ಣು–1, ಹೆಣ್ಣು–2, ಒಲವು, ನಿಜವ ನುಡಿ, ತರಳೆ, ಹನ್ನೆರಡು ವರುಷಗಳು, ಮಾನವ ಹೃದಯವು ಮುಂತಾದ ಕವಿತೆಗಳಲ್ಲಿ ವ್ಯಕ್ತವಾಗಿರುವ ಭಗ್ನ ಪ್ರೇಮ, ಒಲವಿನ ಹಂಬಲ, ಹೆಣ್ಣಿನ ಬಗ್ಗೆ ಸಿಟ್ಟು, ಅಸಹನೆಯನ್ನು ಅಡಿಗರ ತಂಗಿ ಕವನ ದೂರವಾಗಿಸುತ್ತದೆ ಹಾಗೂ ಹೃದಯಕ್ಕೆ ಹಿತವನ್ನು ತರುತ್ತದೆ.

ಕಾಮಲತೆಯು ಇಲ್ಲವಾದಾಗ ಅವಳ ಮೇಲೆ ಇರಿಸಿದ್ದ ಮೋಹದಿಂದ ಅಲ್ಲಮ ಅನುಭವಿಸಿದ ಯಾತನೆಗೆ ಅನಿಮಿಷ ಗುರು ದೊರೆತಾಗ ಇದೇ ಅನುಭವವಾಗುತ್ತದೆ. ಅಲ್ಲಮನ ಅನಿಮಿಷನನ್ನು ಅಡಿಗರು ತಂಗಿಯಲ್ಲಿ ಕಂಡುಕೊಂಡಿದ್ದಾರೆ.

ಒಡ ಹುಟ್ಟಿದವಳು ನೀನಲ್ಲವಾದರು ನನ್ನ
ಬಗೆ ಮುಗುಳಿನ ಬಳಿ ಬೆಳೆದವಳು;
ನಲುಮೆಗೈಯನು ಮೃದು ಮೃದುವಾಗಿ ಸೋಂಕಿಸಿ
ಮುಗಿದ ನನ್ನೆದೆ ಕದ ತೆರೆದವಳು. (ಪುಟ 178)

ಅಱಸುವ ಬಳ್ಳಿ ಕಾಲ ಸುತ್ತಿತ್ತೆಂಬಂತೆ, ಬಯಸುವ ಬಯಕೆ ಕೈ ಸಾರಿದಂತೆ,
ಬಡವ ನಿಧಾನವನೆಡರಿ ಕಂಡಂತೆ, ನಾನಱಸುತ್ತಱಸುತ್ತ ಬಂದು,
ಭಾವಕ್ಕಗಮ್ಯವಾದ ಮೂರ್ತಿಯ ಕಂಡೆ ನೋಡಾ!
ಎನ್ನ ಅಜೀವಿನ ಹರುವ ಕಂಡೆ ನೋಡಾ
ಎನ್ನ ಒಳ ಹೊಱಗೆ ಎಡದೆಱಹಿಲ್ಲದೆ
ಥಳಥಳ ಹೊಳೆವುತಿಪ್ಪ ಅಖಂಡ ಜ್ಯೋತಿಯ ಕಂಡೆ ನೋಡಾ
ಕುಱುಹಳಿದ ಕರಸ್ಥಳದ ನಿಬ್ಬೆಱಗಿನ ನೋಟದ ಎನ್ನ ಪರಮಗುರುವ ಕಂಡು
ಬದುಕಿದೆನು ಕಾಣಾ, ಗೊಹೇಶ್ವರ.(752)

ಅಲ್ಲಮನು ವಿರಹದ ಯಾತನೆಯಲ್ಲಿ ಬೇಯುತ್ತಿರುವಾಗ ಅವನಿಗೆ ಗುರುವೆಂಬ ಅಖಂಡ ಜ್ಯೋತಿಯೊಂದು ದೊರೆತಾಗ ಆದ ಆನಂದ, ಅಡಿಗರಿಗೆ ತಮ್ಮ ಒಲವಿನ ಹೆಣ್ಣು ದೂರವಾದಾಗ

ಭಗ್ನ ಪ್ರೇಮಿಯಾಗಿ ನಿಂತಾಗ ತಮಗೆ ಆಸರೆಯಾಗಿ ತಂಗಿಯ ರೂಪದಲ್ಲಿ ಜೀವಸೆಲೆಯಾಗಿ ಸಿಗುತ್ತಾಳೆ.

ಮನೆ ಮಠಗಳ ಬಿಟ್ಟು ಜೀವವಾಹಿನಿ
ಸೆಳೆದತ್ತ ಸೆರೆಯಾಗಿ ಸಾಗುತಿರೆ
ಬೆನ್ನು ಬೆನ್ನಿಗೆ ಬಂದು ಸಂತವಿಡುವ ಮಂದ
ಮಾರುತನಂತಿರೆ ನೀ ದೊರೆತೆ (ಪುಟ 178) ಎಂದು ಅಡಿಗರು ಹೇಳುತ್ತಾರೆ.

ಅಲ್ಲಮ – ಪುಣ್ಯವುಳ್ಳ ಕಾಲಕ್ಕೆ ಪಾಷಾಣ ಪರುಷವಪ್ಪುದು ನೋಡಯ್ಯ. ಮಣ್ಣು ಹೊನ್ನಪ್ಪುದು.
ಮುನ್ನಮುನ್ನವೆ ಅಚ್ಚೊತ್ತಿದ ಭಾಗ್ಯವೆನ್ನ ಕಣ್ಣ ಮುಂದೆ ಕಾಣಬಂದಿತ್ತು ನೋಡಾ.
ಮಣ್ಣ ಮರೆಯ ದೇಗುವದೊಳಗೊಂದು ಮಾಣಿಕ್ಯವ ಕಂಡ ಬಳಿಕೆ,
ಇನ್ನು ಮುನ್ನಿನಂತಪ್ಪುದೇ, ಗುಹೇಶ್ವರ?(932) ಎಂದು ಹೇಳುತ್ತಾನೆ.

ಅಡಿಗರ **ತಂಗಿ** ಕವನ ಮರುಭೂಮಿಯ ಬರಡು ನೆಲದಲ್ಲಿ ನೀರಿಗಾಗಿ ಪರಿತಪಿಸುವಂತಹವವನಿಗೆ ಓಯಾಸಿಸ್ ದೊರೆತ ಹಾಗೆ ಮನೆಯನ್ನು ಬಿಟ್ಟು ನಿರಾಶಾವಾದಿಯಾಗಿ, ಬದುಕು ಇಷ್ಟೆ ಎಂದು ತೀರ್ಮಾನಿಸಿ ಹೊರಟವನಿಗೆ, ಬದುಕು ಎನ್ನುವುದು ಬಹುದೊಡ್ಡದು ಎಂದು ಪಾಠ ಕಲಿಸುವಂತೆ ಆಶಾವಾದವನ್ನು ಹುಟ್ಟಿಸುವ ಕವಿತೆಯಾಗಿ ನಮ್ಮ ಮುಂದೆ ಕಾಣುತ್ತದೆ. ನಿರಾಶಾವಾದಿಯಾಗಿ ಅಲೆಯುತ್ತಾ ಸಾಗಿದ ಅಲ್ಲಮನಿಗೂ ಅನಿಮಿಷನ ಕೈಯಲ್ಲಿದ್ದ ಲಿಂಗ ದೊರೆತಾಗ ಆಶಾವಾದಿಯಾಗಿ ತನ್ನ ಬದುಕನ್ನು ಮತ್ತೊಂದು ರೀತಿಯಲ್ಲಿ ಕಂಡುಕೊಂಡವನು.

ಅಡಿಗರು ಭೂಮಿಗೀತ ಕವನದಲ್ಲಿ –

ತೆಗೆದುಕೋ ನೀ ಕೊಟ್ಟ ಎಲ್ಲ ವಸ್ತ್ರವಿಲಾಸ;
ಈ ಕೋಟು, ಈ ಶರಟು, ಈ ಶರಾಯಿ;
ಈ ಭಗ್ನ ಜೋಪಡಿಯು ನಿನ್ನದೇ, ತೆಗೆದುಕೋ;
ಬತ್ತಲಾಗದೆ ಬಯಲು ಸಿಕ್ಕದಿಲ್ಲಿ (ಪುಟ 266)

ಎಂದು ಲೌಕಿಕ ಸುಖಗಳನ್ನು ತ್ಯಜಿಸಿ ಅಲ್ಲಮನ ಶೂನ್ಯಸಾಧನೆಯತ್ತ ಸಾಗುವುದನ್ನು ಹೇಳುತ್ತಿದ್ದಾರೆ. ಮನುಷ್ಯನು ತನ್ನ ಅಹಂಕಾರ, ಲೌಕಿಕ ಸುಖಗಳನ್ನು ಕಳೆದುಕೊಳ್ಳದ ಹೊರತು ಮುಕ್ತಿಗೆ ಅರ್ಹನಾಗುವುದಿಲ್ಲ ಎಂಬ ವಚನಕಾರರ ಭಾವನೆಯನ್ನೇ ಇಲ್ಲಿ ಅಡಿಗರು ವ್ಯಕ್ತಪಡಿಸುತ್ತಿದ್ದಾರೆ. ಅಲ್ಲಮ 'ದಾರಿಗೊಂಡು ಹೋಹವರೆಲ್ಲ ನೀವು ಕೇಳಿರೇ'(479) ಎನ್ನುವ ವಚನದಲ್ಲಿ ಲೌಕಿಕ ವೃತ್ತದಿಂದ ಬಿಡುಗಡೆ ಹೊಂದುವವರನ್ನು ಕುರಿತು ಹೇಳುತ್ತಾನೆ.[2]

ಅಡಿಗರು ಚಿಂತಾಮಣಿಯಲ್ಲಿ ಕಂಡ ಮುಖ ಸಂಕಲನದ 'ಪ್ರೀತಿ' ಎನ್ನುವ ಇನ್ನೊಂದು ಕವಿತೆಯಲ್ಲಿ ಅಹಂಕಾರವನ್ನು ಕಳೆದುಕೊಳ್ಳುವ ವಿಚಾರವನ್ನು ಪ್ರಸ್ತಾಪಿಸಿದ್ದಾರೆ.

ಅಹಂಕಾರ ಮುದ್ರೆ ಕಿತ್ತೆಸೆದು ನೋಡಿದರೊಳಗೆ
ತಲವಿರದ ಪಾತಾಳದ ಅಗಾಧ ಸೊನ್ನೆ;
ಸೊನ್ನೆ ಹುಡುಕುತ್ತ ತಿರುಗುವುದು ತನ್ನನ್ನು ತಾನೇ ಹೊರಗೆ;
ಸಿಕ್ಕುವುದು ಇನ್ನೊಂದು ಭಾರೀ ಸೊನ್ನೆ. (ಪುಟ 447)

ಇಲ್ಲಿ ಅಡಿಗರು ಮನುಷ್ಯನ ಅಂತರಂಗ-ಬಹಿರಂಗಗಳೆರಡರಲ್ಲಿಯೂ ಅಹಂಕಾರವನ್ನು ಕಳೆದುಕೊಂಡ ನಂತರವೇ ಶೂನ್ಯ ಸ್ಥಿತಿಯನ್ನು, ಬಯಲು, ಮುಕ್ತಿ ಸ್ಥಿತಿಯನ್ನು ತಲುಪಲು ಸಾಧ್ಯ ಎಂದು ಹೇಳುತ್ತಿದ್ದಾರೆ. ಅಹಂಕಾರ ಎನ್ನುವುದು ವಚನಕಾರರಲ್ಲಿ ಬಹುಮುಖ್ಯ ವಿಚಾರವಾಗಿ ಪ್ರಸ್ತಾಪವಾಗುತ್ತದೆ. ಅಹಂಕಾರವನ್ನು ಕಳೆಯದವನು ಶಿವಶರಣರಾಗಲಾರರು, ಮುಕ್ತಿಯನ್ನು ಹೊಂದಲಾರರು ಅವರು ಭವಿಗಳಾಗೇ ಉಳಿದಿರುತ್ತಾರೆ ಎನ್ನುವ ನಂಬಿಕೆಯಿದೆ. ಅಲ್ಲಮಪ್ರಭು ಅಹಂಕಾರವನ್ನು ಕುರಿತು ಈ ರೀತಿ ಹೇಳುತ್ತಾನೆ.

ನಾನೆಂಬಹಂಕಾರ ತಲೆದೋಱಿದಲ್ಲಿ
ಅಟಮಟ ಕುಟಿಲ ಕುಹಕವೆಂಬ ಬಿರುಗಾಳಿ ಹುಟ್ಟಿತ್ತು.
ಆ ಬಿರುಗಾಳಿ, ಹುಟ್ಟಲೊಡನೆ ಜ್ಞಾನಜ್ಯೋತಿ ಕೆಟ್ಟಿತ್ತು.
ಜ್ಞಾನಜ್ಯೋತಿ ಕೆಡಲೊಡನೆ ನಾ ಬಲ್ಲೆ ಬಲ್ಲಿದರೆಂಬ
ಅಱು ಹಿರಿಯರೆಲ್ಲರು ತಾಮಸಕ್ಕೊಳಗಾಗಿ ಸೀಮೆದಪ್ಪಿ ಕೆಟ್ಟರು ಕಾಣಾ ಗೊಹೇಶ್ವರ(747)

ಮನುಷ್ಯನಿಗೆ ನಾನು ಎಂಬ ಅಹಂಕಾರ ಬಂದಾಗ ಅದು ಅವನ ಜ್ಞಾನಜ್ಯೋತಿಯನ್ನು ಮೋಸ, ವಂಚನೆ ಮುಂತಾದ ಬಿರುಗಾಳಿಯಿಂದ ಕೆಡಿಸುತ್ತದೆ. ಆಗ ವ್ಯಕ್ತಿಯ ಅಧಃಪತನವಾಗುತ್ತದೆ ಎಂದು ಅಲ್ಲಮ ಹೇಳುತ್ತಾನೆ. ಮತ್ತೊಂದು ವಚನದಲ್ಲಿ 'ಅಹಂಕಾರವೆಂಬ ಅಲಗ ಹಿಡಿದು ಮಾಡುವ ಭಕ್ತಿ ತನ್ನನೆ ಇಱಿವುದು' (1020) ಎಂದೂ ಹೇಳುತ್ತಾನೆ.

ಅಡಿಗರು ತಮ್ಮ ಪ್ರಾರ್ಥನೆ ಪದ್ಯದಲ್ಲಿಯೂ ಈ ರೀತಿಯಾಗಿ ಪ್ರಾರ್ಥಿಸುತ್ತಾ

ಈ ಸಣ್ಣ ದೊಂದಿಯನ್ನೆತ್ತಿ ಹೊತ್ತಿನ ಮುಖಕ್ಕೆ
ಬೆಳಕು ಹರಿದದ್ದು ತನ್ನಿಂದಲೇ ಎಂದು ತನ್ನೊಳಗೆ
ಮುಖ ಕಿರಿವ, ನೆಣ ಬಿರಿವ, ಬಗ್ಗಲಾರದ ಬೊಜ್ಜ,
ಕೋಲು ನಡಿಗೆ ಕವಾತು ಕಲಿತ ಕೊಬ್ಬಿನ ಹುಂಜ;
ವಾಸಿಮಾಡಯ್ಯ ಈ ಜಲೋದರದ ಭಾರದ ಜಡ್ಡ.(ಪುಟ 275)

ಮೇಲಿನ ಸಾಲುಗಳಲ್ಲಿ ವ್ಯಕ್ತಿಯಲ್ಲಿರುವ ಕೊಬ್ಬು, ಅಹಂಕಾರವನ್ನು ಹೇಳುತ್ತಾ ತನ್ನಲ್ಲಿರುವ ಅಹಂಕಾರವನ್ನು ದೂರಮಾಡಿ ಅನುಗ್ರಹಿಸು ಎಂಬ ನಿವೇದನೆಯಿದೆ. ಅಲ್ಲಮನೂ ಕೂಡ ಗುಹೇಶ್ವರನಲ್ಲಿ ಈ ರೀತಿಯ ಪ್ರಾರ್ಥನೆಯನ್ನು ಮಾಡಿದವನಾಗಿದ್ದಾನೆ.

ಅಯ್ಯ, ನೀನೆನಗೆ ಗುರುವಪ್ಪಡೆ, ನಾ ನಿನಗೆ ಶಿಷ್ಯನಪ್ಪಡೆ,
ಎನ್ನ ಕರಣಾದಿ ಗುಣಂಗಳ ಕಳೆದು, ಎನ್ನ ಕಾಯದ ಕರ್ಮವ ತೊಡೆದು
ಎನ್ನ ಪ್ರಾಣನ ಧರ್ಮವ ನಿಲಿಸಿ ನೀನೆನ್ನ ಕಾಯದಲಡಗಿ,
ನೀನೆನ್ನ ಪ್ರಾಣದಲಡಗಿ, ನೀನೆನ್ನ ಭಾವದಲಡಗಿ
ನೀನೆನ್ನ ಕರಸ್ಥಲಕ್ಕೆ ಬಂದು ಕಾರುಣ್ಯವ ಮಾಡು ಗುಹೇಶ್ವರ(53)

ಎಂದು ಬೇಡಿಕೊಳ್ಳುತ್ತಾನೆ. ಜಲೋದರ ಎಂಬ ರೋಗದ ಉಲ್ಲೇಖವನ್ನು ಅಲ್ಲಮನೂ ಮಾಡಿದ್ದಾನೆ. 'ಅಡಿಗಡಿಗೆ ತೊಳೆದು ಕುಡಿದರೆ ಹೊಟ್ಟೆಯ ಜಲಗರಕುತ್ತ ಬೆಳೆಯಿತ್ತೆ'(520) ಎಂದು ಪ್ರಶ್ನಿಸುವ ಅಲ್ಲಮ ಗುಹೇಶ್ವರನನ್ನು ಪೂಜಿಸಿ ಈ ಜಲಗರಕುತ್ತ (ಜಲೋದರ) ರೋಗ ವಾಸಿಯಾಯಿತು ಎನ್ನುತ್ತಾನೆ.

ಅಡಿಗರು ಪ್ರಾರ್ಥನೆ ಪದ್ಯದ ಮೊದಲಿಗೆ

'ಪ್ರಭೂ,
ಪರಾಕು ಪಂಪನ್ನೊತ್ತಿಯೊತ್ತಿ ನಡ ಬಗ್ಗಿರುವ
ಬೊಗಳು ಸನ್ನಿಯ ಹೊಗಳುಭಟ್ಟ ಖಂಡಿತ ಅಲ್ಲ;' ಎಂದು ಹೇಳುತ್ತಿದ್ದಾರೆ.

ಇಲ್ಲಿ ಅಡಿಗರು 'ಪ್ರಭೂ' ಎಂದು ಸಂಭೋಧಿಸಿರುವುದು ಅಲ್ಲಮಪ್ರಭುವನ್ನೇ ಅನಿಸುತ್ತದೆ.[ಕಿ.ರಂ ಒಮ್ಮೆ ಚರ್ಚೆಯಲ್ಲಿ ಈ ಕುರಿತು ಹೇಳಿದ್ದರು.] ಇಲ್ಲಿಯ ನಿವೇದಕ ತಾನು ಎಲ್ಲರಿಗಿಂತ ಹೇಗೆ ಭಿನ್ನ ಎಂದು ಅಲ್ಲಮನಿಗೆ ಹೇಳಿಕೊಳ್ಳುತ್ತಿರುವಂತಿದೆ. ನಿವೇದಕ, ನಾನು ನಿನ್ನಂತೆಯೇ ಹೊಗಳುಭಟ್ಟನಲ್ಲ, ನಾಯಿಯ ಹಾಗಿರುವವನೂ ಅಲ್ಲ, ಇನ್ನೊಬ್ಬರಿಂದ ಸವಾರಿಮಾಡಿಸಿಕೊಳ್ಳುವವನಲ್ಲ, ಪರಾವಲಂಬಿಯೂ ಅಲ್ಲ ಎಂದು ಅಲ್ಲಮಪ್ರಭುವಿಗೇ ಹೇಳುತ್ತಿರುವಂತಿದೆ. ಏಕೆಂದರೆ ಅಲ್ಲಮನೂ ಕೂಡ ನಿಷ್ಠುರವಾದಿಯಾಗಿಯೇ ಇದ್ದವನು, ಯಾರನ್ನೂ ಹೊಗಳಿಕೆಯಿಂದ ಹೊನ್ನಶೂಲಕ್ಕೆ ಏರಿಸಿದವನಲ್ಲ. ಅವನು ಎಲ್ಲವನ್ನೂ ವಿಮರ್ಶಾತ್ಮಕವಾಗಿ ನೋಡಿದವನು, ಪ್ರಶ್ನಿಸಿದವನಾಗಿದ್ದಾನೆ. ಆದ್ದರಿಂದ ಅಡಿಗರು ಇಲ್ಲಿ ಅಲ್ಲಮನಿಗೇ ತಮ್ಮ ಪ್ರಾರ್ಥನೆಯನ್ನು ಸಲ್ಲಿಸುತ್ತಿದ್ದಾರೆ ಎಂದು ಹೇಳಬಹುದು. ಆ ಮೂಲಕ ಇಲ್ಲಿ ಅಲ್ಲಮನನ್ನು ಅನುಸಂಧಾನಿಸುತ್ತಿದ್ದಾರೆ ಎಂದು ಹೇಳಬಹುದಾಗಿದೆ.

ಭಾಷಿಕನೆಲೆಯಲ್ಲಿ ಅಲ್ಲಮನ ಅನುಸಂಧಾನ

ಹನ್ನರಡನೇ ಶತಮಾನದ ಶಿವಶರಣರ ಕ್ರಾಂತಿ ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ ಮಾತ್ರವೇ ಅಲ್ಲದೆ ಭಾಷಿಕವಾಗಿಯೂ ಹೊಸಬದಲಾವಣೆಯನ್ನುಂಟು ಮಾಡಿತು. ಹಿಂದಿನ ಕ್ಲಿಷ್ಟ ಹಳಗನ್ನಡವನ್ನು ಎಲ್ಲರಿಗೂ ಅರ್ಥವಾಗುವ ನವ ಕನ್ನಡಕ್ಕೆ, ಆಡು ಭಾಷೆಗೆ ತಂದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ. ಹೇಳಬೇಕಾದದ್ದನ್ನು ಅತ್ಯಂತ ಸರಳವಾಗಿ ವಚನಕಾರರು ಜನರಿಗೆ ತಮ್ಮ ಚಿಂತನೆಗಳನ್ನು ಮುಟ್ಟಿಸಿದರು. ಆದ್ದರಿಂದಲೇ ಹನ್ನೆರಡನೇ ಶತಮಾನದ ಕ್ರಾಂತಿ ಎಲ್ಲಾ ದೃಷ್ಟಿಕೋನದಿಂದಲೂ ಅತ್ಯಂತ ಯಶಸ್ವಿಯಾದ ಕ್ರಾಂತಿಯಾಗಿ ರೂಪುಗೊಂಡಿತು.

ಡಿ.ಲಿಂಗಯ್ಯನವರು ಕಾವ್ಯಾಸ್ವಾದನ ಕೃತಿಯಲ್ಲಿ ಗುರುತಿಸುವಂತೆ ನವ್ಯ ಕಾವ್ಯದ ಬೀಜ ವಚನ ಚಳುವಳಿಯಲ್ಲಿ ಇದೆ. ಏಕೆಂದರೆ ಅವರೇ ಹೇಳುವಂತೆ ವಚನಗಳಲ್ಲಿ ಸಂಕೀರ್ಣತೆ, ಸಾಂಕೇತಿಕ ಪಟ್ಟು ಸಂಕೀರ್ಣಾರ್ಥದ ಶಕ್ತಿ, ಉಪಮಾ, ರೂಪಕ, ಪ್ರತಿಮಾ ಸಂಪತ್ತು ಎಲ್ಲವೂ ಅಡಕವಾಗಿದೆ. ವಿವಿಧ ಪ್ರತಿಮೆಗಳ ಬಳಕೆಯ ಮೂಲಕವೇ ವಚನಕಾರರು; ತಮ್ಮ ತತ್ವ-ಚಿಂತನೆಗಳನ್ನು ವಚನಗಳ ಮೂಲಕ ಕಟ್ಟಿದ್ದಾರೆ. ಬೆಡಗಿನ ವಚನಗಳಲ್ಲಿ ಪ್ರತಿಮೆ, ಸಂಕೇತಗಳನ್ನು ಹೆಚ್ಚಾಗಿ ಕಾಣಬಹುದಾಗಿದೆ.

ಅಡಿಗರೂ ಕೂಡ ವಚನಕಾರರ ಈ ಮಾರ್ಗವನ್ನೇ ಅನುಸರಿಸಿದವರು. ತಮ್ಮ ಹಳೆಯ ಪದ್ದತಿಯಲ್ಲಿ ಕಾವ್ಯ ರಚನೆಯನ್ನು ಬಿಟ್ಟು ನವ್ಯ ತಂತ್ರದ ಮೊರೆ ಹೋದವರು. ಪ್ರತಿಮೆ, ರೂಪಕ, ಸಂಕೇತಗಳ ಮೂಲಕ ವಿಷಯವನ್ನು ವಸ್ತುನಿಷ್ಠವಾಗಿ, ನೇರವಾಗಿ ತಮ್ಮ ಕಾವ್ಯದಲ್ಲಿ ಅಭಿವ್ಯಕ್ತಿಸಿದವರು. ಅಡಿಗರಿಗೆ ಎಲಿಯಟ್‌ನ ಕಾವ್ಯಬಂಧದ ಪ್ರಭಾವವಾಗಿದೆಯಾದರೂ ಕೂಡ ಅದಕ್ಕೂ ಮೊದಲಿಗೆ ನಮ್ಮಲ್ಲೇ ಇದ್ದ ವಚನ ಸಾಹಿತ್ಯದಲ್ಲಿನ ಬೆಡಗಿನ ವಚನಗಳ ಕಾವ್ಯಬಂಧ ಅತ್ಯಂತ ಪ್ರಭಾವ ಬೀರಿದೆ. ಇದನ್ನು ಹ.ನಂ.ವಿಜಯಕುಮಾರರವರು ತಮ್ಮ 'ಅಲ್ಲಮನ ವಚನ ಪ್ರಕೋಶ' ಕೃತಿಯ ಪ್ರಸ್ತಾವನೆಯಲ್ಲಿ ಖಚಿತಪಡಿಸುತ್ತಾರೆ. "1950ರ ನಂತರದ ಕಾವ್ಯ ಕನ್ನಡ ಕಾವ್ಯಕ್ಕೆ ಏನೇನು ಚಿಕಿತ್ಸೆ ನಡೆಸಿತೋ ಅದೆಲ್ಲವನ್ನೂ ಬಹುಮಟ್ಟಿಗೆ ವಚನಸಾಹಿತ್ಯ, ಕಾವ್ಯ ಪರಿಸರದಲ್ಲಿ ಮಾಡಿದೆ. ಕಾವ್ಯ ಬರೆಯುವುದು ಉದ್ದೇಶವಾಗಿರದ ಅವರ ವಚನ ಸೃಷ್ಟಿ ಸಾಹಿತ್ಯಕ್ಕೆ ಅಪಾರ ಕೊಡುಗೆ. ಭಾಷೆ ಮಾತಿನ ದಾಟಿ, ಮುಕ್ತಲಯ, ಪ್ರತಿಮೆ, ಸಂಕೇತ, ಉಪಮೆ, ರೂಪಕ ಇತ್ಯಾದಿಗಳ ವಚನಗಳಲ್ಲಿ ಪಾಲು ಪಡೆದು ಹೆಚ್ಚಳ ತಂದುಕೊಟ್ಟಿವೆ. ಬೆಡಗಿನ ವಚನಗಳಂತೂ

ಲೈಂಗಿಕ ಪ್ರತಿಮೆ, ವಿರೋಧಾಭಾಸದ ಸಂಕೇತಗಳು, ಪ್ರತಿಮೆಗಳ ಮೂಲಕ ಬಂಧವನ್ನು ಖಚಿತಪಡಿಸಿವೆ" ಎಂದು ಹೇಳುತ್ತಾರೆ.

ಅಡಿಗರ ಮೇಲೆ ಅಲ್ಲಮನ ಭಾಷಾ ಬಳಕೆ ಪ್ರಭಾವ ಬೀರಿದೆ. ಅಲ್ಲಮನು ಬಳಸುವ ಆತ್ಮನಿರಾಕರಣೆಯ ಶೈಲಿ; ರೂಪಕ, ಪ್ರತಿಮೆಗಳ ಸೃಷ್ಟಿ; ಕತ್ತಲೆ-ಬೆಳಕು ಪ್ರತಿಮೆಗಳ ದಟ್ಟ ಪ್ರಯೋಗ; ಸಾವು, ಹಿಂಸೆ, ಯುದ್ಧ, ಪ್ರಳಯಗಳ ಬಳಕೆ; ಅಸಂಬದ್ಧವಾದ ಪ್ರತಿಮಾಲೋಕದ ಸೃಷ್ಟಿ; ಪೂರ್ವಜರ ಅಥವಾ ಶೈವ ಹಿರಿಯರ ಟೀಕೆ; ಭಾಷೆಯನ್ನು ಸಾಂದ್ರಗೊಳಿಸುವ ಗುಣ; ಸಂಕೀರ್ಣಗೊಳಿಸುವ ಗುಣ; ನೇರ ಮಾತಿನ ದಾಟಿ; ದ್ವಂದ್ವ ವಿರುದ್ಧದ ಹೇಳಿಕೆಗಳು; ಭಾಷಿ ಕಲಯದ ಬಳಕೆ; ಅಸಂಖ್ಯ ಪ್ರಾಣಿ-ಪಕ್ಷಿ ಜೀವ ಸಂಕುಲಗಳ ಬಳಕೆ, ಮೂರ್ತ-ಅಮೂರ್ತಗಳನ್ನು ಬೆಸೆಯುವ ಕ್ರಮ ಇವು ಅಡಿಗರ ಕಾವ್ಯಕ್ಕೆ ಪ್ರೇರಕ ಶಕ್ತಿಯಾಗಿದೆ.

ಕತ್ತಲೆ-ಬೆಳಕು ಪ್ರತಿಮೆಗಳ ಬಳಕೆ : ಅಡಿಗರು ತಮ್ಮ ಅನೇಕ ಕವನಗಳಲ್ಲಿ ಕತ್ತಲೆ-ಬೆಳಕು ಪ್ರತಿಮೆಗಳ ಬಳಕೆಯನ್ನು ಅಲ್ಲಮನಂತೆ ಯಥೇಚ್ಛವಾಗಿ, ಪರಿಣಾಮಕಾರಿಯಾಗಿ ಬಳಸುತ್ತಾರೆ. 'ಗೊಂದಲಪುರ' ಕವನದ ಮೊದಲಲ್ಲೇ ಕಗ್ಗತ್ತಲಿನ ಚಿತ್ರಣವಿದೆ.

'ಮಬ್ಬು,
ಕಾಮಾಲೆ ಕತ್ತಲು
ಬಂದು ಮೈಮೇಲೆ ಅಬ್ಬರಿಸಿ ಎದ್ದೆದ್ದು ಬಿದ್ದು ಬೊಬ್ಬರಿದಲೆವ ಕಾರ್ಮೋಡ'

ಈ ಇಡೀ ಕವನದಲ್ಲಿ ಕತ್ತಲಿನ ನಾನಾ ರೀತಿಯ ವರ್ಣನೆಯನ್ನು ಮಾಡುತ್ತಾರೆ. ಕತ್ತಲೆ ಮುಸುಕಿತ್ತು, ಅಮಾಸೆ ಕತ್ತಲಿನ ಲೋಕಸ್ಸು, ಕತ್ತಲೆ ಸರೋವರದ ಹಾಗಿತ್ತು, ಕೋಣಗಳನ್ನು ಕಟ್ಟಿರುವ ಯಮನ ಕೋಚು ನುಗ್ಗಿ ಬಂದ ಹಾಗೆ ಕತ್ತಲು ನುಗ್ಗಿ ಬಂದಿತ್ತು, ಮುಂತಾದ ಕತ್ತಲಿನ ವರ್ಣನೆಯಲ್ಲಿ ಪ್ರತಿಮೆಗಳು ಕಿಕ್ಕಿರಿದಿವೆ.

ಅಲ್ಲಮ ಬೆಳಕಿಗಿಂತ ಕತ್ತಲೆಯ ಪ್ರತಿಮೆಯನ್ನೇ ಹೆಚ್ಚು ಬಳಸುತ್ತಾನೆ. "ಶೈವದಲ್ಲಿ ಪ್ರಕಾಶಕ್ಕೆ, ಬೆಳಗಿಗೆ ಅತ್ಯಂತಿಕ ಪ್ರಾಮುಖ್ಯತೆ ಇದ್ದರೂ, ಆ ಮುಖ್ಯ ಮಾರ್ಗ ಅರ್ಥಗಳಿಗಿಂತ ಭಿನ್ನವಾದ ಅನುಭವವನ್ನು ಅಲ್ಲಮನಲ್ಲಿ ಕಾಣಬಹುದು. ಶೈವ ದರ್ಶನವೇ ಬೆಳಗಿನ ಮೀಮಾಂಸೆ, ಬೆಳಗಿನ ಆರಾಧನೆ ಎನ್ನಬಹುದಾದರೂ ಅದಕ್ಕಿಂತ ಭಿನ್ನವಾದ ರೀತಿಯ ವಚನಗಳನ್ನು ಕಾಣಬಹುದು ಅಥವಾ ಕತ್ತಲೆ-ಬೆಳಕಿನ ದ್ವಂದ್ವವನ್ನು ಅಂತಿಮವಾಗಿ ಕೃತಕ ಎಂದು ಭಾವಿಸುವ ಅದ್ವಯದ ದ್ವಂದ್ವಾತೀತ ಅಭಿವ್ಯಕ್ತಿ ಇರಬೇಕು ಇದು[3] ಎಂದು ಡಿ.ಆರ್.ನಾಗರಾಜ್ ಹೇಳುತ್ತಾರೆ. ಇದು

ಅಲ್ಲಮನ ವಚನಗಳಲ್ಲಿ ಶೈವದರ್ಶನ ಹೇಳುವ ಬೆಳಗಿನ ಕಲ್ಪನೆಗಿಂತ ವಿರುದ್ಧವಾದ ಕತ್ತಲಿನ ಪ್ರತಿಮೆಯನ್ನು ಬಳಸುವಂತದ್ದಾಗಿದೆ.

'ಕಂಗಳ ಮುಂಗಣ ಕತ್ತಲೆಯಿದೇನೋ'(316), 'ಕಂಗಳ ಬೆಳಗ ಕಲ್ಪಿಸಬಾರದು'(27) ಎಂದು ಹೇಳುವ ಸಾಲುಗಳಲ್ಲಿ ಅಲ್ಲಮನು ಕತ್ತಲೆಯನ್ನು ಕುರಿತು ಮಾತನಾಡುತ್ತಾನೆ. ಅಲ್ಲಮನಿಗೆ ಆ ಕತ್ತಲು ಅಜ್ಞಾನದ ಸಂಕೇತವಾಗಿ, ಮರೆವಿನ ಸಂಕೇತವಾಗಿ ಮತ್ತು ಮಾಯಾಮಿಥ್ಯೆಯ ಸಂಕೇತವಾಗಿ ಕಾಣಿಸುತ್ತದೆ.

'ಸತ್ತ ಕೋಳಿ ಎದ್ದು ಕೂಗಿತ್ತಕಂಡೆ.................ಕತ್ತಲೆ ಬೆಳಗಾಯಿತ್ತ ಕಂಡೆ'(439) ಎನ್ನುವಲ್ಲಿ, 'ಬೆಳಗು ಕತ್ತಲೆಯ ನುಂಗಿ, ಒಳಗೆ ತಾನೊಬ್ಬನೆಯಾಗಿ ಕಾಬಕತ್ತಲೆಯ ಕಳೆದುಳಿದು ನಿಮಗಾನು ಗುರಿಯಾದೆ'(675) ಎನ್ನುವಲ್ಲಿಯೂ ವಿಶಿಷ್ಟವಾದ ಕತ್ತಲೆ-ಬೆಳಕಿನ ಪ್ರತಿಮೆಯನ್ನು ಬಳಸುತ್ತಾನೆ. ಈ ನಿಟ್ಟಿನಲ್ಲಿ ಅಡಿಗರೂ ಕೂಡ ಕತ್ತಲೆಯನ್ನು ತಮ್ಮ ಕವನಗಳಲ್ಲಿ ಬಳಸುತ್ತಾರೆ. ಒಂದು ರೀತಿಯಲ್ಲಿ ಕತ್ತಲೆ-ಬೆಳಕಿನ ಪ್ರಸ್ತಾಪವಿರದ ಅಡಿಗರ ಕವನಗಳೇ ಇಲ್ಲ ಎನ್ನಬಹುದು. ಆದ್ದರಿಂದ ಅಡಿಗರೇ ಹೇಳುವಂತೆ 'ಕತ್ತಲಿಗೆ ಹತ್ತೆ ತಲೆ? ನೂರಾರೆ? ಅದು ಅಸಂಖ್ಯ'.

ಅಸಂಬದ್ಧವಾದ ಪ್ರತಿಮಾ ಲೋಕದ ಸೃಷ್ಟಿ: ಅಲ್ಲಮ ತನ್ನ ಭಾಷೆಯ ಬಳಕೆಯಲ್ಲಿ ದ್ವಂದ್ವ-ವೈರುಧ್ಯ ಪದಗಳ ಪ್ರಯೋಗ ಮಾಡುತ್ತಾನೆ. ಹಾಗೆಯೇ ಒಂದು ರೀತಿಯ ಅಸಂಬದ್ಧ, ವಿಚಿತ್ರ, ಅಸಾಧ್ಯ ಹಾಗು ವೈರುಧ್ಯಾತ್ಮಕ ಮಾದರಿ ಎನ್ನಬಹುದಾದ ವಾಕ್ಯರಚನೆಯನ್ನು ಅಲ್ಲಮ ತನ್ನ ವಚನಗಳಲ್ಲಿ ಬಳಸುತ್ತಾನೆ.

ಮನ ಬಸುರಾದರೆ ಕೈ ಬೆಸಲಾಯಿತ್ತ ಕಂಡೆ;
ಕರ್ಪೂರದ ಕಂಪ ಕಿವಿ ಕುಡಿಯಿತ್ತ ಕಂಡೆ
ಮುತ್ತಿನ ಥಾಳವ ಮೂಗು ನುಂಗಿತ್ತ ಕಂಡೆ
ಕಂಗಳು ಹಸಿದು ವಜ್ರವ ನುಂಗಿತ್ತ ಕಂಡೆ
ಒಂದು ನೀಲದೊಳಗೆ ಮೂಱುಲೋಕವಡಗಿತ್ತ ಕಂಡೆ, ಗುಹೇಶ್ವರ(101)

ಅಲ್ಲಮ ಈ ವಚನದಲ್ಲಿ ಆ ರೀತಿಯ ಅಸಂಬದ್ಧವಾದ ಪ್ರತಿಮಾ ಸೃಷ್ಟಿಯನ್ನು ಕಾಣಬಹುದಾಗಿದೆ. ಇಲ್ಲಿ ಕರ್ಪೂರದ ಕಂಪನ್ನು ಕಿವಿ ಕುಡಿಯುತ್ತದೆ, ಮುತ್ತಿನ ಥಾಳವನ್ನು ಮೂಗು ನುಂಗುತ್ತದೆ, ಕಂಗಳಿಗೆ ಹಸಿವಾಗಿ ವಜ್ರವ ನುಂಗುತ್ತವೆ. ಇವೆಲ್ಲಾ ಪ್ರತಿಮೆಗಳು ಅಲ್ಲಮನ ವಿಶಿಷ್ಟವಾದ ಸೃಷ್ಟಿಗಳೇ ಆಗಿವೆ. ಅಂಧಕ ಹಾವ ಹಿಡಿದ(277); ರೂಹಿಲ್ಲದ ತಲೆಗೆ ಮೊಲೆ ಮೂಱಾಯಿತ್ತ ಕಂಡೆ(588); ಸತ್ತ ಕೋಳಿ ಎದ್ದು ಕೂಗಿತ್ತ ಕಂಡೆ ಇನ್ನೂ ಮುಂತಾದ ಈ ರೀತಿಯ ಪ್ರತಿಮಾಲೋಕದ ಸೃಷ್ಟಿಯನ್ನು ಅಲ್ಲಮನ ವಚನಗಳ ಲೋಕದಲ್ಲಿ ಕಾಣಬಹುದಾಗಿದೆ.

ಅಡಿಗರೂ ಕೂಡ ಈ ಅಸಂಬದ್ಧ, ವೈರುಳದ್ಯಾತ್ಮಕ ಮಾದರಿಯನ್ನೇ ತಮ್ಮ ಕವನಗಲ್ಲಿ ಬಳಸಿದ್ದಾರೆ. ಅವರು 'ಇರುಳ ಚಕ್ರವ್ಯೂಹದಲ್ಲಿ ಬೀಸುತ್ತಲಿದೆ ಕರ್ಣಕೈ ಕುರುಡು ಸೋಟೆ', ಭೂಮಿಗೀತದಲ್ಲಿ ಬಳಸುವ 'ಕಣ್ಣು ಬಿಟ್ಟರೆ ಬಣ್ಣ ಬಣ್ಣ ಗೊಗ್ಗರು ಗಲಭೆ ಕಿವಿ ತುಂಬ ಹಸುರು, ಬಿಳಿ, ಹಳದಿ, ಕೆಂಪು'; 'ಕದ ಕದಕೆ ಕಿಟಕಿ ಕಿಟಕಿಗೆ ಕಣ್ಣು, ಮನೆ ಕಣ್ಣು, ಊರೆಲ್ಲಾ ಕಣ್ಣು, ಕಾಡೆಲ್ಲಾ ಕಣ್ಣು' ಎನ್ನುವ ವಾಕ್ಯದಲ್ಲಿ ಈ ರೀತಿಯ ಪ್ರತಿಮಾ ಲೋಕದ ಸೃಷ್ಟಿಯರಿನ್ನು ಕಾಣಬಹುದಾಗಿದೆ. ಇಲ್ಲಿ ಅಡಿಗರು ಅಲ್ಲಮನಂತೆಯೇ ಪ್ರತಿಮೆಗಳನ್ನು ಕಟ್ಟಿದ್ದಾರೆ. ಅಲ್ಲಮ 'ಸರ್ಪ ಕಡಿದು ಸತ್ತ ಹೆಣನು ಸುಳಿದಾಡುವುದ ಕಂಡೆ'(74) ಎಂದು ಹೇಳಿದರೆ, ಅಡಿಗರು 'ಕಣ್ಣಿದಿರು ಸತ್ತು ಸಾಯದ ಹೆಣದ ಮೆರೆವಣಿಗೆ' ಎನ್ನುತ್ತಾರೆ. ಇಲ್ಲಿ ಹೆಣ ನಡೆದಾಡುವ ಪ್ರತಿಮೆಯನ್ನು ಇಬ್ಬರೂ ನೀಡುತ್ತಿದ್ದಾರೆ. ಅಲ್ಲಮ 'ಕುರುಡ ಹೆಳವನ ಕೈವಿಡಿದು ನಡಹುವಂತೆ'(128) ಎಂದು ಹೇಳಿದರೆ ಅಡಿಗರು 'ಹಳವನ ಹೆಗಲ ಮೇಲೆ ಕುರುಡ ಕೂತಿದ್ದಾನೆ, ದಾರಿ ಸಾಗುವುದೆಂತೋ ನೋಡಬೇಕು' (ಭೂಮಿಗೀತ) ಎಂದು ಅಲ್ಲಮನ ವಾಕ್ಯವನ್ನು ಸ್ವಲ್ಪ ಬದಲಾವಣೆ ಮಾಡಿಕೊಂಡು ಅನುಸಂಧಾನಿಸಿದ್ದಾರೆ. ಈ ಇಬ್ಬರೂ ಕುರುಡ ಮತ್ತು ಹೆಳವನ ಜೊತೆಗೆ ಭಾಷಿಕ ಆಟಗಳನ್ನು ಆಡಿದ್ದಾರೆ.

ಸಾವು, ಹಿಂಸೆ, ಯುದ್ಧದ ಪ್ರತಿಮೆಗಳು : ಹುಟ್ಟು-ಸಾವಿನ ಪ್ರತಿಮೆಗಳ ಬಳಕೆ, ಹಿಂಸಾತ್ಮಕ ಪ್ರತಿಮೆಗಳ ಬಳಕೆಯನ್ನು ಅಲ್ಲಮ ಹೆಚ್ಚಾಗಿ ಬಳಸುತ್ತಾನೆ. ಸಾವು ಅಲ್ಲಮನನ್ನು ಅತಿಯಾಗಿ ಕಾಡಿದೆ. ಅದರ ಬಗ್ಗೆ ಅಲ್ಲಮ ಅತಿಯಾದ ಜಿಜ್ಞಾಸೆಯನ್ನು ನಡೆಸಿದವನಾಗಿದ್ದಾನೆ. ಸಾವು ಎಂದರೆ ನಿರ್ಭಯದ ಸ್ಥಿತಿ ಅಲ್ಲಮನಿಗೆ. 'ಸಾವನ್ನಕ್ಕರ ಸರಸ ಉಂಟೆ ಗುಹೇಶ್ವರ'(87) ಎಂದು ಹೇಳುತ್ತಾನೆ.

'ತತ್ವವೆಂಬುದ ನೀನೆತ್ತ ಬಲ್ಲೆಯೋ? ಸತ್ತು ಮುಂದೆ ನೀನೇನ ಕಾಬೆಯೋ?'(500) ಎಂದು ಪ್ರಶ್ನಿಸುವ ಅಲ್ಲಮ 'ಆದ್ಯರು ಹೋದರೆಂದು ವಾಯಕ್ಕೆ ಸಾವುದು ವಿಚಾರವೆ' ಎಂದು ಪ್ರಶ್ನಿಸುತ್ತಾನೆ. ಇಲ್ಲಿ ಅಲ್ಲಮ ಚಾರಿತ್ರಿಕ ಘಟನೆಗಳ ಹಿಂದಿನ ಹಿಂಸೆಯ ಸ್ವರೂಪವನ್ನು ಕುರಿತು ಹೇಳುತ್ತಿರುವಂತೆ ಭಾಸವಾಗುತ್ತದೆ.

ಆಸೆಗೆ ಸತ್ತುದು ಕೋಟಿ
ಆಮಿಷಕ್ಕೆ ಸತ್ತುದು ಕೋಟಿ
ಹೊನ್ನು ಹೆಣ್ಣು ಮಣ್ಣಿಂಗೆ ಸತ್ತುದು ಕೋಟಿ
ಗುಹೇಶ್ವರ, ನಿಮಗಾಗಿ ಸತ್ತವರನಾರನೂ ಕಾಣೆ.(91)

'ಆಳವಿಲ್ಲದ ಸ್ನೇಹಕ್ಕೆ ಮರಣವೇ ಮಹಾನವಮಿ, ಗುಹೇಶ್ವರನನರಿಯದೆ ರಣಭೂಮಿಗಳು ಲಿದವು(546) ಎಂದು ಅಲ್ಲಮ ಸಾವಿನ ವಿವಿಧ ನೆಲೆಗಳನ್ನು ಮನುಷ್ಯನ ಅನಂತ ಆಸೆಗೆ ಬಲಿಯಾಗಿರುವುದನ್ನು ಚರಿತ್ರೆಯಿಂದ ಹೆಕ್ಕಿ ತೆಗೆಯುತ್ತಾನೆ. ಒಟ್ಟಾರೆ ಅಲ್ಲಮನ ವಚನಗಳಲ್ಲಿ ಸಾವು, ಹಿಂಸೆ ಮುಂತಾದ ಪ್ರತಿಮೆಗಳು ಕಿಕ್ಕಿರಿದು ತುಂಬಿವೆ.

ಅಡಿಗರೂ ಕೂಡ ಸಾವು, ಹಿಂಸೆ, ಯುದ್ಧ ಮುಂತಾದ ಪ್ರತಿಮೆಗಳನ್ನು ತಮ್ಮ ಕವಿತೆಗಳಲ್ಲಿ ಹೆಚ್ಚಾಗಿ ಬಳಸುತ್ತಾರೆ. ಗೊಂದಲಪುರ ಕವಿತೆಯಲ್ಲಿ ಅತಿಯಾದ ಹಿಂಸಾತ್ಮಕ ಪ್ರತಿಮೆಗಳನ್ನು ಬಳಸುತ್ತಾರೆ.

1. ಏನೆ ಬಂದರು ದಾರಿಗಡ್ಡ ಕತ್ತರಿಸಿ ಅದ, ಅವನ, ಕರಕರ ಎಂದು ತರಿದು ಕೊರಳಲಿ ಧರಿಸಿ ರುಂಡಮಾಲೆ; ನಡುರಸ್ತೆಯಲೆ, ಅಹ, ಪ್ರಳಯಲೀಲೆ;
2. ಮಿದುಳು ನುಂಗಿತ್ತೊಂದೆ ಬಣ್ಣ ಕೆಂಪು
   ಕಣ್ಣೆಲ್ಲ ಬರಿ ಕೆಂಪು, ಬಾಯಿಬಿಟ್ಟರೆ ರಕ್ತಕೇಡು,
   ಅಲ್ಲಮ ಈ ಕೆಂಪನ್ನು ಕುರಿತು ಮಾತನಾಡುತ್ತಾನೆ. 'ಕದನದೊಳಗಣ ಕಣ್ಣ ಕೆಂಪು, ಕದನದೊಳಗನ ಮನದ ಕೆಂಪು ಇದಾವನಾವನ ಕಾಡದಯ್ಯ?'(611) ಎಂದು ಮನುಷ್ಯನ ಮನದಲ್ಲಿರುವ ಹಿಂಸಾರೂಪವನ್ನು ಕುರಿತು ಹೇಳುತ್ತಾನೆ.
3. ಬಂದು ಬಿದ್ದಿದೆ ನಡು ಬೀದಿಯಲ್ಲಿ
   ಅಲ್ಲಿ ಬರಿ ರುಂಡ ಮುಂಡಗಳ ಖಾಡಾಖಾಡಿ,
4. ಹೊರಗೆ ಚೆಲ್ಲಾಪಿಲ್ಲಿ ಬಿದ್ದು ಅರಚುತ್ತಿತ್ತು ಮುದ್ದೆ ಮಾಂಸದ ಚೂರು ಚೂರು ಎಳೆಮೊಗರು
5. ಉಳುವವರ ಎದೆಗೆ ಹಾಕಿತ್ತು ರಬ್ಬರ್‌ಟ್ಯೂಬ್ ಒಂದೆರಡು ಮೈಲಿ ಉದ್ದ
   ಅದರಾಚೆ ತುದಿಯಲ್ಲಿ ಕುಳಿತು ಹೀರುತ್ತಿದ್ದ ರಕ್ತ ಮದ್ಯವನೊಬ್ಬ, ಅಬ್ಬಬ್ಬ.

ಇಷ್ಟೇ ಅಲ್ಲದೆ ಅಡಿಗರು ತಮ್ಮ 'ಕಲ್ಕತ್ತೆಯಲಿ ಕಾಳಿ' ಎನ್ನುವ ಕವನದಲ್ಲಿ ನಡೆದ ಕೋಮುಗಲಭೆಯ ನರಮೇಧದ ಸಚಿತ್ರ ವಿವರಗಳನ್ನು ನೀಡುತ್ತಾರೆ.

> 'ನರಪಶುವು ನರಪಶುವ ಕೊಂದು ಕುಣಿಯಿತು ಕೇಕೆ
> ಹಾಕಿ; ನಲಿಯಿತು ತಿವಿದು ಹೊಡೆದಪ್ಪಳಿಸಿ ಸುಟ್ಟು
> ಸುಲಿದು ಸಾಯಿಸಿ ಕೂಸು ಕುನ್ನಿಗಳ, ಹೆಣ್ಣುಗಳ,
> ಗಂಡುಗಳ, ದುರ್ಬಲರ, ದೀನರ, ಅನಾಥರನು.'

ಇಲ್ಲಿ ಅಡಿಗರು ಹಿಂಸೆಯ ತೀವ್ರ ಸ್ವರೂಪವನ್ನು ಕುರಿತು ಹೇಳಿದ್ದಾರೆ. 'ನಡೆದು ಬಂದ ದಾರಿ' ಕವನದಲ್ಲೂ ಹಿಂದೆ ನಡೆದಿರುವ ಹಿಂಸೆಯ ಸ್ವರೂಪವನ್ನು ಕುರಿತು ಹೇಳುತ್ತಾರೆ.

ಮಬ್ಬಿಗಿಳಿದ ಸಾಲು ಸಾಲು ಅಮೃತಶಿಲೆಯ ಗೋರಿ
ಕತ್ತಲೆದೆಯ ಚೂರಿ;
ಮನದ ಮಕ್ಕಳೆಲ್ಲ ನಕ್ಕ ಮಲ್ಲಿಗೆ ಬನ ತೋಟ;
ಮರೆದು ಮಸಣವಾಟ.

ಎಂದು ಚರಿತ್ರೆಯ ಸೂಕ್ಷ್ಮ ವಿವರಗಳನ್ನು ನೀಡುತ್ತಾರೆ.

ಅಡಿಗರ ಹಿಂಸಾತ್ಮಕ ಪ್ರತಿಮೆಯ ಸೃಷ್ಟಿಗೆ ಈ ಕೆಳಗಿನ ಪದ್ಯದ ಸಾಲುಗಳು ಅತ್ಯುತ್ತಮ ಉದಾಹರಣೆಯಾಗಿದೆ. ಇದು ಅಲ್ಲಮಪ್ರಭುವು ಬಳಸುವ ಹಿಂಸಾತ್ಮಕ ಪ್ರತಿಮೆಗಳಷ್ಟೇ ಶಕ್ತಿಶಾಲಿಯಾದ, ಗಟ್ಟಿಯಾದ ಪ್ರತಿಮೆಯಾಗಿದೆ.

ಭೂತಗನ್ನಡಿ ಬಿಸಿಲುಮಚ್ಚು ಚುಚ್ಚಿತು ತಲೆಯ;
ಮಿದುಳು-ಬಚ್ಚಲ ಹಂಡೆಯಲ್ಲಿ ಬೇಯುವ ಆಮೆ-
ಎದ್ದೆದ್ದು ಬಿದ್ದು ಒದ್ದಾಡುತ್ತಿತ್ತು.

ಹೀಗೆ ಅಡಿಗರು ಅಲ್ಲಮನಂತೆಯೇ ಪ್ರತಿಮಾಲೋಕದ ಸೃಷ್ಟಿಯಲ್ಲಿ ತಮ್ಮನ್ನು ತೊಡಗಿಸಿಕೊಂಡವರಾಗಿದ್ದಾರೆ. ಆ ಮೂಲಕ ಭಾಷಿಕ ನೆಲೆಯಲ್ಲಿ ಅಲ್ಲಮನನ್ನು ಅನುಸಂಧಾನ ನಡೆಸಿದ್ದಾರೆ ಎಂದು ಹೇಳಬಹುದಾಗಿದೆ.

2(ಬಿ). ಆಧ್ಯಾತ್ಮಿಕ ನೆಲೆಯಲ್ಲಿ ಅಲ್ಲಮನ ಅನುಸಂಧಾನ

ಶಂಕರ, ರಮಣ, ಅರವಿಂದ, ರಾಮಕೃಷ್ಣ ಪರಮಹಂಸ ಮುಂತಾದವರನ್ನು ಆಧ್ಯಾತ್ಮವಾದಿಗಳು ಎಂದು ಹೆಸರಿಸಬಹುದಾಗಿದೆ. ಆಧ್ಯಾತ್ಮವಾದಿಗಳಲ್ಲಿ ಭಿನ್ನತೆಯನ್ನು ಗುರುತಿಸಬಹುದಾಗಿದೆ. ಆಧ್ಯಾತ್ಮವಾದಿಗಳಲ್ಲಿ ಸ್ವಭಾವತಃ ಅಂತರ್ಮುಖಿಯಾಗಿದ್ದು ಜೀವನರಹಸ್ಯಗಳನ್ನು, ಆತ್ಮದ ನಿಲುವನ್ನು ಅರಿಯಬೇಕೆನ್ನುವವರಾಗಿದ್ದರೆ, ಇನ್ನೂ ಕೆಲವರು ಲೌಕಿಕವಾಗಿದ್ದರೂ ಅದರಲ್ಲಿ ಅತಿಯಾಸೆಯನ್ನು ಇಟ್ಟುಕೊಳ್ಳದೆ ಮೋಕ್ಷ ತತ್ವದಲ್ಲಿಯೇ ದೃಷ್ಟಿಯಿರಿಸಿದವರಾಗಿದ್ದಾರೆ ಮತ್ತೂ ಕೆಲವರು ಕುಟುಂಬದ ಆಸ್ಥೆಯನ್ನೇ ತ್ಯಜಿಸಿದವರು ಹಾಗೂ ಮೊದಲು ಭೋಗಾಸಕ್ತರಾಗಿ ಕಾರಣಾಂತರದಿಂದ ಅದು ಕ್ಷಣಿಕ ಎಂಬುದನ್ನರಿತು ಶಾಶ್ವತ ಸುಖದ ಹಂಬಲದಿಂದ ಯೋಗಮಾರ್ಗಕ್ಕೆ, ವೈರಾಗ್ಯ ಜೀವನಕ್ಕೆ ಕಾಲಿಟ್ಟವರಾಗಿದ್ದಾರೆ. ಇವರೆಲ್ಲರೂ ಆಧ್ಯಾತ್ಮವಾದಿಗಳ ಗುಂಪಿಗೆ ಸೇರಿದವರಾಗಿದ್ದಾರೆ. ಈ ಎಲ್ಲಾ ಆಧ್ಯಾತ್ಮವಾದಿಗಳ ಅಂತಿಮ ಗುರಿ ಸಚ್ಚಿದಾನಂದವನ್ನು ಪಡೆಯುವುದೇ ಆಗಿದೆ. ಒಂದು ರೀತಿಯಲ್ಲಿ ಅಲ್ಲಮನನ್ನು ಆಧ್ಯಾತ್ಮವಾದಿ

ಎಂದೂ ಕರೆಯಬಹುದು. ಆದರೆ ಇವರೆಲ್ಲ ಪ್ರತಿಪಾದಿಸಿದ ಆಧ್ಯಾತ್ಮದ ಪ್ರತಿಪಾದನೆಗಿಂತ ಬಹಳ ಭಿನ್ನವಾಗಿ ಆಧ್ಯಾತ್ಮವನ್ನು ತನ್ನ ವಚನಗಳಲ್ಲಿ ಅಲ್ಲಮ ತಂದಿದ್ದಾನೆ. "ವ್ಯೋಮ ಮೂರ್ತಿಯೆನಿಸಿದ ಅಲ್ಲಮ ಪ್ರಭುದೇವ ಈ ಪ್ರಪಂಚವನ್ನು ಬೆಳಗಿದ ಮಹಾಜ್ಯೋತಿ. ಹನ್ನೆರಡನೇ ಶತಮಾನದಲ್ಲಿ ಕನ್ನಡ ನಾಡಿನೊಳಗೆ ನಡೆದ ಆಧ್ಯಾತ್ಮಿಕ ಕ್ರಾಂತಿಗೆ ಪ್ರಾಣಕಳೆಯಿತ್ತವನು ಆತ".[4] ಶಿವಶರಣರ ವಚನ ಚಳುವಳಿ ಸಾಮಾಜಿಕ-ಆಧ್ಯಾತ್ಮಿಕ ಚಳುವಳಿಯಾಗಿ ರೂಪುಗೊಳ್ಳಲು ಅಲ್ಲಮ, ಬಸವಣ್ಣ ಮುಂತಾದವರ ಚಿಂತನೆಗಳು ಕಾರಣವಾಗಿವೆ. ಅಲ್ಲಮ ಶೂನ್ಯ ಸಿಂಹಾಸನದ ಗದ್ದುಗೆಯೇರಿ ನಡೆಸಿದ ಆಧ್ಯಾತ್ಮಿಕ ಕ್ರಾಂತಿ ಬಹಳ ಹಿರಿದಾದುದಾಗಿದೆ. ಆಧ್ಯಾತ್ಮಿಕ ನೆಲೆಯ ಅರ್ಥಗಳನ್ನು ಒಡೆದು ಕಟ್ಟಿದ ಕೀರ್ತಿ ಅಲ್ಲಮನದು. ಆಧ್ಯಾತ್ಮದ ಸಾಂಪ್ರದಾಯಿಕ ನೆಲೆಯ ಅರ್ಥಗಳನ್ನು ಪಲ್ಲಟಗೊಳಿಸಿ ತನ್ನದೇ ಆದ ವಿಶಿಷ್ಟ ಆಧ್ಯಾತ್ಮಿಕ ಸಮೀಕರಣವನ್ನು ನೀಡಿದವನು.

ಅಲ್ಲಮ ಬೆಟ್ಟ, ಗಿರಿ, ಕಾಮ, ಶಿಶು, ದೇವ, ಗಿಳಿ, ಬೆಕ್ಕು, ಲಿಂಗ, ಪ್ರಳಯ ಮುಂತಾದ ಪ್ರತಿಮೆಗಳನ್ನೇ ಆಧ್ಯಾತ್ಮದ ಮಟ್ಟಕ್ಕೆ ಕೊಂಡೊಯ್ದವನು. ಸಾಂಪ್ರದಾಯಿಕ ಶೈವ ಪರಂಪರೆಯು ವ್ಯಾಖ್ಯಾನಿಸಿದ ಆಧ್ಯಾತ್ಮದ ಚಿಂತನೆಗಳನ್ನು ತನ್ನ ಆಧ್ಯಾತ್ಮ ಚಿಂತನೆಯ ಮೂಲಕ ಪುನರ್‌ನಿರ್ಮಿಸಿದವನು. ಅಡಿಗರೂ ಕೂಡ ಅಲ್ಲಮನ ಈ ರೀತಿಯ ಆಧ್ಯಾತ್ಮಿಕ ಮಾರ್ಗವನ್ನೇ ತಮ್ಮ ಕೆಲವು ಕವನಗಳಲ್ಲಿ ಅನುಸರಿಸಿದ್ದಾರೆ.

ಅಡಿಗರ 'ಮೋಹನ ಮುರಲಿ' ಕವಿತೆ ಒಂದು ಆಧ್ಯಾತ್ಮಿಕ ಭಾವ ನೆಲೆಯ ಕವನವೇ ಆಗಿದೆ.

ಯಾವ ಮೋಹನ ಮುರಲಿ ಕರೆಯಿತು ದೂರ ತೀರಕೆ ನಿನ್ನನು?
ಯಾವ ಬೃಂದಾವನವು ಸೆಳೆಯಿತು ನಿನ್ನ ಮಣ್ಣಿನ ಕಣ್ಣನು?

ಇಂದ್ರಿಯ ಸುಖವನ್ನು ಬಯಸುತ್ತಿರುವ ವ್ಯಕ್ತಿಗೆ ಮೋಹನಮುರಲಿಯ ಮಧುರಧ್ವನಿ ಇಂದ್ರಿಯಾನುಭವವನ್ನು ಮೀರಿದ ಅತೀಂದ್ರಿಯ ಲೋಕಕ್ಕೆ ಆಹ್ವಾನಿಸುತ್ತಿದೆ. ಲೌಕಿಕ ಜಗತ್ತಿನಿಂದ ಅಲೌಕಿಕ ಜಗತ್ತಿನೆಡೆಗೆ ಮುರಲಿಯ ಗಾನ ಕರೆಯುತ್ತಿದೆ.

ಹೂವುಹಾಸಿಗೆ, ಚಂದ್ರ, ಚಂದನ, ಬಾಹು ಬಂಧನ, ಚುಂಬನ;
ಬಯಕೆ ತೋಟದ ಬೇಲಿಯೊಳಗೆ ಕರಣಗಣದೀ ರಿಂಗಣ

ಲೌಕಿಕ ಸುಖದ, ಇಂದ್ರಿಯಾನುಭವವನ್ನು ಹೇಳುತ್ತಾ ಈ ಲೌಕಿಕ ಸುಖಗಳನ್ನು ತ್ಯಜಿಸುವ, ದೂರವಾಗುವ ಸ್ಥಿತಿಯನ್ನು ಹೇಳುತ್ತಾರೆ.

ಇಲ್ಲಿ 'ಬಯಕೆ ತೋಟದ ಬೇಲಿ' ಅಲ್ಲಮನು ಹೇಳುವ ಪ್ರಪಂಚದ ಮಾಯೆಯಾಗಿದೆ. ಅದನ್ನು ಗೆಲ್ಲಬೇಕಾಗಿದೆ. ಅದರಿಂದ ಬಿಡುಗಡೆ ಹೊಂದಬೇಕಾಗಿದೆ.

'ಸಪ್ತಸಾಗರದಾಚೆಯಲ್ಲೋ ಸುಪ್ತಸಾಗರ ಕಾದಿದೆ'

ಎನ್ನುವಲ್ಲಿ ಅಡಿಗರು ಸಾಗರದ ಆಚೆಗೆ ಇರಬಹುದಾದ ಅಮೂರ್ತಲೋಕವನ್ನು ಹೇಳುತ್ತಿದ್ದಾರೆ. ಅದು ಅಲ್ಲಮನ ಪ್ರಕಾರ ಆಧ್ಯಾತ್ಮಿಕ ಲೋಕವೇ. ಆ ಆಧ್ಯಾತ್ಮಿಕ ಲೋಕ ಬಹಿರಂಗವಾಗಿರದೆ ಸುಪ್ತಾವಸ್ಥೆಯಲ್ಲಿದೆ. ಇಲ್ಲಿ ಲೋಕದೆಡೆಗೇ ಮುರಲಿಯ ಗಾನ ಕರೆಯುತ್ತಿರುವುದು.

'ವಿವಶವಾಯಿತು ಪ್ರಾಣ; ಹಾ। ಪರವಶವು ನಿನ್ನೀ ಚೇತನ;
ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ?'

ಇಲ್ಲಿ ಪ್ರಾಣ ಮತ್ತು ಚೈತನ್ಯ(ಆತ್ಮ)ಗಳು ಪರವಶವಾಗುತ್ತಿರುವ ಸ್ಥಿತಿಯನ್ನು ಹೇಳಲಾಗುತ್ತಿದೆ. ಇಲ್ಲಿ ಚೇತನವನ್ನು ಆಧ್ಯಾತ್ಮಿಕ ಮಟ್ಟದಲ್ಲಿಯೇ ಕಾಣಲಾಗುತ್ತಿದೆ. ಇದು ಅಲ್ಲಮನು ಮಂಡಿಸುವ ಅದ್ವಯದ ಸ್ಥಿತಿಯನ್ನೂ ಹೋಲುತ್ತಿದೆ.

'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ?' ಎಂದು ಪ್ರಶ್ನಿಸುತ್ತಿರುವ ಅಡಿಗರು, ಅಲ್ಲಮನು ಹೇಳುವ

'ಕಾಣದುದನಱಸುವರಲ್ಲದೆ
ಕಂಡುದನಱಸುವರೇ ಹೇಳಾ?'(55)

ಎಂಬ ವಾಕ್ಯದ ಪಡಿಯಚ್ಚನ್ನೇ ಹೇಳುತ್ತಿದ್ದಾರೆ. ಇಲ್ಲಿ ಅಲ್ಲಮ ಮತ್ತು ಅಡಿಗರು ಅಮೂರ್ತವಾದುದ್ದನ್ನು, ಬಯಲಾಗುವಿಕೆಯನ್ನು, ಶೂನ್ಯವಾಗುವಿಕೆಯನ್ನು ಕುರಿತು ಹೇಳುತ್ತಿದ್ದಾರೆ. ಅಲ್ಲಮನಿಗೆ 'ಬಯಲು' ಕೂಡ ಆಧ್ಯಾತ್ಮದ ಪ್ರತಿಮೆಯಾಗಿ ಕಾಣಿಸುತ್ತದೆ. ಇಲ್ಲಿ ಕೃಷ್ಣ, ಮುರಲಿ, ಬೃಂದಾವನ ಇವುಗಳೆಲ್ಲವೂ ಆಧ್ಯಾತ್ಮಿಕ ಸಂಕೇತಗಳಾಗಿ ಕವನದಲ್ಲಿ ಕಾಣಿಸುತ್ತವೆ.

ಅಡಿಗರ "ಭಾವತರಂಗ"ದ ಅನೇಕ ಕವನಗಳು ಇನ್ನೊಂದು ಅಮೂರ್ತ ಲೋಕದ ಹುಡುಕುವಿಕೆಯಲ್ಲಿ ನಿರತವಾಗಿರುವುದನ್ನು ಕಾಣಬಹುದಾಗಿದೆ. ಅಂತಹ ಕವನಗಳಲ್ಲಿ 'ಒಡಲೆಳಸುತಿಹುದು ಜೀವ' ಕವನವೂ ಒಂದು.

'ಮೌನ ಶರಧಿತಳದಿ ಮುತ್ತಿನಂತೆ ಮಲಗಲೆಳಸಿದೆ;
ಗವಿಯೊಡಲ ರನ್ನದಂತೆ ತನ್ನ ತಾನೆ ಬೆಳಗ ಬಯಸಿದೆ
ಏಕಾಂತದ ಶಾಂತಿರಸಕೆ ಬಾಯಾರಿ ನಿಂತಿದೆ.'

ಆತ್ಮದ ಪ್ರಕಾಶಕ್ಕೆ ಕವಿ ಈ ಕವನದಲ್ಲಿ ಹಾತೊರೆಯುತ್ತಿದ್ದಾರೆ. ಅದಕ್ಕಾಗಿ ಏಕಾಂತವನ್ನು ಬಯಸುತ್ತಿದ್ದಾರೆ. ಒಲವಿನ ಹಂಬಲವು ಕೈಗೂಡದಾಗ, ಭಗ್ನ ಪ್ರೇಮಿಯಾದಾಗ ಮನಕೆ ಶಾಂತಿ, ಆಧ್ಯಾತ್ಮದ ಶಾಂತಿಯು ಬೇಕಾಗಿದೆ ಎಂದು ಕವಿ ಆಶಿಸುತ್ತಿದ್ದಾರೆ.

ಆದ್ದರಿಂದಲೇ ಕವಿಯ ಮನ,

'ಓಡಲೆಳಸುತಿಹುದು ಜೀವ ದೂರದೂರಕೆ–
ಸಣ್ಣ ಒಲವು, ಸಣ್ಣ ನೇಹ, ಸಣ್ಣ ಬಯಕೆ, ಸಣ್ಣ ಹರಕೆ–
ಇವುಗಳಿಂದ ದೂರಕೆ–
ನೀಲಮುಗಿಲ, ಗಹನವಿಪಿನ, ಹಿರಿಗಡಲಿನ ವಿಸ್ತಾರಕೆ;'

ಇಲ್ಲಿ ಕವಿ ಮಹತ್ತನ್ನು ಪಡೆಯುವ ಸಲುವಾಗಿ ಆಧ್ಯಾತ್ಮಿಕ ಔನ್ನತ್ಯವನ್ನು ಸಾಧಿಸುವ ಸಲುವಾಗಿ ಈ ಲೌಕಿಕದ ಅಂಶಗಳಾದ ಒಲವು, ಸ್ನೇಹ, ಬಯಕೆ, ಆಸೆಗಳು ಇವುಗಳಿಂದ ಮುಕ್ತಿ ಹೊಂದಿ ಆಧ್ಯಾತ್ಮಿಕ ಸಿದ್ಧಿಯ ಸಲುವಾಗಿ ಗಹನ ವಿಪಿನದ ಕಡೆಗೆ ಹೊರಡುವ ಇಂಗಿತವನ್ನು ವ್ಯಕ್ತಪಡಿಸುತ್ತಾರೆ.

ಅಡಿಗರ 'ಹಿಮಗಿರಿಯ ಕಂದರ' ಕವನವೂ ಕೂಡ ಆಧ್ಯಾತ್ಮಿಕ ನೆಲೆಯನ್ನು ಹೊಂದಿದ ಕವನವಾಗಿದೆ. ಕವನದ ಶೀರ್ಷಿಕೆ 'ಹಿಮಗಿರಿ', ಹಿಮಾಲಯ ಎಂದು ಹೇಳುವಾಗಲೇ ಅಲ್ಲಿನ ಆಧ್ಯಾತ್ಮಿಕ ಪರಿಸರ ಕಣ್ಣ ಮುಂದೆ ಬಂದು ನಿಲ್ಲುತ್ತದೆ. ಈ ಕವಿತೆಯಲ್ಲಿ ವ್ಯಕ್ತಿಯು ಐಂದ್ರಿಕ ಜೀವನದಿಂದ ಆಧ್ಯಾತ್ಮಿಕ ಜೀವನಕ್ಕೆ ಪ್ರಯಾಣ ಬೆಳಸುವ ವಿವರಗಳಿವೆ. ಅಲ್ಲಮನ ವಚನಗಳಲ್ಲಿ 'ಗಿರಿ' ಎನ್ನುವುದು ದಿವ್ಯಾನುಭವ, ಶಕ್ತಿಯ ಸಂಕೇತ. 'ಗಿರಿ'ಎನ್ನುವುದು ಅಲ್ಲಮನಲ್ಲಿ ಆಧ್ಯಾತ್ಮಿಕ ಪ್ರತಿಮೆ. ಈ ಪ್ರತಿಮೆಯನ್ನು ಅಡಿಗರು ಅನುಸಂಧಾನಿಸಿದ್ದಾರೆ.

'ಕೃಷ್ಣ ಶಂಕರ ಬುದ್ಧ ರಮಣ ಅಲ್ಲಮ ರೈಕ್ವ
ಯಾಜ್ಞವಲ್ಕ್ಯ ವಿದೇಹ ಯೇಸು ಜಾಬಾಲಿ'

ಇಲ್ಲಿ ಅಡಿಗರು ಶಾಂತಿ, ಅಹಿಂಸೆಯ ಪ್ರತಿಪಾದಕರನ್ನು ಮತ್ತು ಅಲ್ಲಮನನ್ನು ಒಳಗೊಂಡಂತೆ ಆಧ್ಯಾತ್ಮಿಕ ಸಾಧನೆಯ ವ್ಯಕ್ತಿಗಳನ್ನು ಸ್ಮರಿಸುತ್ತಾರೆ.

ಗೊಂದಲಪುರ ಕವನದಲ್ಲಿ ಬರುವ ಸಾವು, ಹಿಂಸೆ, ವಿನಾಶ, ಅಲ್ಲೋಲಕಲ್ಲೋಲಗಳ ಚಿತ್ರಣ ಅಲ್ಲಮನು ಬಳಸುವ ವಿರುದ್ಧಾತ್ಮಕ ಹೇಳಿಕೆಗಳು, ಈ ವಿರುದ್ಧಾತ್ಮಕ ಹೇಳಿಕೆಗಳ ಮೂಲಕ ಅಲ್ಲಮ ಹೊಸ ಆಧ್ಯಾತ್ಮಿಕ ನೆಲೆಯನ್ನು ಕಂಡು ಕೊಳ್ಳುತ್ತಾನೆ. ಈ ಕವಿತೆಯಲ್ಲಿ ಅಡಿಗರು 'ಗಿಳಿಯು ಪಂಜರದೊಳಿಲ್ಲ' ಎನ್ನುವ ಸಾಲನ್ನು ಬಳಸಿಕೊಳ್ಳುತ್ತಾರೆ. ಈ

ಗಿಳಿಯು ಪಂಜರದೊಳಿಲ್ಲ ಎನ್ನುವುದೇ ಆಧ್ಯಾತ್ಮಿಕ ಪರಿಕಲ್ಪನೆಯಿಂದ ಕೂಡಿರುವುದಾಗಿದೆ. ಸಾವಿನ ಒಂದು ಪ್ರತಿಮೆಯಾಗಿ ಇದನ್ನು ಗ್ರಹಿಸಬಹುದಾದ್ದರೂ ಇಲ್ಲಿ ಅಡಿಗರು ಅನ್ಯ ಅರ್ಥದಲ್ಲಿ ವಿವರಿಸಲು ಪ್ರಯತ್ನಿಸಿದ್ದಾರೆ. ಅಡಿಗರು ದಾಸರ 'ಗಿಳಿಯು ಪಂಜರದೊಳಿಲ್ಲ' ಸಾಲನ್ನು ಬಳಸಿಕೊಂಡು ಗಿಳಿಯನ್ನು ಬೆಕ್ಕುಕೊಂಡು ಹೋಯಿತು ಎಂದು ಹೇಳುತ್ತಿದ್ದರೆ. ಅಲ್ಲಮ 'ಆ ಗಿಳಿಯು ಪಂಜರದೊಳಗಣ ಬೆಕ್ಕ ನುಂಗಿ ರಂಭೆಯ ತೋಳಿಂದಗಲಿತ್ತು ನೋಡಾ' ಎಂದು ಹೇಳಿದ್ದಾನೆ. ಇಲ್ಲಿಯೂ ಅಲ್ಲಮ ವೈರುಧ್ಯಾತ್ಮಕ ಹೇಳಿಕೆಯಿಂದಲೇ ಆಧ್ಯಾತ್ಮ ವಿವರಣೆಯನ್ನು ನೀಡುತ್ತಾನೆ. ಇಲ್ಲಿ ಪಂಚರದಲ್ಲಿರಬೇಕಾದ್ದು ಗಿಳಿ ಆದರೆ ಅಲ್ಲಮನಲ್ಲಿ ಬೆಕ್ಕು ಪಂಜರದಲ್ಲಿದೆ. ಅಲ್ಲಮನಲ್ಲಿ 'ಗಿಳಿ' ಜೀವಾತ್ಮದ ಸಂಕೇತವಾಗಿ ಬಳಕೆಯಾಗುತ್ತದೆ. ಅಡಿಗರು ಅದನ್ನೇ ಇಲ್ಲಿ ಅನುಸಂಧಾನಿಸಿರುವುದು. ಇಲ್ಲಿ ಅಡಿಗರು ಗಿಳಿಯನ್ನು ಮಗ್ಧತೆ ಮತ್ತು ಬಾಲ್ಯದ ಸಂಕೇತವಾಗಿ ಬಳಸುತ್ತಿದ್ದಾರೆ. ಆ ಮುಗ್ಧತೆ ಮತ್ತು ಬಾಲ್ಯವನ್ನೇ ಅಲ್ಲಮ ಆಧ್ಯಾತ್ಮ ಮಟ್ಟಕ್ಕೇರಿಸಿ ಬಿಡುತ್ತಾನೆ.

ಅಡಿಗರ 'ಕೃಷ್ಣನ ಕೊಳಲು' ಕವಿತೆಯೂ ಆಧ್ಯಾತ್ಮಿಕ ವಿವರಗಳನ್ನೊಳಗೊಂಡ ಕವನವಾಗಿದೆ. ಅಲ್ಲಮನು ಹೇಲುವ ಗಿರಿ, ಗಿಳಿ, ಪ್ರಳಯ, ಮುರಲಿ, ಕೃಷ್ಣ, ಮಾಯೆ, ನಿಶ್ಯಬ್ದ ಮುಂತಾದ ಆಧ್ಯಾತ್ಮಿಕ ಸಂಕೇತಗಳು ಈ ಕವನದಲ್ಲಿ ವ್ಯಕ್ತವಾಗಿರುವುದನ್ನು ಕಾಣಬಹುದಾಗಿದೆ. ಈ ಕವನದಲ್ಲಿನ–

'ಬೀಸಿ ಬಂದಿತು ಪ್ರಳಯವಾತ; ಸುಯ್‌ಸುಯ್ ಎಂದು
ಸೂಸಿ ಬಂದಿತು ಮಲಯ ಗಂಧಾನಿಲ'

ಎಂಬ ವಾಕ್ಯದಲ್ಲಿ ಹಾಗೂ ಗೊಂದಲಪುರ ಕವನದ,

'ನಡುರಸ್ತೆಯಲ್ಲೆ ಅಹ ಪ್ರಳಯಲೀಲೆ' ಎಂಬ ವಾಕ್ಯದಲ್ಲಿ ಪ್ರಳಯ ಶಬ್ದವನ್ನು ಅಡಿಗರು ಬಳಸುತ್ತಾರೆ. ಅಲ್ಲಮನೂ ಕೂಡ ಅನೇಕ ವಚನಗಳಲ್ಲಿ ಪ್ರಳಯವನ್ನು ಕುರಿತು ಹೇಳಿದ್ದಾನೆ.

ಪರುಷದ ಪುತ್ಥಳಿಗೆ ಕಬ್ಬುನದ ಆಭರಣಗಳುಂಟೇ ಅಯ್ಯಾ?
ಲೋಕದೊಳಗೆ ಲಿಂಗ, ಲಿಂಗದೊಳಗೆ ಲೋಕವಾದೊಡೆ
ಹಿಂದಣ ಪ್ರಳಯಂಗಳೇಕಾದವು?
ಇನ್ನು ಮುಂದಣ ಪ್ರಳಯಗಳಗಿನ್ನೆಂತೋ?
ಲೋಕವು ಲೋಕದಂತೆ, ಲಿಂಗವು ಲಿಂಗದಂತೆ;
ಈ ಉಭಯದ ಭೇದವು, ಗುಹೇಶ್ವರ ನಿಮ್ಮ ಶರಣನೇ ಬಲ್ಲ (704)

ಎಂದು ಅಲ್ಲಮ ಪ್ರಳಯ ಮತ್ತು ಆದಿಮ ಸೃಷ್ಟಿಯನ್ನು ಕುರಿತು ಹೇಳುತ್ತಲೇ 'ಪ್ರಳಯ' ಎನ್ನುವುದನ್ನು ಆಧ್ಯಾತ್ಮದ ಮಟ್ಟಕ್ಕೆ ಏರಿಸುತ್ತಾನೆ. ಇದನ್ನೇ ಡಿ.ಆರ್.ನಾಗರಾಜ್‌ರವರು

ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ ಕೃತಿಯಲ್ಲಿ ಪ್ರಳಯದ ಸ್ಥಿತಿಗಳು ಉಲ್ಲಂಘನೆಯ ಸ್ಥಿತಿಗಳು. ಈ ಪ್ರಳಯದಿಂದೀಚೆಗೆ ಪರಿವರ್ತನೆ ಪ್ರಾರಂಭವಾಗುತ್ತದೆ. ಈ ಆಧ್ಯಾತ್ಮಿಕ ಬದುಕಿನಲ್ಲಿ ಪ್ರಳಯ ಅನಿವಾರ್ಯ ಎಂದು ಹೇಳುತ್ತಾರೆ.[5]

ಅಡಿಗರು ತಮ್ಮ 'ಕೃಷ್ಣನ ಕೊಳಲು' ಕವಿತೆಯಲ್ಲಿ–

ಕೊಳಲ ದನಿಯೊಡನಗೋ ಬಂದ ಮೋಹನ, ಬಾಲ
ಕೃಷ್ಣ ರಾಧೆಯ ಹೃದಯ ನಂದನಕ್ಕೆ
ಕೂಗಿತ್ತು ಕೋಕ, ಪಲ್ಲವಿಸಿತ್ತಶೋಕ, ಮೈ
ಮರೆತು ನಿಂತಳು ಯಮುನೆ ಮೂಕ, ಮೂಕ

ಎಂದು ಹೇಳುತ್ತಾರೆ. ಇಲ್ಲಿ ಅಡಿಗರು ಬಾಲ ಕೃಷ್ಣನನ್ನು ಕುರಿತು ಹೇಳುತ್ತಿದ್ದಾರೆ. ಅಲ್ಲಮನೂ ಕೂಡ ತನ್ನ ವಚನಗಳಲ್ಲಿ ಈ ಶಿಶುತನದ ಮುಗ್ಧ ಪ್ರತಿಮೆಗಳನ್ನು ಕೊಡುತ್ತಾನೆ.

ಹರಿಯ ಬಾಯ ಹಾಲು, ಉರಿಯ ಕೈಯಬೆಣ್ಣೆ;
ಗಿರಿಯ ಮೇಲಣ ಶಿಶು ಹರಿದಾಡುತ್ತಿದೆ
ಕೆರೆಯಿಂ ಭೋ, ಹಾಲು ಗುಡಿಯ!
ಸುರಪತಿಯ ಗಜವೇಜಿ ಮರಳಿ ಹೋಹನ ಕಂಡು ಕರೆಯಿಂ ಭೋ!
ಹರನ ಮಂಥಣಿಯ ಶೂಲದಲ್ಲಿ
ಶಿರದ ಉಂಗುಟ ಊರಿ ನೆರೆವುತ್ತಿದ್ದುದ ನಾನೇನೆಂಬೆ ಗುಹೇಶ್ವರ!(238)

ಇಲ್ಲಿ ಗಿರಿ ಮತ್ತು ಶಿಶು ದಿವ್ಯಾನುಭವದ ಸಂಕೇತಗಳಾಗುತ್ತವೆ. ಶಿಶುತನ ಎನ್ನುವುದು ಸತ್ಯ ಅಸತ್ಯಗಳಾಚೆಗೆ ಇರುವ ಆಧ್ಯಾತ್ಮಿಕ ಔನ್ನತ್ಯ ಸ್ಥಿತಿ.

ಹೀಗೆ ಅಡಿಗರೂ ಕೂಡ ಶಿಶುತನದ ಕೃಷ್ಣನನ್ನು ಕವಿತೆಯಲ್ಲಿ ತರುವ ಮೂಲಕ ಅಲ್ಲಮನೊಂದಿಗೆ, ಅಲ್ಲಮನ ಆಧ್ಯಾತ್ಮಿಕ ಚಿಂತನೆಗಳೊಂದಿಗೆ ಅನುಸಂಧಾನ ನಡೆಸಿದ್ದಾರೆ.

ಟಿಪ್ಪಣಿಗಳು

1. ಡಿ.ಆರ್.ನಾಗರಾಜ್ : ಅಲ್ಲಮಪ್ರಭು ಮತ್ತು ಶೈವಪ್ರತಿಭೆ, ಅಕ್ಷರಪ್ರಕಾಶನ, ಹೆಗ್ಗೋಡು, 2006, ಪುಟ 173
2. ಬಸವರಾಜ ಕಲ್ಗುಡಿ : ಅನುಭಾವ : ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 1988, ಪುಟ 254
3. ಡಿ.ಆರ್.ನಾಗರಾಜ್ : ಅಲ್ಲಮಪ್ರಭು ಮತ್ತು ಶೈವಪ್ರತಿಭೆ, ಅಕ್ಷರ ಪ್ರಕಾಶನ, ಹೆಗ್ಗೋಡು, 2006, ಪುಟ 198
4. ಡಾ. ಎಸ್.ಎಂ.ವೃಷಭೇಂದ್ರಸ್ವಾಮಿ : ಅಲ್ಲಮಪ್ರಭುದೇವ, ಮುನ್ನುಡಿ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1978
5. ಡಿ.ಆರ್.ನಾಗರಾಜ್ : ಅಲ್ಲಮಪ್ರಭು ಮತ್ತು ಶೈವಪ್ರತಿಭೆ, ಅಕ್ಷರ ಪ್ರಕಾಶನ, ಹೆಗ್ಗೋಡು, 2006, ಪುಟ 208

ಅಧ್ಯಾಯ – 3 : ಎಚ್.ಎಸ್. ಶಿವಪ್ರಕಾಶರ ಕಾವ್ಯದಲ್ಲಿ ಅಲ್ಲಮ

ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಕವಿಗಳಲ್ಲಿ ಶಿವಪ್ರಕಾಶರು ಒಬ್ಬರಾಗಿದ್ದಾರೆ. ಶಿವಪ್ರಕಾಶರು ಕವಿ ಮಾತ್ರವಲ್ಲದೆ ವಿಮರ್ಶಕರು, ನಾಟಕಕಾರರು ಹಾಗೂ ಅನುವಾದಕರೂ ಆಗಿದ್ದಾರೆ. ತಮ್ಮ 'ಮಿಲರೇಪ' ಕವನ ಸಂಕಲನದಿಂದ ಇಂದಿನವರೆಗೆ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಇವರ ಕವನಗಳು ಕ್ಲಿಷ್ಟವಾಗಿರದೆ, ಸಂಕೀರ್ಣತೆಯಿಂದ ಕೂಡಿರದೆ, ಆಡುಮಾತಿನ ಸಂಭಾಷಣೆಯ ರೀತಿಯಲ್ಲಿರುತ್ತವೆ. ಪರಿಣಾಮಕಾರಿಯಾದ ಪ್ರತಿಮೆ, ರೂಪಕಗಳನ್ನು ಬಳಸುವವರಾದರು ಹೆಚ್ಚು ನೇರವಾಗಿ ಹೇಳಲು ಪ್ರಯತ್ನಿಸುತ್ತಾರೆ. ಅವರದು ಮೃದು ಲಯಭರಿತವಾದ ವಿಶಿಷ್ಟ ಕಾವ್ಯ ಶೈಲಿಯಾಗಿದೆ. ಸರಳ ಪದಗಳಿಂದ, ಲಯಗಾರಿಕೆಯಿಂದ ಕೂಡಿರುವ ಇವರ ಕವಿತೆಗಳು ಮನಸ್ಸಿಗೆ ಹೆಚ್ಚು ಪ್ರಿಯವೆನಿಸುತ್ತವೆ. ಶಿವಪ್ರಕಾಶರು ಹಾಗೆ ಮನಸ್ಸಿಗೆ ಹಿತವೆನಿಸುವ ಕಾವ್ಯಶೈಲಿಯಲ್ಲಿಯೇ ತಮ್ಮ ವೈಚಾರಿಕ ಚಿಂತನೆಯನ್ನು, ವಿಶಿಷ್ಟ ಅನುಭಾವವನ್ನು ಮಂಡಿಸುತ್ತಾರೆ. ಇವರು ಜಗತ್ತಿನ ವಿವಿಧ ತತ್ವಜ್ಞಾನಿಗಳನ್ನು, ಚಿಂತಕರನ್ನು, ಅನುಭಾವಿಗಳನ್ನು, ಅಷ್ಟೇ ಅಲ್ಲದೆ ಅಂಗವಿಕಲರನ್ನು, ಸಮಾಜದ ಶೋಷಿತರನ್ನು, ಸಮಾಜದ ಒಬ್ಬ ಸಾಮಾನ್ಯ ವ್ಯಕ್ತಿಯೊಬ್ಬನನ್ನು ವಸ್ತುಗಳಾಗಿಸಿಕೊಂಡು ಅವರಲ್ಲಿನ ವೈಚಾರಿಕ, ಅನುಭಾವದ ಜಗತ್ತೊಂದನ್ನು ಅನಾವರಣಗೊಳಿಸುತ್ತಾರೆ. ಕಾವ್ಯದ ವಸ್ತುವೊಂದನ್ನು ಸಹಜತೆಯಿಂದ ನಿರೂಪಿಸುವುದೇ ಶಿವಪ್ರಕಾಶರ ಕವನಗಳಲ್ಲಿನ ವಿಶಿಷ್ಟ ಅಭಿವ್ಯಕ್ತಿ ಕ್ರಮವಾಗಿದೆ. ಆ ಸಲುವಾಗಿಯೇ ಇವರ ಕವಿತೆಗಳು ಹೆಚ್ಚು ಅಂತಃಸತ್ವ ಗುಣವನ್ನು ಹೊಂದಿವೆ.

ಶಿವಪ್ರಕಾಶರ ಕಾವ್ಯದಲ್ಲಿ ನಾವು ಅಲ್ಲಮನನ್ನು ತಾತ್ವಿಕ ಜಿಜ್ಞಾಸೆಯ ಮಟ್ಟದಲ್ಲಿ ಕಾಣಬಹುದಾಗಿದೆ. ಅಲ್ಲಮ ಲೋಕ ಮತ್ತು ಅನ್ಯರ ಭಾವಜಗತ್ತುಗಳ, ತಾತ್ವಿಕತೆಯ ದರ್ಶನ ಜಗತ್ತುಗಳ, ತಮಗೆ ಎದುರಾಗುವ ಪ್ರಶ್ನಾಲೋಕಗಳ ಸಮ್ಮಿಳನದೊಂದಿಗೆ ಶಿವಪ್ರಕಾಶರು ತಮ್ಮ ಕವನಗಳನ್ನು ರಚಿಸುತ್ತಾರೆ. ಇವರು ಅಲ್ಲಮನ ಮೇಲ್ನೋಟದ ತಾತ್ವಿಕ ಗ್ರಹಿಕೆಯನ್ನು ಪರಿಗಣಿಸದೇ ಆ ತಾತ್ವಿಕ ಗ್ರಹಿಕೆಗಳ ಆಳಕ್ಕಿಳಿದು ಅದನ್ನು ವಿಮರ್ಶಿಸುತ್ತಾರೆ. ಪುನರ್ ಪರಿಶೀಲಿಸುತ್ತಾರೆ, ಅನುಸಂಧಾನಿಸುತ್ತಾರೆ, ಅಲ್ಲಮನ ಚಿಂತನೆಗಳ ಅಡಿಪಾಯದ ಪುನರ್‌ವಿಮರ್ಶೆಯ ಮೇಲೆ ತಮ್ಮ ಚಿಂತನಾ ಕಾವ್ಯವನ್ನು ಕಟ್ಟುತ್ತಾರೆ. ಆ ಮೂಲಕ ಅಲ್ಲಮನನ್ನು ಅನುಸಂಧಾನಿಸುತ್ತಾರೆ. ಮುಖ್ಯವಾಗಿ ಇವರು ಅಲ್ಲಮನು ತನ್ನ ವಚನಗಳಲ್ಲಿ ರೂಪಕಗಳಿಗೆ ಕೊಡುವ ಅರ್ಥವನ್ನು ತಮ್ಮ ಕವಿತೆಗಳಲ್ಲಿ ಅದೇ ರೂಪಕಗಳನ್ನು ತರುವ ಮೂಲಕ ಬಳಸಿಕೊಳ್ಳುತ್ತಾರೆ. ಇವರ ಹಲವು ಕವನಗಳ ಅರ್ಥಸಾಧ್ಯತೆಗಳನ್ನು ಮೇಲ್ನೋಟದ ಓದಿಗೆ ಅರ್ಥಮಾಡಿಕೊಳ್ಳಲಾಗದಿದ್ದರೂ ಅಲ್ಲಮನ ತಾತ್ವಿಕತೆ, ಭಾಷಿಕ ಜಿಜ್ಞಾಸೆ ಮತ್ತು ಅಲ್ಲಮನ

ಸಾಂಸ್ಕೃತಿಕ ಪದಕೋಶದ ಮೂಲಕ ಪ್ರವೇಶಿಸಿದರೆ ಕವನಗಳ ಅರ್ಥಸಾಧ್ಯತೆಗಳು ಹೆಚ್ಚು ಸ್ಪಷ್ಟವಾಗುತ್ತವೆ.

3(ಎ) ಶಿವಪ್ರಕಾಶರ ಕವಿತೆಗಳಲ್ಲಿ ಅನುಭಾವ ಕಾವ್ಯ ಪರಂಪರೆ

ಅನುಭಾವ ಎನ್ನುವುದು ಅತೀಂದ್ರಿಯ ಅನುಭವ ಮಾತ್ರವಾಗಿರದೆ ಅದು ವಿಶಾಲ ಅರ್ಥ ಸಾಧ್ಯತೆಯನ್ನು ಒಳಗೊಂಡ ನೆಲೆಯಲ್ಲಿ ಬಳಕೆಯಾಗುತ್ತದೆ. ಅದು ಮೂರ್ತ ಇಂದ್ರಿಯಗಳಿಗೆ ಸಿಗುವ ಅನುಭವವಷ್ಟೇ ಅಲ್ಲ, ಅದು ಅಮೂರ್ತ ಬಗೆಯ ವಿಶಿಷ್ಟ ಅನುಭವವಾಗಿರುತ್ತದೆ. ಆದ್ದರಿಂದಲೇ ನಾವು ಅದನ್ನು ಆತ್ಮಾನುಭವ ಎನ್ನುವ ಅರ್ಥದ ನೆಲೆಯಲ್ಲಿ ಬಳಸುತ್ತೇವೆ. ದೇಹ ಮೂರ್ತವಾದದ್ದಾದರೆ, ಆತ್ಮ ಅಮೂರ್ತ ಸ್ವರೂಪದ್ದು. ಆತ್ಮಕ್ಕೆ ಉಂಟಾಗುವ ವಿಶಿಷ್ಟ ಅವರ್ಣನೀಯ ಅನುಭವವೇ ಅನುಭಾವ ಎನ್ನುವುದಾಗಿದೆ.

ಅಲ್ಲಮನಿಗೆ ಈ ಅನುಭಾವ ಎನ್ನುವುದು ಒಂದು ಬಹುದೊಡ್ಡ ಚಿಂತನೆಯ ವಿಷಯವಾಗಿದೆ. ಅವನ ವಚನಗಳನ್ನು ಗಮನಿಸಿದರೆ ಅನುಭಾವವನ್ನು ಅಲ್ಲಮನಷ್ಟು ದೊಡ್ಡ ಮಟ್ಟದಲ್ಲಿ ಚಿಂತಿಸಿದ ಮತ್ತೊಬ್ಬ ವಚನಕಾರರಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಅಲ್ಲಮ ಅನುಭಾವ ಎನ್ನುವುದನ್ನು ಒಂದು ಸೀಮಿತ ಅರ್ಥಕ್ಕೆ ಕಟ್ಟು ಬೀಳದೆ ಅನೇಕ ಅರ್ಥಗಳಲ್ಲಿ ನಿರ್ವಚಿಸಿಕೊಳ್ಳಲು ಪ್ರಯತ್ನಿಸಿದ್ದಾನೆ. ಅವನು ತನ್ನ ಅನೇಕ ವಚನಗಳಲ್ಲಿ ಅನುಭಾವದ ಅರ್ಥಕ್ಕೆ ಆಧ್ಯಾತ್ಮ ವಿಚಾರವೆಂದೇ ಬಳಸಿದ್ದರೂ ಕೂಡ ಅದನ್ನು ವಿವಿಧ ಸ್ವರೂಪಗಳಲ್ಲಿ ಕಾಣಲು ಪ್ರಯತ್ನಿಸುತ್ತಾನೆ. ಅವನು ತನ್ನ ಒಂದು ವಚನದಲ್ಲಿ 'ನಿಶ್ಯಬ್ದವೇ ಅನುಭಾವ'$_{(374)}$ ಎಂದು ಹೇಳುವ ಮೂಲಕ ಅನುಭಾವದ ವಿವಿಧ ನೆಲೆಯನ್ನು ಹೇಳಲು ಪ್ರಯತ್ನಿಸುತ್ತಾನೆ. ಅನುಭಾವ ಎನ್ನುವುದು ನಿಶ್ಯಬ್ದದ, ಧ್ಯಾನದ ಸ್ಥಿತಿಯಲ್ಲಿ ಹುಟ್ಟುವುದುದಾಗಿದೆ ಎನ್ನುತ್ತಾನೆ. ಅದೇ ಅಲ್ಲಮ ಮತ್ತೊಂದು ಕಡೆ 'ಬಹುಮಾತಿನ ಮಾಲೆಯ ಅನುಭಾವಕ್ಕೆ ನಾಚುವೆನು ಕಾಣಾ ಸಂಗನ ಬಸವಣ್ಣ'$_{(1152)}$ ಎಂದು ಹೇಳಿ ಅನುಭಾವದ ಮತ್ತೊಂದು ನೆಲೆಯನ್ನು ಹೇಳುತ್ತಾನೆ. ನಿಶ್ಯಬ್ದದ ಅನುಭಾವ ಒಂದಾದರೆ, ಬಹುಮಾತಿನ ಮಾಲೆಯ ಅನುಭಾವ ಮತ್ತೊಂದು ರೀತಿಯದ್ದು. ಅಲ್ಲಮನು 'ಅನುಭಾವದಿಂದ ಲಿಂಗ ಜಂಗಮ ಪ್ರಸಾದಗಳು ಹುಟ್ಟುವುವು'$_{(170)}$ ಎಂದು ಹೇಳುತ್ತಲೇ 'ಅನುಭಾವ ಹೊಲಬುಗೆಟ್ಟು ಹೋಯಿತ್ತಲ್ಲ!'$_{(885)}$, 'ಅನುಭಾವವೆಂಬುದೊಂದೆತ್ತು ಕೆಟ್ಟಿತ್ತು!'$_{(696)}$ ಎಂದೂ ಹೇಳುತ್ತಾನೆ. ಆ ಮೂಲಕ ಒಪ್ಪಿಕೊಂಡ ಅನುಭಾವವನ್ನು ವಿಮರ್ಶೆಗೆ ಒಳಪಡಿಸಿ ಅದರ ಅಧ್ವಾನದ ಸ್ಥಿತಿಯನ್ನು ಹೇಳಿಬಿಡುತ್ತಾನೆ. ಅಲ್ಲಮನು ಇಂತಹ ವಿರುದ್ಧಾತ್ಮಕ ಚಿಂತನೆಗಳಿಂದಲೇ ತನ್ನ ವಿಶಿಷ್ಟತೆಯನ್ನು ಉಳಿಸಿಕೊಂಡಿದ್ದಾನೆ.

ಅನುಭಾವ ಕಾವ್ಯ ಎನ್ನುವುದು ವಿಶಿಷ್ಟ ಅನುಭವಗಳ ಅಭಿವ್ಯಕ್ತಿಯನ್ನು ಒಳಗೊಂಡದ್ದಾಗಿದೆ. ಅನುಭಾವ ಕಾವ್ಯವನ್ನು ನಾವು ಆಧ್ಯಾತ್ಮ ಸಾಧನೆಯನ್ನು ಚಿತ್ರಿಸುವ ಕವಿತೆಗಳು, ಪ್ರಾರ್ಥನಾರೂಪದ ಕವಿತೆಗಳು ಎಂದು ವಿಭಾಗಿಸಿ ಗುರುತಿಸಬಹುದಾಗಿದೆ.

ಆಧ್ಯಾತ್ಮ ಸಾಧನೆಯನ್ನು ಚಿತ್ರಿಸುವ ಕವಿತೆಗಳಲ್ಲಿ ದೇವರನ್ನು ಕಾಣಲು ಪಡುವ ಸಾಧನೆ, ಹೋರಾಟ, ತಳಮಳ, ಸಂಕಟದ ಧ್ವನಿಯ ಕೂಗು, ಕರೆಯುವಿಕೆ ಮುಂತಾದ ಅಂಶಗಳನ್ನು ವಿಷಯವಾಗುಳ್ಳ ಕವನಗಳನ್ನು ಕಾಣಬಹುದಾಗಿದೆ. ಪ್ರಾರ್ಥನಾ ರೂಪದ ಕವಿತೆಗಳಲ್ಲಿ ಮುಖ್ಯವಾಗಿ ದೇವರ ಬಗೆಗೆ ತೋರುವ ಶ್ರದ್ಧೆ, ಭಕ್ತಿ, ನಿಷ್ಠೆಯಂತಹ ಅಂಶಗಳನ್ನು ವಿಷಯವಾಗುಳ್ಳ ಕವನಗಳನ್ನು ಕಾಣಬಹುದಾಗಿದೆ.

ಶಿವಪ್ರಕಾಶರು ಅನುಭಾವ ಕಾವ್ಯದ ಈ ಎರಡೂ ವಿಭಾಗದಲ್ಲಿ ತಮ್ಮ ಕವನಗಳನ್ನು ರಚನೆ ಮಾಡಿದ್ದಾರೆ. ಅವರು ಮಾತನಾಡುವುದೆಲ್ಲ ಅನುಭಾವ ಜಗತ್ತಿನಲ್ಲೆ. ಗೋರಕ್ಷ, ನಾಗಾರ್ಜುನ, ಮಿಲರೇಪ, ಮರುಳ ಶಂಕರದೇವ, ಅಲ್ಲಮ ಪ್ರಭು, ಅಶದುಲ್ಲಾ ಖಾದ್ರಿವಲಿ, ಝುನ್, ಬುದ್ಧ ಮುಂತಾದ ಅನುಭಾವಿಗಳ ದೊಡ್ಡ ಪರಂಪರೆಯನ್ನೇ ತಮ್ಮ ಕಾವ್ಯದಲ್ಲಿ ತರುತ್ತಾರೆ. ಆ ಮೂಲಕ ಅನುಭಾವ ಕಾವ್ಯಲೋಕವೊಂದನ್ನು ನಿರ್ಮಿಸುತ್ತಾರೆ. ಶಿವಪ್ರಕಾಶರು ತಮ್ಮ ಕಾವ್ಯವನ್ನು ಕಟ್ಟುವುದು ಇಂತಹ ಅನುಭಾವಿಗಳ ಬಗ್ಗೆಯೇ. ಅಲ್ಲಮ ಯಾವ ಅನುಭಾವವನ್ನು ಬಹುದೊಡ್ಡ ಮಟ್ಟದಲ್ಲಿ ಚಿಂತಿಸಿದ್ದಾನೆಯೋ ಅದೇ ರೀತಿ ಶಿವಪ್ರಕಾಶರೂ ಈ ಅನುಭಾವಿಗಳ ಅನುಭಾವ ಜಗತ್ತಿನ ಬಗ್ಗೆ ಚಿಂತಿಸುತ್ತಾರೆ, ಪ್ರಶ್ನಿಸುತ್ತಾರೆ, ಮರು ವ್ಯಾಖ್ಯಾನವೊಂದನ್ನು ನೀಡುತ್ತಾರೆ.

ಶಿವಪ್ರಕಾಶರು ಅನುಭಾವ ಕಾವ್ಯವನ್ನು 'ಮಿಲರೇಪ' ಕವನದೊಂದಿಗೆ ಪ್ರಾರಂಭಿಸುತ್ತಾರೆ.

ಕನಸು ಕಂಡಿದ್ದೀಗ ಕಣ್ಣು ಮುಂದಿನ ನೋಟ;
ಬಿದ್ದ ಮನೆ, ಗೆದ್ದಲಿಕ್ಕಿದ್ದ ಕಂಬಗಳು,
ನವಣೆ ಹೊಲಗಳ ನಡುವೆ ಪಾಳುನೆಲ
ಇಲ್ಲಿದ್ದ ಮನೆಯ ಉಳಿದ ಕೊನೆಯ ಚಿಹ್ನೆಗಳು.

ಮಿಲರೇಪನಿಗೆ ಆಗುವ ಅತೀಂದ್ರಿಯ ಅನುಭವವನ್ನು ಕುರಿತು ಇಲ್ಲಿ ದಾಖಲಿಸಿದ್ದಾರೆ. ಅವನು ಕಂಡ ಕನಸು ನಿಜವಾಗಿರುವುದು ಅಲೌಕಿಕ ಶಕ್ತಿಯ ಸಾಧನೆಯಿಂದ ತಿಳಿಸುತ್ತಿದೆ. ಇಲ್ಲಿನ ಭಗ್ನ ಪ್ರತಿಮೆಗಳು ಲೌಕಿಕ ಜೀವನದ ನಿಶ್ವರತೆಯನ್ನು ಸಂಕೇತಿಸುತ್ತಿವೆ. ಶಾಶ್ವತವಲ್ಲದ ಅಶಾಶ್ವತ ಬದುಕನ್ನು ಕವಿತೆ ಕಟ್ಟಿಕೊಡುತ್ತದೆ. ಲೌಕಿಕ ಜೀವನದ ಆಸೆಯನ್ನು ತ್ಯಜಿಸಿ ಸತ್ಯವನ್ನು ಕಂಡುಕೊಳ್ಳುವ ಬುದ್ಧನ ಮಾದರಿಯನ್ನು ಕವಿತೆ ಧ್ಯಾನಿಸುತ್ತದೆ. ಬುದ್ಧನ ಆಸೆಯ ಬಗೆಗಿನ ಈ

ತಾತ್ವಿಕ ಚಿಂತನೆಯನ್ನು ಮಿಲರೇಪನ ವ್ಯಕ್ತಿತ್ವದಲ್ಲಿ ಕಾಣಬಹುದಾಗಿದೆ. ಅಲ್ಲಮನ ಮಹತ್ವದ ಜಿಜ್ಞಾಸೆಯಿರುವುದೂ ಈ ಲೌಕಿಕ, ಪ್ರಾಪಂಚಿಕ ಜಗತ್ತಿನಿಂದ ಅಲೌಕಿಕವೆನ್ನಬಹುದಾದ ಜಗತ್ತಿನೆಡೆಗೆ ಚಲಿಸುವುದೇ ಆಗಿದೆ. ಸಾಧನೆಗೆ ಲೌಕಿಕ ಜಗತ್ತು ಅಡ್ಡಿಯಾಗಿದೆ ಎನ್ನುವುದು ಅಲ್ಲಮನು ಕಂಡುಕೊಂಡ ಸತ್ಯವಾಗಿದೆ. ಅಲ್ಲಮನ ಪರಿಭಾಷೆಯಲ್ಲಿ ಕವಿತೆಯ ಮೇಲಿನ ಸಾಲುಗಳಲ್ಲಿನ ಪ್ರತಿಮೆಗಳನ್ನು ವಿಶ್ಲೇಷಿಸುವುದಾದರೆ ಬಿದ್ದಮನೆ, ಗೆದ್ದಲಿಕ್ಕಿದ್ದ ಕಂಬಗಳು, ಪಾಳುನೆಲ ಇವು ಬರೀ ಅಲ್ಲಿನ ಸನ್ನಿವೇಶದ ಭೌತಿಕ ಚಿತ್ರಣ ಮಾತ್ರವಲ್ಲ. ಇವು ಮಾನವನ ದೈಹಿಕ ಸ್ಥಿತಿಗಳನ್ನು ತಿಳಿಸುವ ಚಿತ್ರಣವೂ ಆಗಿದೆ. ಬಿದ್ದಿರುವ ಮನೆ. ಪಾಳುಬಿದ್ದ ನೆಲ ಇವೆಲ್ಲವೂ ನಿರ್ಜೀವಗೊಂಡ ದೇಹವನ್ನು ಸೂಚಿಸುತ್ತವೆ.

ಹೊಸ್ತಿಲನ್ನೊದೆಯುತ್ತ ಗುರುವಿನೆಡೆ ಹೊರಟಾಗ,
ತಾಯ ಮುಚ್ಚಿದ ಬಾಯ ಕಂಬನಿಯ ಬಿಂದು
ಸ್ಪರ್ಶಿಸಿದ್ದು;
ಎಲ್ಲಿರುವೆ ತಂದೆ, ನವಣೆ ಮೂಟೆಗಳ
ಹೊತ್ತು ತರುತ್ತಿದ್ದ ಕಟ್ಟಾಳು ರೈತ?
ತಾರಬಲ್ಲೆನೆ ತಿರುಗಿ
ಗೋಳಿಡುವ ಮಂಜುಗುಪ್ಪೆಗಳ ನಡುಮಧ್ಯ
ಇಟಕಿರಾಶಿಯ ಅಡಿ ನೆನಪಾಗಿ ಹೂತ
ಜೀವದಾತರ ಈಗ?

ಇಹದ ಸುಖವನ್ನು ತ್ಯಜಿಸಿ ಜ್ಞಾನಸಾಧನೆಗೆ ಹೊರಟ ಮಿಲರೇಪನಿಗೆ ತಾಯಿಯ ಭಾವುಕತೆಯಾಗಲೀ, ತಂದೆಯು ಏಕಾಂಗಿಯಾಗಿ ಪಡುತ್ತಿದ್ದ ಶ್ರಮವಾಗಲೀ ತಡೆಯಾಗಲಿಲ್ಲ. ಮಿಲರೇಪನದು ಭಾವುಕತೆ ಮತ್ತು ಸಂಬಂಧದ ಬಾಂಧವ್ಯವನ್ನು ಮೀರಿದ ದೃಢ ಮನಸ್ಸು. ಹೀಗಾಗಿ ಪ್ರಾಪಂಚಿಕಕ್ಕೆ ಸಿಲುಕದೆ ಪಾರಲೌಕಿಕವಾದದ್ದನ್ನು ಅರಸಿ ಹೊರಡಲು ಸಾಧ್ಯವಾಗಿದೆ. ಈ ಅಂಶವೇ ಕವಿತೆಯನ್ನು ಶ್ರೇಷ್ಠತೆಯ ಕಡೆಗೆ ಕೊಂಡೊಯ್ದಿರುವುದಾಗಿದೆ. ಕವಿತೆಯಲ್ಲಿ ಲೌಕಿಕ ಸುಖಗಳನ್ನು ತ್ಯಜಿಸಿದ ಮಿಲರೇಪ ಮಯಾಮಿಥ್ಯೆಯಿಂದ ಹೊರಬಂದು ಮಹಾಯೋಗಿಯಾಗಿ ಬದುಕಿ ಉಳಿದಿದ್ದಾನೆ. ಆದರೆ ಲೌಕಿಕ ಬಂಧದಲ್ಲಿಯೇ ಜೀವನ ಕಂಡುಕೊಂಡಿರುವವರು ಮಾಯಾಮಿಥ್ಯೆಗೆ ಸಿಲುಕಿ ತಮ್ಮ ದುರಂತ ಅಂತ್ಯವನ್ನು ಕಂಡುಕೊಂಡಿದ್ದಾರೆ. ಇದು ಅಲ್ಲಮನ ಆಶಯವೂ ಆಗಿದೆ. 'ಮಾಯಾಮಂಜಿನ ಸಂಗ್ರಹದ ಘಟಾಘಟಿತರೆಲ್ಲರೂ ಕುಂಜರನ ಪಂಜರದಲ್ಲಿ ಸಂಜೀವಿತರಾಗಿಪ್ಪರು'(509) ಎಂದು ಮಾಯಾಮಿಥ್ಯೆಗೆ ಸಿಲುಕಿದವರ ಸ್ಥಿತಿಯನ್ನು ಕುರಿತು ಹೇಳುತ್ತಾನೆ. ಇದನ್ನೇ ಕವಿ ಇಲ್ಲಿ ಸೂಕ್ಷ್ಮವಾಗಿ ನಿರೂಪಿಸಿದ್ದಾರೆ.

ಬಿದ್ದ ಇಟ್ಟಿಗೆಯ ಅಳಿಸಿದ್ದ ಮಂಜು.
ಬಿಳಿ ಗಗನಕ್ಕೆ ಬಾಯ್ಬಿಟ್ಟ ಗೆದ್ದಲು ಕಂಬ
ಹದಿನಾಲ್ಕು ಲೋಕಗಳ ಹಣೆಬರಹ;
ನಿರ್ವಾಣದಂಚಲ್ಲಿ ಬುದ್ಧ ಗುರುವಿಗೆ ಕೂಡ ಕಿಬ್ಬೊಟ್ಟೆ ನೋವು.
ಯಾಕೆ ಬಲಿಕೊಡಲಿ ಚಕ್ರದ ತಿರುಗಣಿಗೆ
ಅಪ್ಪ ಅಮ್ಮ ನಿಮ್ಮ?

ಕ್ಷಣಿಕವಾದ ಈ ದೇಹಪ್ರಪಂಚದ ಎಲ್ಲ ಸುಖಗಳನ್ನು ಬಿಡದೆ ಬಯಸುತ್ತದೆ. ಆದರೆ ಆ ಸುಖಗಳಿಂದ ದೂರವಾದಾಗ ಮಾತ್ರ ಜ್ಞಾನವೆಂಬುದು ಸಿದ್ಧಿಸುತ್ತದೆ. ಆದರೆ ಈ ಅರಿವನ್ನು ತಿಳಿಯದೇ ಹೋದವರು ಲಯವಾಗಿ ಹೋಗುತ್ತಾರೆ. ಬದುಕಿನಲ್ಲಿ ಆಸೆಯನ್ನು ಗೆದ್ದವನು, ಹಾಗೆಯೇ ಕಾಲದ, ಪ್ರಕೃತಿಯ ನಿಯಮಗಳಿಗೆ ಬದ್ಧನಾದವನು ಮಾತ್ರ ಬುದ್ಧನಾಗಲು ಸಾಧ್ಯ. ಇದೇ ಸತ್ಯದ ಸಾಕ್ಷಾತ್ಕಾರ, ಅನುಭಾವ ದರ್ಶನ. ಕವನದಲ್ಲಿ ಮಿಲರೇಪನಿಗೆ ಅಂತಹ ನಿತ್ಯವಲ್ಲದ ಅನಿತ್ಯದ ಅರಿವಿನ ಸಾಕ್ಷಾತ್ಕಾರವಾಗುತ್ತದೆ. ಪರಿನಿರ್ವಾಣದ ಕಾಲದಲ್ಲಿ ಸಹಿಸುವ ಶಕ್ತಿಯಿದ್ದ ಗುರು ಬುದ್ಧನಿಗೂ ಅನಿತ್ಯವಾದುದನ್ನು ಸೇವಿಸಿದ್ದರಿಂದ ಉಂಟಾದ ಬಾಧೆಯನ್ನು[1] ಕವಿ ಇಲ್ಲಿ ಉಲ್ಲೇಖಿಸುತ್ತಾರೆ. ಇಲ್ಲಿ ಮಿಲರೇಪ ಅನಿತ್ಯದಿಂದ ದೂರವಾಗಿ ಕಾಲಚಕ್ರಕ್ಕೆ ಅಡ್ಡಿಯನ್ನುಂಟುಮಾಡದೆ ಅನುಭಾವಿಯಾಗಿಬಿಡುತ್ತಾನೆ. ಅವನಲ್ಲಿದ್ದ ಅರಿವಿನ ಜಿಜ್ಞಾಸೆಯೇ ಅವನಿಗೆ ಸತ್ಯದ ದರ್ಶನ ಮಾಡಿಸುತ್ತದೆ. ಅಲ್ಲಮ ಅಜಿವಿನ ಬಗ್ಗೆ ಬಹುದೊಡ್ಡ ಮಟ್ಟದಲ್ಲಿ ಚಿಂತಿಸಿದ್ದಾನೆ. ಅರಿವು ಸಾಮಾನ್ಯವೇ$_{(361)}$, ಅಜಿವು ಬಜಿದೆ ಬಪ್ಪುದೆ? ಎಂದು ಕೇಳುತ್ತಾ, ಗುಹೇಶ್ವರ ಲಿಂಗವರಿಯಬಲ್ಲಡೆ ನಿನ್ನ ನೀ ತಿಳಿದು ನೋಡಾ$_{(373)}$ ಎಂದು ಹೇಳುತ್ತಾನೆ. ಅವನು ಹೇಳುವ ಹಾಗೆ ತನ್ನ ತಾನು ತಿಳಿದಾಗ ಮಾತ್ರವೇ ಲೋಕದಲ್ಲಿನ ಸತ್ಯದ ದರ್ಶನವಾಗುವುದು. ಅದು ಇಲ್ಲಿ ಮಿಲರೇಪನಿಗೆ ಸಾಧ್ಯವಾಗಿದೆ. ಹೀಗೆ ಈ ಎಲ್ಲಾ ಸೂಕ್ಷ್ಮ ಒಳನೋಟಗಳಿಂದ 'ಮಿಲರೇಪ' ಕವಿತೆ ವಿಶಿಷ್ಟವಾಗಿ ಕಾಣಿಸುತ್ತದೆ. ಇಲ್ಲಿ ಕವಿ ಶಿವಪ್ರಕಾಶರು ಭಾವನೆಯಾಚೆಗಿನ ವಿವೇಕಕ್ಕೆ ಶಬ್ದರೂಪ ನೀಡಲು[2] ಪ್ರಯತ್ನ ಪಟ್ಟಿದ್ದಾರೆ.

ಶಿವಪ್ರಕಾಶರ ಅನುಭಾವ ಕಾವ್ಯ ಪರಂಪರೆಯ ಮುಂದುವರಿಕೆಯಾಗಿ 'ನಾಗಾರ್ಜುನ' ಕವಿತೆಯನ್ನು ನೋಡಬಹುದಾಗಿದೆ. ನಾಗಾರ್ಜುನ ಎಂಬುವವನು 2ನೇ ಶತಮಾನದ ಶಾತವಾಹನರ ಕಾಲದಲ್ಲಿದ್ದ ಅನುಭಾವಿ, ದಾರ್ಶನಿಕ. ಈತನು ರಸಸಿದ್ಧ ಯೋಗ ಸಾಧನೆಯನ್ನು ಗಳಿಸಿದವನಾಗಿದ್ದ. ಇಂತಹ ಅನುಭಾವಿಯನ್ನು ಕುರಿತು ಕವಿ ಕವಿತೆಯೊಂದನ್ನು ಬರೆಯುತ್ತಾರೆ. ಈ 'ನಾಗಾರ್ಜುನ' ಕವಿತೆಯಲ್ಲಿ ಸಾಮಾಜಿಕ ಜ್ಞಾನದ ಅರಿವಾಗುತ್ತದೆ. ಆದ್ದರಿಂದ ಅವನು

ಶಾತವಾಹನ ಚಕ್ರವರ್ತಿಯನ್ನೂ ಪ್ರಶ್ನಿಸಬಲ್ಲ, ಅವನಿಗೆ ಉಪದೇಶಿಸಬಲ್ಲ ಹಾಗೂ ಬುದ್ಧಿ ಹೇಳಬಲ್ಲವನಾಗಿದ್ದಾನೆ.

ಭವದ ಚಿಪ್ಪೊಡೆದು
ದಿವದ ಗಡಿದಾಟಿ
ಬರದೆ ಹೋಗದೆ ಹೋದ
ಸಿದ್ಧರೆ
ಬುದ್ಧರೆ.

ಶಿವಪ್ರಕಾಶರು ಜೀವನವೆಂಬ ಬಂಧನದಿಂದ ಸಂಪೂರ್ಣವಾಗಿ ಹೊರಬಂದು ಮೋಕ್ಷವನ್ನು ಪಡೆಯದ ಬೋಧಿಸತ್ವರನ್ನು ಕುರಿತು ಮಾತನಾಡುತ್ತಾರೆ. ಬುದ್ಧನಾಗಲು ಸತ್ವವುಳ್ಳವರೂ ಕೂಡ ಲೌಕಿಕ ಭಾವನೆಗಳ ಸೆಳೆತಕ್ಕೆ ಒಳಗಾಗುತ್ತಿರುವ ವಿಷಾದನೀಯ ಸಂಗತಿಯನ್ನು ಪ್ರಸ್ತಾಪಿಸುತ್ತಾರೆ. ತಮ್ಮ ಸೀಮಿತ ಅರಿವಿನ ಸಿದ್ಧ ಚೌಕಟ್ಟನ್ನು ಮೀರದೆ ಸತ್ಯದ ಅರಿವನ್ನು ಕಾಣಲಾರದ ಸಿದ್ಧರನ್ನೂ, ಬುದ್ಧರನ್ನೂ ಪ್ರಶ್ನಿಸುತ್ತಾರೆ.

ಕವಿತೆಯ ಮುಂದಿನ ಭಾಗದಲ್ಲಿ ಕವಿ ನಾಗಾರ್ಜುನನಿಗೆ ಇದ್ದಿರಬಹುದಾದ ಶಂಕೆಯನ್ನು ವ್ಯಕ್ತಪಡಿಸುತ್ತಾರೆ.

ಹೊಳೆ ಬಿಸಿಲು ಹೊನ್ನ ಕಳಶಗಳು
ಬಿಳಿ ಮುತ್ತು ಹವಳ ನೀಲಮಣಿ ಪಚ್ಚೆ
ಹೊತ್ತು ತರುವ ಮಣ್ಣು ಗಾಡಿಗಳು
: : : : : : : : : : : : : : : : : : : :
ಕಡಲಾಚೆ ನಾಡುಗಳ ಛಾತಿ ಕೆಣಕುವ
ಹರಿತುರಗ ಸೇನೆ ಶಸ್ತ್ರಾಗಾರಗಳು
ವಿಶಾಲ ಮಂದಿರ ವಿಹಾರಗಳು
ಸಂಗೀತ ನಾಟ್ಯ ಗೋಷ್ಠಿಗಳು
ತರ್ಕ ತಂತ್ರ ಸಿದ್ಧಾಂತ ಶಾಸನ
ಸಾರ ಗಟ್ಟಿ ಗಟ್ಟಿ
ಕಟ್ಟಿಟ್ಟ ಗ್ರಂಥರಾಶಿ
ಎಲ್ಲೆಲ್ಲೂ ಯಾಕೆ ನಿಟ್ಟುಸಿರು?
ಯಾಕೆ ಹಸಿವು?
ಯಾಕೆ ನೋವು?
ಕಾಡುಕತ್ತಲೆ ದಂಡೆತ್ತಿ
ನುಗ್ಗಿ ರಾಜಧಾನಿಗಳಲ್ಲಿ
ಎದೆ ಎದೆಗೂಡಲ್ಲಿ ಸಿಂಹ ಶಿಬಿರ
ಗುಳ್ಳೆನರಿಗಳ ನ್ಯಾಯ
ಬುದ್ಧಾಸನದಲ್ಲಿ ಬಕನಧ್ಯಾನ.

ಕವಿ ಇಲ್ಲಿ ಸಂಪದ್ಭರಿತ ಮತ್ತು ಸುಖೀ ರಾಜ್ಯದ ವಿವರಣೆಯನ್ನು ನೀಡುತ್ತಲೇ ಸಮಾಜದ ತಾರತಮ್ಯ ಮುಖವನ್ನೂ ತೋರಿಸಲು ಪ್ರಯತ್ನಿಸುತ್ತಾರೆ. ಸಮಾಜದಲ್ಲಿರುವ ಹಸಿವು, ನೋವು, ಹಿಂಸೆ, ಶೋಷಣೆ ಮುಂತಾದವುಗಳ ಜಿಜ್ಞಾಸೆಗೆ ತೊಡಗುತ್ತಾರೆ. ನಾಗಾರ್ಜುನನಲ್ಲಿ ಈ ರೀತಿಯ ಚಿಂತನೆಯ ಕ್ರಮವೊಂದು ಇದ್ದಿರುವುದನ್ನು ಕಾಣಬಹುದಾಗಿದೆ. ರಾಜ್ಯವು ಮುತ್ತು, ರತ್ನ, ಚಿನ್ನ ಮುಂತಾದ ಎಲ್ಲಾ ಬಗೆಯ ಐಶ್ವರ್ಯದಿಂದ, ಸಮರ್ಥ ಸೈನ್ಯದಿಂದ, ಮನಸ್ಸಿಗೆ ಮುದ ನೀಡುವ ಎಲ್ಲಾ ಬಗೆಯ ಸಾಂಸ್ಕೃತಿಕ ಕಲೆಗಳಿಂದ, ಎಲ್ಲಾ ಬಗೆಯ ಭೌತಿಕ ಮತ್ತು ಭೌದ್ಧಿಕ ಶಕ್ತಿಗಳಿಂದ ತುಂಬಿ ಸಂಪದ್ಭರಿತವಾಗಿದ್ದರೂ ಕೂಡ ಅದೇ ರಾಜ್ಯದಲ್ಲಿ ಹಸಿವು, ನೋವು, ಅಜ್ಞಾನ, ಕುತಂತ್ರ ಅನ್ಯಾಯ, ಮೋಸ ಮುಂತಾದವುಗಳೆಲ್ಲಾ ತಾಂಡವಾಡುತ್ತಿದೆ. ಇಲ್ಲಿ ಸಿದ್ದಾರ್ಥನಿಗೆ ಆದ ಮೂರು ಅನುಭವಗಳು ಅವನನ್ನು ಜ್ಞಾನದ, ಸತ್ಯದ ಅರಸುವಿಕೆಯೆಡೆಗೆ, ಬುದ್ಧನಾಗುವೆಡೆಗೆ ಪ್ರೇರೇಪಿಸಿದ ಸಂಗತಿಯಂತೆಯೇ ನಾಗಾರ್ಜುನನಿಗೆ, ಶಾತವಾಹನರ ರಾಜ್ಯದಲ್ಲಿ ಇಷ್ಟೆಲ್ಲಾ ಭೌತಿಕ ಸುಖೀ ಸಾಧನಗಳು ಇದ್ದರೂ ಕೂಡ ಮಾನವನ ಹಸಿವನ್ನು, ನೋವನ್ನು ಹಿಂಗಿಸುವ ಕನಿಷ್ಠ ಜೀವನವೊಂದನ್ನು ರೂಪಿಸದ ಸಮಾಜಲ್ಲಿ ಸತ್ಯ, ಶಾಂತಿಗಳು ನೆಲಸದ ಹೊರತು ಆ ರಾಜ್ಯ ಅಸುಖಿಯಾಗಿರುತ್ತದೆ ಎಂಬ ನಿಲುವಿದೆ. ಮಾನವನ ಅಭಿವೃದ್ಧಿ ಕಾರಣದ ರಾಜ್ಯ ಯಾವ ಸುಖೀಸಾಧನಗಳಿಂದ ತುಂಬಿ ತುಳಿಕಿದರೂ ಅದು ನಿರರ್ಥಕವಾಗುತ್ತದೆಂದು ಅವನ ತಿಳುವಳಿಕೆಯಾಗಿದೆ. ಎಷ್ಟೆಲ್ಲಾ ಸಂಪತ್ತು ಇದ್ದರೂ ಕೂಡ ರಾಜ್ಯದಲ್ಲಿ ನಿಟ್ಟುಸಿರು, ಹಸಿವು; ನೋವು, ಅಜ್ಞಾನ, ಅನ್ಯಾಯ, ಮೋಸ ವಂಚನೆಗಳು ಯಾಕಿವೆ? ಎಂಬ ಮೂಲ ಜಿಜ್ಞಾಸೆ ಕವಿತೆಯಲ್ಲಿ ವ್ಯಕ್ತವಾಗುತ್ತದೆ.

ಕವಿತೆಯ ಈ ಭಾಗ ಸಮಾಜದ ಶೋಷಣೆಯ ಅಸಮಾನತೆಯ ತಾರತಮ್ಯದ ಮುಖವನ್ನು ಎತ್ತಿ ತೋರಿಸುತ್ತಿದೆ. ಮುತ್ತು ರತ್ನಗಳು, ವಿಹಾರಗಳು, ಸಂಗೀತ-ನಾಟ್ಯ ಗೋಷ್ಠಿಗಳು ಮುಂತಾದವುಗಳೆಲ್ಲವೂ ಉನ್ನತವರ್ಗದವರಿಗಾಗಿ, ಶ್ರೀಮಂತರಿಗಾಗಿ ಉಳಿಸಿದ್ದರೆ, ಅದೇ ಸಮಾಜದಲ್ಲಿ ಹಸಿವು, ನಿಟ್ಟುಸಿರು, ನೋವುಗಳೆಲ್ಲಾ ತಳವರ್ಗದವರ, ಶ್ರಮಿಕರ, ಬಡವರ ಪಾಲಾಗಿರುವುದನ್ನು ಕಾಣಬಹುದಾಗಿದೆ. ಶೋಷಕ ಸಮಾಜದ ಚಿತ್ರಣವನ್ನು ಈ ಕವಿತೆ ಕೊಡುತ್ತದೆ. ಕುವೆಂಪುರವರ ಕಲ್ಕಿ ಪದ್ಯದ ಅಸಮಾನತೆಯ ದಟ್ಟ ಪ್ರತಿಮೆಗಳು ಇಲ್ಲಿ ಥಟ್ಟನೆ ನೆನಪಾಗುತ್ತವೆ.

ಧನಿಕರ ಮನೆಗಳು ಒಂದೆಡೆ ನಿಂತಿವೆ,
ಬಡವರ ಗುಡಿಸಲು ಒಂದೆಡೆ ನಿಂತಿವೆ,

ಜ್ಯೋತಿಯ ಮಣಿದೀಪಗಳಲ್ಲಿ;
ಕತ್ತಲು, ಕಗ್ಗತ್ತಲು ಇಲ್ಲಿ!

ಹಾಡಿನ ಸುಣ್ದನಿಯತ್ತ,
ಗೋಳಿನ ನೀಳ್ದನಿಯಿತ್ತ.
ಕೂಳನು ಹೆಮ್ಮೆಗೆ ಬಿಸುಡುವರಲ್ಲಿ,
ಹೊಟ್ಟೆಗೆ ಇಲ್ಲದೆ ಕೊರಗುವರಿಲ್ಲಿ!

ಆ ಕಡೆ ಉದ್ಯಾನ
ಈ ಕಡೆ ಶ್ಮಶಾನ!

ಪೀತಾಂಬರಗಳ ಹೊದೆಯುವರಲ್ಲಿ
ಕೌಪೀನಕೆ ಚಿಂದಿಯು ಸಿಗದಿಲ್ಲಿ!

–ಕಲ್ಕಿ[3]

ಈ ವೈರುಧ್ಯಗಳ ಜಿಜ್ಞಾಸೆಯೇ ನಾಗಾರ್ಜುನನನ್ನು ಬಹಳಷ್ಟು ಕಾಡಿದೆ, ಅವನನ್ನು ಅಸಮಾಧಾನಿಯನ್ನಾಗಿಸಿದೆ. ಅದೇ ಅನುಭಾವಿಯೊಬ್ಬನ ದುರಂತ ಅಂತ್ಯಕ್ಕೆ ಮುನ್ನುಡಿಯೂ ಆಗಿದೆ.

ಇದೇ ಕವಿತೆಯ ಮುಂದಿನ ಭಾಗದಲ್ಲಿ ಶಾತಕರ್ಣಿಗೆ ನಾಗಾರ್ಜುನ ಬರೆದಿದ್ದೆನ್ನಲಾದ ಪತ್ರವನ್ನು ಕವಿ ತಮ್ಮ ಜ್ಞಾನಚಕ್ಷುವಿನಿಂದ ತಮ್ಮದೇ ದಾಟಿಯಲ್ಲಿ ಪುನರ್‌ಸೃಷ್ಟಿಸುತ್ತಾರೆ.

ಹೊತ್ತಿಸಿಕೋ ನಿನ್ನ ಕಣ್ಣಲ್ಲಿ ನನ್ನ ಬೆಳಕನ್ನು
ಕಟ್ಟಿಕೋ ನಿನ್ನ ಎದೆಯಲ್ಲಿ
ಕನಸು ಹಕ್ಕಿ ಗೂಡನ್ನು

ಶಾತಕರ್ಣಿಗೆ ನಾಗಾರ್ಜುನ ಜ್ಞಾನದ ಅನುಭವವನ್ನು ಪಡೆಯುವಂತೆ, ಆಧ್ಯಾತ್ಮಿಕ ಚಿಂತನೆಯನ್ನು ಹೊಂದುವಂತೆ ಹೇಳುತ್ತಿದ್ದಾನೆ. ಸಮಾಜದ ಅಸಮಾನತೆಗೆ, ಶೋಷಣೆಗೆ ಹಾಗೂ ಇಲ್ಲಿರುವ ಅಸಂಖ್ಯ ವೈರುಧ್ಯಗಳಿಗೆ ಬೇಸತ್ತ ನಾಗಾರ್ಜುನ, ರಾಜ್ಯದ ರಾಜನಾದ ಶಾತಕರ್ಣಿಗೆ ತನ್ನ ಜೀವದ ಜ್ಯೋತಿಯನ್ನು ಅರ್ಪಿಸಿಕೊಳ್ಳುವಂತೆಯೂ ಈ ಮೂಲಕ ಹೇಳುತ್ತಿದ್ದಾನೆ.

ಈ ದಂಡೆ ಆ ದಂಡೆ
ನಡುವೆ
ಕುಸಿದರೂ ಸೇತುವೆ
ನದಿ ಹರಿಯುತ್ತಲೇ ಇದೆ
ನಡೆಸು ನಡುನೀರಲ್ಲಿ ಎಚ್ಚರದಿಂದ
ಭವದ ದೋಣಿಯನ್ನು

ಲೌಕಿಕ ಜೀವನಕ್ಕೂ ಅಲೌಕಿಕ ಜೀವನಕ್ಕೂ ನಡುವೆ ಇದ್ದ ಮನಸ್ಸಿನ ಇಚ್ಛಾ ಸೇತುವೆ ಕುಸಿದು ಹೋಗಿದೆ. ಹಾಗಾಗಿ ಲೌಕಿಕ ಜೀವನದಿಂದ ಅಲೌಕಿಕತೆ ಕಡೆಗೆ ಸಾಗಲು ಭೋಗದ ಲೋಲುಪತೆಯಲ್ಲಿ ಮುಳುಗಿದ ಶಾತಕರ್ಣಿಯಂತಹ ರಾಜರಿಗೆ ಕಷ್ಟವಾಗುತ್ತದೆ. ಆದ್ದರಿಂದ ನಾಗಾರ್ಜುನ ಶಾತಕರ್ಣಿಗೆ ಸೇತುವೆ ಕುಸಿದರೂ ನದಿ ಹರಿಯುತ್ತಿದೆ. ಲೌಕಿಕದ ವಿಷಯ ರಸಗಳಿಂದಲೇ ತುಂಬಿರುವ ಅದರಲ್ಲಿ ನಿನ್ನ ಜೀವನವನ್ನು ಎಚ್ಚರದಿಂದ ನಡೆಸು ಎಂದು ತಿಳುವಳಿಕೆ ಹೇಳಿದ್ದಾನೆ. ಅಲ್ಲಮನೂ ಕೂಡ ಭವದ ದೋಣಿಯನ್ನು ನಡೆಸುವ ವಿಚಾರವಾಗಿ ತನ್ನ ವಚನವೊಂದರಲ್ಲಿ(678) ಕೆಲವು ಮಾತುಗಳನ್ನು ಹೇಳಿದ್ದಾನೆ. ಭವದ ಸಾಗರದ ಮಧ್ಯದಲ್ಲಿ ಇರುವ ಜಡತನುವೆಂಬ ಪಾಷಾಣವನ್ನು, ಅದರೊಳಗೆ ಇರುವ ವಿಷಯ ಕೂಪವನ್ನು ತೊಡೆದುಹಾಕಿ ಅಲ್ಲಿ ಮಹಾಜ್ಞಾನಾಗ್ನಿಯನ್ನು ಹೊತ್ತಿಸಬೇಕು. ಅದಕ್ಕೆ ಕ್ರಿಯಾಶಕ್ತಿಯ ಅಗತ್ಯವಿದೆ. ಕ್ರಿಯಾಶಕ್ತಿ ಅಳಿದಲ್ಲಿ ಭವವೆಂಬುದೂ ಅಳಿದು ಹೋಗುತ್ತದೆ ಎಂದು ಹೇಳುತ್ತಾನೆ. ಅದು ಕವಿತೆಯಲ್ಲಿ ಸೇತುವೆಯೆಂಬುದು ಕುಸಿದು ಹೋದರೂ ಕ್ರಿಯಾಶಕ್ತಿಯಿಂದ ನೀರಿನಲ್ಲಿಯೇ ಭವದ ದೋಣಿಯನ್ನು ನಡೆಸಬೇಕು ಎಂಬ ಆಶಯವನ್ನು ಕವಿ ಇಲ್ಲಿ ನೀಡಿದ್ದಾರೆ.

ಅಡಿಗರಲ್ಲಿಯೂ ಕೂಡ ನಾವು ಇದೇ ರೀತಿಯ ಜಿಜ್ಞಾಸೆಯನ್ನು ಕಾಣಬಹುದಾಗಿದೆ.

ಭಗ್ನ ಸೇತುವೆಯಾಚೆ ರೈಲು ನಿಂತು
ಸೀಟಿ ಹಾಕಿತು ಮೂರು ಬಾರಿ; ಹೊರಟಿತು ಹಿಂದೆ;
ಹಿಮಗಿರಿಯ ಕಂದರ.[4]

ಅಡಿಗರು ಈ ಕವಿತೆಯಲ್ಲಿ ಲೌಕಿಕ ಸುಖಗಳನ್ನು ಮನಸ್ಸಿಲ್ಲದ ಮನಸ್ಸಿನಿಂದ ತ್ಯಜಿಸಿ ಅಲೌಕಿಕದತ್ತ ಹೊರಡಬೇಕಾದ ಪರಿಸ್ಥಿತಿಯಲ್ಲಿದ್ದವನಿಗೆ ಸೇತುವೆ ಭಗ್ನಗೊಂಡು ಅವನ ಮನಸ್ಥಿತಿಗೆ ತಕ್ಕಂತೆ ಲೌಕಿಕದಲ್ಲೇ ಉಳಿಯಲು ಅನುಕೂಲ ಮಾಡಿಕೊಟ್ಟಿದೆ. ಶಿವಪ್ರಕಾಶರೂ ಕೂಡ ಭಗ್ನಗೊಂಡ ಸೇತುವೆಯ ಪ್ರತಿಮೆಯನ್ನು ಅದೇ ಅರ್ಥದ ನೆಲೆಯಲ್ಲಿ ತಮ್ಮ ಕವಿತೆಯಲ್ಲಿ ಬಳಸುತ್ತಿದ್ದಾರೆ. ಅಡಿಗರ ಕವನದಲ್ಲಿನ ಭಗ್ನತೆ ಹೊಳವಿಗೆ ದಾರಿಯಾಗದೆ ಅಲ್ಲೇ ನಿಂತಿದೆ. ಆದರೆ ಶಿವಪ್ರಕಾಶರ ಕವಿತೆಯಲ್ಲಿ ಅದು ಅಲ್ಲೇ ನಿಲ್ಲದೆ ಬೇರೊಂದು ಮಾರ್ಗದ ಮೂಲಕ ಮುಂದುವರಿಯುವಂತೆ ಸೂಚಿಸುತ್ತದೆ.

ಶಿವಪ್ರಕಾಶರು, ನಾಗಾರ್ಜುನನ ಅಂತಿಮ ಕ್ಷಣದ ಮಾತುಗಳನ್ನು ಶಾತಕರ್ಣಿಗೆ ಹೀಗೆ ಹೇಳುತ್ತಿದ್ದಾರೆ.

ಹೋಗಿ ಬರುವೆ ಇನ್ನು
ಹೊರಡು ನೀ ಮತ್ತೆ ಅವಲೋಹಗಳ ಗಣಿಗೆ
ಅಳಲು ಕರೆಯುವ ಧರೆಗೆ
ಹುಲುಕಡ್ಡಿ ಕ್ರಿಮಿಕೀಟಗಳ ಮೊರೆಗೆ

ಇಲ್ಲಿನ ನಾಗಾರ್ಜುನನಂತಹ ಅನುಭಾವಿಗೆ ಈ ಧರೆ ತಂದಿರಬಹುದಾದ ಬೇಸರ ಇಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ.

ಈ ಜೀವನ ನೋವು-ದುಃಖಗಳಿಂದ ತುಂಬಿದುದಾಗಿದೆ. ಅವನ ದೃಷ್ಟಿಯಲ್ಲಿ ಈ ಭೂಮಿಯಲ್ಲಿ ವಾಸಿಸುವ ಜನರು ಕ್ರಿಮಿಕೀಟಗಳಾಗಿದ್ದಾರೆ, ದುಷ್ಟ ಜಂತುಗಳಾಗಿದ್ದಾರೆ. ಶಾತಕರ್ಣಿಗೆ ಇಂತಹ ಮಾಯೆಯ ಬಂಧನಕ್ಕೆ ಒಳಗಾದವರ ಮಧ್ಯೆಯೇ ಬದುಕುವಂತೆ ನಾಗಾರ್ಜುನ ಹೇಳುತ್ತಿರುವುದು ವ್ಯಂಗ್ಯದ ಮಾತಾಗಿದೆ. ನಾಗಾರ್ಜುನ ಇಲ್ಲಿ ಮಾಯಾಮಿಥ್ಯೆಯಿಂದ ಬಿಡುಗಡೆ ಹೊಂದಿ ಅರಿವಿನ ಸಾಕ್ಷಾತ್ಕಾರ ಪಡೆದವನಾಗಿದ್ದಾನೆ.

ಈ ಹಿಂದೆಯೇ ತಿಳಿಸಿದಂತೆ ಅನುಭಾವ ಕಾವ್ಯದಲ್ಲಿ ಹುಡುಕಾಟ ಅಥವಾ ನಿರಂತರ ಶೋಧವೂ ಕೂಡ ಪ್ರಮುಖ ಅಂಶವಾಗಿರುತ್ತದೆ. ಅಂತಹ ಹುಡುಕಾಟದ ಪ್ರಶ್ನೆಯೇ ಮುಖ್ಯ ಕೇಂದ್ರವಾಗುಳ್ಳ ಶಿವಪ್ರಕಾಶರ ಹಲವು ಕವಿತೆಗಳಲ್ಲಿ 'ನದಿಯ ನಾಡಿನಲ್ಲಿ' ಎಂಬ ಕವಿತೆ ಮುಖ್ಯವಾಗಿದೆ. ಈ ಕವಿತೆಯಲ್ಲಿ ಗೋರಕ್ಷನೆಂಬ ನಾಥಪಂಥದ ಅನುಭಾವಿಯೊಬ್ಬ ತನ್ನ ಗುರುವಿಗಾಗಿ ನಡೆಸಿದ ಹುಡುಕಾಟದ ಚಿತ್ರಣವಿದೆ. ಹನ್ನೊಂದು ಭಾಗದಲ್ಲಿ ವಿಸ್ತರಿಸಿಕೊಂಡಿರುವ ಈ ಕವಿತೆ ಬರೀ ಗುರುವಿನ ಹುಡುಕಾಟಃಕ್ಕಷ್ಟೇ ಸೀಮಿತವಾಗಿರದೆ ಅವನಿಗೆ ಆದ ಲೌಕಿಕಾನುಭವ ಮತ್ತು ಸತ್ಯದ ದರ್ಶನವನ್ನು ನಮಗೆ ತಿಳಿಸುತ್ತದೆ. ಇಲ್ಲಿ ಗುರುವನ್ನು ಹುಡುಕುವುದು ನೆಪಮಾತ್ರಕ್ಕೆ ಆದರೆ ಅವನು ನೈಜವಾಗಿ ಕಾಣಲಾಗದ್ದನ್ನು ಕಾಣಲು ಪ್ರಯತ್ನಿಸುತ್ತಿದ್ದಾನೆ. ಅದಕ್ಕಾಗಿ ಅರಸುತ್ತಿದ್ದಾನೆ. ಹನ್ನೆರಡನೇ ಶತಮಾನದಲ್ಲಿ ಶಿವಶರಣೆ ಅಕ್ಕಮಹಾದೇವಿಯು ಚೆನ್ನಮಲ್ಲಿಕಾರ್ಜುನನನ್ನು ಕಾಣಬೇಕೆಂಬ ತೀವ್ರವಾದ ಹಂಬಲದಿಂದ ಅವನನ್ನು ಹೇಗೆ ಹುಡುಕಿ ಹೊರಟಳೋ ಹಾಗೆಯೇ ಗೋರಕ್ಷನೂ ಕೂಡ ತನ್ನ ಗುರುವನ್ನು ಹುಡುಕಿ ಹೊರಟವನಾಗಿದ್ದಾನೆ. ಈ ಇಬ್ಬರೂ ಕೂಡ ಆತ್ಮಜ್ಞಾನವನ್ನು ಕಾಣದೆ ಮಾಡಿದ ವಿಫಲ ಪ್ರಯಾಣವಷ್ಟೆ. ಈ ಕವಿತೆಯ ಕೊನೆಯಲ್ಲಿ ಗೋರಕ್ಷನಿಗೆ ತನ್ನ ಗುರು ಮತ್ಸ್ಯೇಂದ್ರ ಕೊನೆಗೂ ಕಾಣುವುದಿಲ್ಲ. ಆದರೆ ಅವನ ಧ್ವನಿ ಮಾತ್ರ ಕೂಗಿದಂತೆ ಭಾಸವಾಗುತ್ತದೆ. ಕವಿತೆಯಲ್ಲಿ ಘೋರ ನೀರವದ ಚಿತ್ರಣವಿದೆ. ಅಂತಹ ಘೋರ ನೀರವದಲ್ಲೂ ಆ ಧ್ವನಿಯನ್ನು ಕವಿತೆಯಲ್ಲಿ ತಂದಿರುವುದು ನಿಶ್ಯಬ್ದದ ಶಬ್ದವನ್ನು ಹಿಡಿಯುವ ಪ್ರಯತ್ನವಾಗಿದೆ.

'ಗೋರಕ್ಷ ಗೋರಕ್ಷ
ಎಲ್ಲಿರುವೆ ಎಲ್ಲಿರುವೆ'

ಮತ್ಸ್ಯೇಂದ್ರನ ಧ್ವನಿ ಅರಿವಿನ ಮರವೆಯಿಂದ ತುಂಬಿರುವ ತನ್ನ ಶಿಷ್ಯ ಗೋರಕ್ಷನನ್ನು ಎಚ್ಚರಿಸುತ್ತಿದೆ. ಗೋರಕ್ಷನ ಅರಿವಿನ ನೆಲೆಯನ್ನು, ಆವರಿಸಿರುವ ಅಜ್ಞಾನವನ್ನು ಆ ಧ್ವನಿ ಪ್ರಶ್ನಿಸುತ್ತಿದೆ. ಇದು ಅಲ್ಲಮನು ಮಾಡುವ ಅನುಭಾವದ ಹೊಸ ವ್ಯಾಖ್ಯಾನದ ದೃಷ್ಟಿಯಾಗಿದೆ. ಅಲ್ಲಮ ತನ್ನ ವಚನವೊಂದರಲ್ಲಿ 'ನಿಶ್ಯಬ್ದವೆ ಅನುಭಾವ'(374) ಎಂದು ಹೇಳುವ ಮೂಲಕ ಅನುಭಾವದ ಅರ್ಥವನ್ನು ವಿವಿಧ ನೆಲೆಗಳಿಗೆ ವಿಸ್ತರಿಸಿದ್ದಾನೆ.

ಮತ್ಸ್ಯೇಂದ್ರ ನಿನ್ನ ದನಿ. . . . .ನಿನ್ನದೇ. . . . .
ಎಲ್ಲಿರುವೆ ಎಲ್ಲಿರುವೆ
ಮತ್ಸ್ಯೇಂದ್ರ. . . . . ಮತ್ಸ್ಯೇಂದ್ರ . . . .
ಗೋರಕ್ಷ. . . . . .
ಮತ್ಸ್ಯೇಂದ್ರ. . . . . .

ಗೋರಕ್ಷನಿಗೆ ಮಾಯಾಮಿಥ್ಯೆಯು ಆವರಿಸಿದೆ. ಆದ್ದರಿಂದ ತನ್ನ ಗುರುವನ್ನು ಹೊರಗಿನ ಲೋಕದಲ್ಲಿ ಹುಡುಕುತ್ತಿದ್ದಾನೆ. ತನ್ನ ಅಂತರಂಗದಲ್ಲೇ ಇರುವ ಮತ್ಸ್ಯೇಂದ್ರನನ್ನು ಕಾಣದವನಾಗಿದ್ದಾನೆ. ಇಲ್ಲಿ ಕೇಳುತ್ತಿರುವ ಮತ್ಸ್ಯೇಂದ್ರನ ದನಿ ಹೊರಗಿನ ಪ್ರಪಂಚದಿಂದ ಬರುತ್ತಿರುವಂಥದ್ದಲ್ಲ ಅದು ಅವನ ಮನಸ್ಸಿನಲ್ಲಿ ನೆಲೆಗೊಂಡ ಆಂತರಿಕ ದನಿಯಾಗಿದೆ. ಕವಿ ಇಲ್ಲಿ ಕಳೆದು ಹೋದ ಗುರು ಗೋರಕ್ಷನ ಅಂತರಂಗದಲ್ಲೇ ಇದ್ದಾನೆ. ಅದನ್ನು ತಿಳಿಯದೆ ಸುಮ್ಮನೆ ವ್ಯರ್ಥ ಹುಡುಕಾಟ ಸಲ್ಲದು ಎಂಬುದನ್ನು ಬಹಳ ಸೂಕ್ಷ್ಮವಾಗಿ ಮನವರಿಕೆ ಮಾಡಿಕೊಡುತ್ತಾರೆ. 'ಅಜಿವು ಅಂತರಂಗದಲ್ಲಿ ಭರಿತವಾಗಿಪ್ಪುದಾಗಿ ಮನೋಮುಕ್ತನು ನೀನು, ನೋಡಯ್ಯ!'(1046) ಎಂದು ಅಲ್ಲಮ ಅಂತರಂಗದ ಅರಿವನ್ನು ಕುರಿತು ಹೇಳುತ್ತಾನೋ ಆ ಅರಿವು ಗೋರಕ್ಷನ ಅಂತರಂಗದಲ್ಲಿ ಇನ್ನೂ ಭರಿತವಾಗಿಲ್ಲ. ಆದ್ದರಿಂದ ಆ ಕೂಗು ಅವನಿಗೆ ಕೇಳಿಸುತ್ತಿದೆಯೇ ವಿನಃ ಅದರ ನೆಲೆಯನ್ನು ಅವನಿಗೆ ಗುರುತಿಸಲಾಗುತ್ತಿಲ್ಲ. ಇಂತಹ ದೇಹದ ಅನಿತ್ಯತೆಯನ್ನು ಅಲ್ಲಮ ಗೋರಕ್ಷನಿಗೆ ಬೋಧಿಸಿದಂತೆ ಪ್ರಭುದೇವರ ಪುರಾಣ(8–126) ಬರೆದ ಹರೀಶ್ವರನು ಚಿತ್ರಿಸಿದ್ದಾನೆ.[5]

ಸಾಮಾಜಿಕವಾದ ಸಾಮಾನ್ಯ ಕಾಯಕದಿಂದಲೇ ಆಧ್ಯಾತ್ಮಿಕ ಅನುಭವವನ್ನು ಪಡೆಯುವುದು ಅನುಭಾವ ಕಾವ್ಯದ ಪ್ರಮುಖ ಅಂಶಗಳಲ್ಲಿ ಒಂದಾಗಿದೆ. ಈ ರೀತಿಯ ಅನುಭಾವದ ನೆಲೆಯೊಂದನ್ನು ಮುಂದೆ ಕೆ.ಬಿ.ಸಿದ್ದಯ್ಯನವರ ಕಾವ್ಯಗಳಲ್ಲಿ ಕಾಣಬಹುದಾಗಿದೆ. ಜನರ ಕಾಯಕ ತತ್ವದಿಂದಲೇ ಆಧ್ಯಾತ್ಮವನ್ನು ಕಾಣುವ ವಿಶಿಷ್ಟತೆ ಸಿದ್ದಯ್ಯನವರ ಕಾವ್ಯದ ಕೇಂದ್ರ ವಿಷಯವಾಗಿರುವುದನ್ನು ಕಾಣಬಹುದಾಗಿದೆ. ಕವಿ ಶಿವಪ್ರಕಾಶರೂ ಕೂಡ ತಮ್ಮ 'ಕಲ್ಲು ಕುಟಿಗರು'

ಕವಿತೆಯಲ್ಲಿ ಕಲ್ಲು ಕುಟಿಗರ ಕಾಯಕದ ಜೊತೆಗೆ ಅವರ ಎದೆಬಡಿತವನ್ನು ಅರಿಯುವ ಪ್ರಯತ್ನ ಮಾಡಿದ್ದಾರೆ.

ಹೀಗೆ ಅಲ್ಲಮನಂತೆ ಶಿವಪ್ರಕಾಶರೂ ಕೂಡ ಅನುಭಾವದ ಬಗ್ಗೆ ಹೆಚ್ಚು ಚಿಂತಿಸಿದ್ದಾರೆ. ಅನುಭಾವ ಕಾವ್ಯ ಲೋಕವೊಂದನ್ನು ತಮ್ಮ ಕವಿತೆಗಳಲ್ಲಿ ನಿರ್ಮಿಸಿದ್ದಾರೆ. ಈ ದೃಷ್ಟಿಯಿಂದ ಮಧುರಚೆನ್ನರ ನಂತರ ಶಿವಪ್ರಕಾಶ್‌ರವರು ಪ್ರಮುಖರಾಗುತ್ತಾರೆ.

3(ಬಿ) ಶಿವಪ್ರಕಾಶರ ಶೈವದಾರ್ಶನಿಕತೆ ಮತ್ತು ಮೀರುವ ಕ್ರಮ

ಶೈವರು ಮೂಲತಃ ಯಜ್ಞೋಪವೀತಧಾರಿಗಳು ಮತ್ತು ಅಗ್ನಿ ಪೂಜಕರಾಗಿರುತ್ತಾರೆ. ಲಿಂಗಪ್ರತಿಷ್ಠೆ, ದೇವಸ್ಥಾನಗಳ ನಿರ್ಮಾಣ, ಸ್ಥಾವರ ಲಿಂಗದ ಕಲ್ಪನೆ, ಧಾರ್ಮಿಕ ಆಚರಣೆಗಳು, ತಾತ್ವಿಕ ವಿವೇಚನೆ ಮುಂತಾದವು ಪ್ರಮುಖ ಶೈವ ತತ್ವಗಳಾಗಿವೆ. ಶೈವರು ಮೂರ್ತಿಪೂಜೆಯ ಆರಾಧಕರು. ಆದ್ದರಿಂದಲೇ ಅವರು ಶಿವಸ್ವರೂಪಿ ಸ್ಥಾವರ ಲಿಂಗಗಳನ್ನು ಪ್ರತಿಷ್ಠಾಪಿಸಿಕೊಂಡು ತಮ್ಮ ಉಗ್ರ ಭಕ್ತಿಯನ್ನು ವ್ಯಕ್ತಪಡಿಸುತ್ತಾರೆ. ಶೈವಧರ್ಮದ ಬೆಳವಣಿಗೆಯಲ್ಲಿ ಪ್ರಧಾನವಾದ ಎರಡು ಶಕ್ತಿ ಪ್ರವಾಹಗಳನ್ನು ಕಾಣಬಹುದಾಗಿದೆ. ಒಂದು ಪಾಶುಪತಶೈವ ಮತ್ತೊಂದು ಆಗಮಿಕಶೈವ. ಪಾಶುಪತಶೈವದಲ್ಲಿ ಪಾಶುಪತ, ಕಾಪಾಲಿಕ, ಕಾಳಮುಖ, ನಾಥಪಂಥ, ಗೋರಖನಾಥಪಂಥ, ರಸೇಶ್ವರ, ಲಾಕುಲ ಮುಂತಾದ ಪಂಗಡಗಳನ್ನು ಕಾಣಬಹುದಾಗಿದೆ.[6] ಆಗಮಿಕ ಶೈವದಲ್ಲಿ ಸಂಸ್ಕೃತಶೈವ, ಕಾಶ್ಮೀರಶೈವ, ತಮಿಳುಶೈವ ಮತ್ತು ವೀರಶೈವ ಎಂಬ ಪಂಗಡಗಳನ್ನು ಕಾಣಬಹುದಾಗಿದೆ. ಈ ಎಲ್ಲಾ ಪಂಗಡಗಳ ಪ್ರಮುಖ ತತ್ವಗಳೇ ಶಿವನನ್ನು ಆರಾಧಿಸುವುದು ಮತ್ತು ಆ ಮೂಲಕ ಮುಕ್ತಿಯನ್ನು ಹೊಂದುವುದಾಗಿದೆ. ಆದ್ದರಿಂದಲೇ ವಚನಚಳುವಳಿಯ ಸಂಧರ್ಭದಲ್ಲಿ ಈ ಶೈವಧರ್ಮದ ಅನೇಕ ಆಚಾರಗಳನ್ನು ವಿರೋಧಿಸಿ, ತಿರಸ್ಕರಿಸಿ ತಮ್ಮದೇ ಆದ ಚಿಂತನೆಯಲ್ಲಿ ಹೊಸ ಸಿದ್ಧಾಂತದ ನೆಲೆಗಟ್ಟಿನಲ್ಲಿ ವೀರಶೈವಧರ್ಮವನ್ನು ಶಿವಶರಣರು ಹುಟ್ಟುಹಾಕಿದರು. ಇಷ್ಟ ಲಿಂಗಾರಾಧನೆ ಮತ್ತು ಜಂಗಮ ತತ್ವಗಳು ವೀರಶೈವಧರ್ಮದ ಪ್ರಮುಖ ತತ್ವಗಳಾಗಿ ರೂಪುಗೊಂಡವು. ಈ ತತ್ವಗಳ ಮೂಲಕ ಶೈವರೂ ವೀರಶೈವರಾಗಿ ಬದಲಾದರು. ವೀರಶೈವದ ಪ್ರತಿಪಾದಕರು ತಮ್ಮನ್ನು ತಾವು ಶಿವಶರಣರೆಂದು ಕರೆದುಕೊಂಡರು. ಶೈವದ ಒಡಲೊಳಗಿಂದಲೇ ವೀರಶೈವವು ಹುಟ್ಟು ಪಡೆಯಿತು. ಶೈವ ದಾರ್ಶನಿಕತೆ ಎನ್ನುವುದು ವೀರಶೈವದ ಅಮೂರ್ತ ತಾತ್ವಿಕತೆಗೆ ಅಡಿಪಾಯವಾಗಿ ಮಾರ್ಪಟ್ಟಿತು. ಈ ತತ್ವಗಳ ಮೂಲಕ "ಶೈವರಲ್ಲಿನ ಶಿವಶರಣರು, ಭಕ್ತರು ಸಮಾಜದ ಕೆಳಸ್ತರಗಳ ವರ್ಣ-ವರ್ಗ ವಿರೋಧಿಗಳಿಗೆ ಅಭಿವ್ಯಕ್ತಿಯಾಗಿದ್ದಲ್ಲದೆ, ಅವುಗಳಿಗೆ ಹೊಸ ಸಾಮಾಜಿಕ, ಧಾರ್ಮಿಕ

ಸ್ಥಾನಮಾನಗಳನ್ನು ಗಳಿಸುವ ತಾತ್ವಿಕ ಪ್ರತಿಪಾದನೆಗಳನ್ನು ಸಾಧಿಸಿದ್ದರು".[7] ವೀರಶೈವದ ತತ್ವಗಳ ಮೂಲಕ ಸಮಾಜದ ಜಾತಿವ್ಯವಸ್ಥೆಯ ವಿರುದ್ಧ ದೊಡ್ಡ ಸಾಮಾಜಿಕ ಚಳುವಳಿಯನ್ನು, ಹೊಸ ಕ್ರಾಂತಿಯೊಂದನ್ನು ಹುಟ್ಟು ಹಾಕಿದರು. ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಪರಿಕಲ್ಪನೆಗಳನ್ನು ಪ್ರತಿಪಾದಿಸಿ ತಮ್ಮ ಬದುಕಿನಲ್ಲಿ ಆಚರಣೆಗೆ ತಂದರು. ಆ ಮೂಲಕ ಸಮಾಜದ ಶಾಪಗ್ರಸ್ಥ, ಘೋರ ಮೂಢ ಆಚರಣೆಗಳನ್ನು ಬಹಿಷ್ಕರಿಸಿದರು. ಮೇಲು-ಕೀಳು ಎಂಬ ಭಾವನೆಗಳನ್ನು ಅಳಿಸಿ ಹಾಕಿ ಸಮಾಜದ ಕೆಳಸ್ತರದ ಜನರ ಮೇಲಾಗುವ ನಿರಂತರ ಶೋಷಣೆಯನ್ನು ತಪ್ಪಿಸಲು ಯತ್ನಿಸಿದರು. ಒಟ್ಟಿನಲ್ಲಿ ಶೈವ ದಾರ್ಶನಿಕ ತತ್ವಗಳನ್ನು ಖಂಡಿಸಿ ಮತ್ತು ಮೀರಿ ವೀರಶೈವ ದಾರ್ಶನಿಕತೆಯನ್ನು ಶಿವಶರಣರು ಪ್ರತಿಪಾದಿಸಿದರು. ಲಿಂಗ ಪ್ರತಿಷ್ಠೆ, ದೇವಸ್ಥಾನಗಳ ನಿರ್ಮಾಣಕಾರ್ಯ ಇವು ಶೈವ ಸಂಪ್ರದಾಯ ಮತ್ತು ಆಚರಣೆಗಳಿಗೆ ಕಾರಣವಾದರೆ ಅದಕ್ಕೆ ವಿರುದ್ಧವಾಗಿ ಇಷ್ಟಲಿಂಗಾರಾಧನೆ ಮತ್ತು ಜಂಗಮ ತತ್ವಗಳು ವೀರಶೈವದ ಪ್ರಮುಖ ತತ್ವಗಳಾಗಿ ಭಕ್ತಿಗೆ ಕಾರಣವಾದವು.

ಶಿವಪ್ರಕಾಶರು ಶಿವನನ್ನು ತಮ್ಮ ಕಾವ್ಯಗಳಲ್ಲಿ ಹೆಚ್ಚು ಪ್ರಕಾಶಗೊಳಿಸುತ್ತಾರೆ. ಹೊನ್ನಗಂಗಾಧರ, ಮತ್ತೆ ನೀ ಹುಟ್ಟುವುದು, ಒಂಟಿ ಹಡಗು ಯಾತ್ರಿ ಕನಸು, ಅಭಿನವ, ಭೂತನಾಥನ ಗೋಳು ಮುಂತಾದ ಕವಿತೆಗಳಲ್ಲಿ ಶಿವನ ವಿವಿಧ ಸ್ವರೂಪಗಳ ಚಿತ್ರಣವಿದೆ.

ಶಿವಪ್ರಕಾಶರ ಶೈವದರ್ಶನದ ತಾತ್ವಿಕತೆಗಳನ್ನು ಬಿಡಿಬಿಡಿಯಾಗಿ ವಿವರಿಸಲು ಸಾಧ್ಯವಾಗುವುದಿಲ್ಲ. 'ಹೊನ್ನ ಗಂಗಾಧರ' ಎಂಬ ಕವಿತೆಯಲ್ಲಿ ಕವಿ ಹೊನ್ನಾದೇವಿ ಮತ್ತು ಗಂಗಾಧರನ ನಡುವೆ ನಿರೂಪಣೆಯೊಂದನ್ನು ಏರ್ಪಡಿಸುವ ಮೂಲಕ ಅವರವರ ಚರಿತ್ರೆಯನ್ನು ನೆನಪಿಸಿಕೊಳ್ಳುವ ಹಾಗೆ, ಅವರವರ ನೆನಪಿನ ಗಂಟನ್ನು ಬಿಚ್ಚಿಕೊಳ್ಳುವ ಹಾಗೆ ಮಾಡಿದ್ದಾರೆ. 'ಮತ್ತೆ ನೀ ಹುಟ್ಟುವುದು' ಎಂಬ ಕವಿತೆಯಲ್ಲಿ ದಕ್ಷನ ಮಗಳಾದ ಪಾರ್ವತಿಯು ಯಜ್ಞಕುಂಡಕ್ಕೆ ಆಹುತಿಯಾದ ಪ್ರಸ್ತಾಪ ಮಾಡುತ್ತಾ ಅವಳನ್ನು ಮತ್ತೆ ಹುಟ್ಟಿ ಬರಬೇಕು ಎಂಬ ಆಶಯವಿದೆ. ತಮ್ಮ ಕವಿತೆಗಳಲ್ಲಿ ಶಿವಪ್ರಕಾಶರು ಶಿವನನ್ನು ಗಂಗಾಧರ, ಭೂತನಾಥ, ರುದ್ರ, ವೀರಭದ್ರ, ಮುಕ್ಕಣ್ಣ, ಈಶ್ವರ, ಅರ್ಧನಾರೀಶ್ವರ ಮುಂತಾಗಿ ವಿವಿಧ ಹೆಸರುಗಳಿಂದ ಕರೆದಿದ್ದಾರೆ. ಶೈವ ಪೌರಾಣಿಕ ಪರಂಪರೆಯು ತನ್ನ ಪುರಾಣ ಕಥೆಗಳಲ್ಲಿ ಶಿವನನ್ನು ಏನೇನೆಲ್ಲ ವರ್ಣಿಸಿ ವಿವಿಧ ಹೆಸರುಗಳಿಂದ ಕರೆದಿದೆಯೋ ಹಾಗೆಯೇ ಶಿವಪ್ರಕಾಶರೂ ಕೂಡ ತಮ್ಮ ಬೇರೆಬೇರೆ ಕವನಗಳಲ್ಲಿ ಹಲವು ರೀತಿಯ ಶಿವನಾಮ ಸೂಚಿಗಳನ್ನು ಬಳಸಿದ್ದಾರೆ. ಅಲ್ಲಮ ತನ್ನ ವಚನದಲ್ಲಿ ಈ ರೀತಿಯ ಶಿವನಾಮ ಸೂಚಿಗಳನ್ನು ಹೇಳಿದ್ದರೂ ಕೂಡ ಕೊನೆಗೆ 'ಈಶ್ವರನಲ್ಲ, ಮಹೇಶ್ವರನಲ್ಲ,

ಗುಹೇಶ್ವರನೆಂಬ ಲಿಂಗ ಅಪಾರಮಹಿಮನು' ಎನ್ನುವ ಮೂಲಕ ಶೈವ ಪುರಾಣಗಳ ಸುತ್ತಿಗೆ ವಿರೋಧವನ್ನು ವ್ಯಕ್ತಪಡಿಸುತ್ತಾನೆ.

ಶೈವದರ್ಶನವೇ ಬೆಳಗಿನ ಮೀಮಾಂಸೆ, ಬೆಳಕಿನ ಆರಾಧನೆಯಾಗಿದೆ. ಇಂತಹ ಶೈವದರ್ಶನದ ಅಂಶಗಳನ್ನು ಶಿವಪ್ರಕಾಶರ ಕಾವ್ಯದಲ್ಲೂ ನಾವು ಕಾಣಬಹುದಾಗಿದೆ. ಶಿವಪ್ರಕಾಶರು ಬೆಳಕಿನ ಬಗೆಗೆ ಹೆಚ್ಚು ಒಲವನ್ನು ತೋರಿದ್ದಾರೆ. ಅಷ್ಟೇ ಅಲ್ಲ ಅಲ್ಲಮ ತೋರಿದಂತೆ, ಬೆಳಕು ಎಂಬುದನ್ನು ಮುಖ್ಯವಾಗಿ ಚಿಂತಿಸಿದ್ದರೂ ಅದನ್ನು ಮೀರಿ ಕತ್ತಲೆ-ಬೆಳಕಿನ ದ್ವಂದ್ವ ಸ್ಥಿತಿಯನ್ನು ಕುರಿತು ಮಾತನಾಡುತ್ತಾರೆ. ಅಲ್ಲಮ ಶೈವದಲ್ಲಿ ಪ್ರಕಾಶಕ್ಕೆ, ಬೆಳಗಿಗೆ ಪ್ರಥಮ ಪ್ರಾಮುಖ್ಯತೆಯನ್ನು ಕೊಟ್ಟರೂ ಕೂಡ ಅದಕ್ಕಿಂತಲೂ ಭಿನ್ನವಾದ ದ್ವಂದ್ವಾತ್ಮಕ ಪರಿಸರವನ್ನು ಸೃಷ್ಟಿಸುತ್ತಾನೆ. 'ಕತ್ತಲೆ ಬೆಳಗಾಯಿತ್ತ ಕಂಡೆ'(439), 'ಕಂಗಳ ಬೆಳಗ ಕಲ್ಪಿಸಬಾರದು',(273) ಎನ್ನುವ ಮೂಲಕ ಬೆಳಕು ಎನ್ನುವುದು ಶೂನ್ಯಾನುಭವದ ಪ್ರತೀಕವಾಗಿಯೇ ಅಲ್ಲಮ ಕಾಣುತ್ತಾನೆ. ಆದರೂ 'ಪೂರಾಯ ಗಾಯದಲ್ಲಿ ಸಾಯಕೊಂದಲ್ಲದೆ ಸೂರ್ಯರನೇಕರು ಮಡಿಯರು ಗುಹೇಶ್ವರಾ'(340) ಎಂದು ಹೇಳುವ ಮೂಲಕ ಸೂರ್ಯ ಹತ್ಯೆಯನ್ನು, ಬೆಳಕಿನ ಹತ್ಯೆಯನ್ನು ಕುರಿತು ಮಾತನಾಡುತ್ತಾನೆ.

ಕಾಣದ ಕುರುಡಂದು;
ಕಾಣುವ ಕುರುಡಿಂದು;
ಎರಡು ಕುರುಡಿನ ನಡುವೆ
ಎಲ್ಲಿತ್ತು ನಡುಗಣ್ಣು.
ಹೇಳು ಬೆಳಕೆ.

ಎರಡು ಇರುಳಿನ ನಡುವೆ
ಎಲ್ಲಿತ್ತು ಹಗಲು
ಹೇಳು ಯುಗವೆ

ಎಂದು ಕತ್ತಲೆ-ಬೆಳಕಿನ ಪ್ರತಿಮೆಗಳ ದ್ವಂದ್ವಾತ್ಮಕ ದಾರ್ಶನಿಕ ನೈತಿಕಾರ್ಥಗಳನ್ನು ಕುರಿತು ಮಾತನಾಡುತ್ತಾರೆ. ಶಿವಪ್ರಕಾಶರು ತಮ್ಮ 'ವಿಧವೆ ಹೊಟ್ಟೆಯಲ್ಲಿ ಸತ್ತು ಹುಟ್ಟಿದವನ ಬಾಲಲೀಲೆಯ ಕಬ್ಬ' ಎನ್ನುವ ಕವಿತೆಯಲ್ಲಿ ಸೂರ್ಯಚಂದ್ರರನ್ನು, ಕತ್ತಲು-ಬೆಳಕನ್ನು ಕುರಿತು ಮಾತನಾಡುತ್ತಾರೆ.

ಕಣ್ಣುಗಳನ್ನು ಚಂದ್ರಸೂರ್ಯರ ಮಾಡಿ
ಎಲುಬು ನೆತ್ತರಿನ ಕತ್ತಲೊಡಲಲ್ಲಿ
ಶುದ್ಧ ಬೆಳಕಿನ ಬುಗ್ಗೆ ಅರಸುತ್ತಿರುವ
ಯೋಗಿಗಳ ಭೋಗಿಗಳ ರೋಗಿಗಳ ಹಗಲಿರುಳ ಪ್ರಯತ್ನದಲ್ಲಿ;

ಇಲ್ಲಿನ ಕತ್ತಲ ಒಡಲಾಳದಲ್ಲಿ ಶುದ್ಧ ಬೆಳಕಿನ ಬುಗ್ಗೆಯನ್ನು ಅರಸುತ್ತಿರುವ ಪ್ರತಿಮೆ ಮೇಲಿನ ಅಲ್ಲಮನ ಕತ್ತಲೆ-ಬೆಳಕಿನ ಮೀಮಾಂಸೆಯನ್ನೇ ಹೋಲುತ್ತಿದೆ. ಸೂರ್ಯನನ್ನು ಕುರಿತು 'ಹೊತ್ತಿನದೇವ' ಎಂಬ ಮತ್ತೊಂದು ಕವಿತೆಯನ್ನು ಶಿವಪ್ರಕಾಶರು ಬರೆದಿದ್ದಾರೆ.

ಏಳು, ಎದ್ದೇಳು ಹೊತ್ತಿನದೇವ
ಕತ್ತಲು ನಿದ್ದೆ ಹೆಬ್ಬಾವುಗಳ ತೆಕ್ಕೆಗಳಿಂದ
ಸುತ್ತಲೂ ಹೆಣೆದುಕೊಂಡಿರುವ ನಕ್ಷತ್ರಚಂದ್ರಮರ
ಮಹೇಂದ್ರ ಜಾಲದಿಂದ

ಇಲ್ಲಿ ಮನದ ಜಗತ್ತಿಗೆ ಬೆಳಕನ್ನು ಅರಸುತ್ತಿದ್ದಾರೆ. ಗಾಢ ನಿದ್ದೆಯಲ್ಲಿ ಮುಳುಗಿ ಹೋಗಿರುವ ಸೂರ್ಯನನ್ನು ಬೇಗ ಎದ್ದು ಮನದಲ್ಲಿ ಮೂಡುವಂತೆ ಎಚ್ಚರಿಸುತ್ತಿದ್ದಾರೆ. ಇದು ಅಲ್ಲಮ ಯಾವ ಸೂರ್ಯ ಹತ್ಯೆಯನ್ನು ಕುರಿತು ಮಾತನಾಡಿದ್ದನೋ ಅದನ್ನೇ ಕವಿ ಇಲ್ಲಿ ಆ ಸೂರ್ಯನನ್ನು 'ಹೊತ್ತಿನ ದೇವ' ಎಂದು ಕರೆದು ಎದ್ದು ಬರುವಂತೆ ಪ್ರಾರ್ಥಿಸುತ್ತಿದ್ದಾರೆ.

ಕಾಶ್ಮೀರ ಶೈವದ ಪ್ರಮುಖ ದಾರ್ಶನಿಕನಾದ ಅಭಿನವಗುಪ್ತನ ವ್ಯಾಖ್ಯಾನಗಳೊಂದಿಗೆ, ತತ್ವಗಳೊಂದಿಗೆ ಅಲ್ಲಮ ಚರ್ಚೆ ಮತ್ತು ವಾದಗಳನ್ನು ಬೆಳೆಸಿ ತನ್ನದೇ ಆದ ಹೊಸ ವ್ಯಾಖ್ಯಾನಗಳನ್ನು ನೀಡುತ್ತಾನೆ. ಕೆಲವು ವಿಷಯಗಳಲ್ಲಿ ಅಲ್ಲಮ, ಅಭಿನವಗುಪ್ತನನ್ನು ಅನುಸರಿಸಿದರೂ ಕೂಡ ಬಹಳ ಸ್ಪಷ್ಟವಾಗಿ ಅಭಿನವಗುಪ್ತ ಕಟ್ಟಿಕೊಂಡಿರುವ ದೊಡ್ಡ ತಾತ್ವಿಕ ವ್ಯವಸ್ಥೆಯನ್ನು ಮೀರಿ ತನ್ನದೇ ಆದ ವಿಶಿಷ್ಟತೆಯನ್ನು ಉಳಿಸಿಕೊಳ್ಳುತ್ತಾನೆ. ಇಂತಹ ಶೈವದಾರ್ಶನಿಕ ತತ್ವಗಳನ್ನು ಹೇಳುವ ಅಭಿನವಗುಪ್ತನನ್ನು ಕುರಿತು ಶಿವಪ್ರಕಾಶರು 'ಅಭಿನವ' ಎಂಬ ಕವಿತೆಯನ್ನು ಬರೆದಿದ್ದಾರೆ. ಕವಿತೆಯಲ್ಲಿ ಅನೇಕ ಬಾರಿ 'ಹೃದಯ'ದ ರೂಪಕವನ್ನು ಬಳಸುತ್ತಾರೆ. ಅಭಿನವಗುಪ್ತನಲ್ಲಿ ಹೃದಯ ಎನ್ನುವುದು ಭೈರವನ ಕೇಂದ್ರಸ್ಥಾನ ಅಥವಾ ಶಿವನ ಪ್ರತಿಷ್ಠಾಸ್ಥಾನವಾಗಿದೆ. ಅದನ್ನು ಅಲ್ಲಮನೂ ಕೂಡ ತನ್ನ ವಚನದಲ್ಲಿ 'ಹೃದಯ ಕಮಲ ಕರ್ಣಿಕೆ'(998) ಎಂದು ರೂಪೀಕರಿಸುವುದರ ಮೂಲಕ ಕಾಶ್ಮೀರ ಶೈವದ ತಾಂತ್ರಿಕ ಪರಂಪರೆಯ ಮುಖ್ಯ ತಾತ್ವಿಕ ರೂಪಕವನ್ನು ಬಳಸುತ್ತಾನೆ.[9]

ಕಾಳಶೈವ ಮತ್ತು ಕಾಶ್ಮೀರ ಶೈವದ ದಾರ್ಶನಿಕ ವ್ಯವಸ್ಥೆಗಳನ್ನು ಅಭಿನವಗುಪ್ತ ಶುದ್ಧ ತಾತ್ವಿಕ ರೂಪದಲ್ಲಿ ಪರೀಕ್ಷೆಗೊಳಪಡಿಸಿದರೆ, ಅಲ್ಲಮ ಆ ದಾರ್ಶನಿಕ ವ್ಯವಸ್ಥೆಯನ್ನು ಮಾನವೀಕರಿಸಿ ನೋಡುತ್ತಾನೆ.

ಕಾಶ್ಮೀರ ಶೈವ ದಾರ್ಶನಿಕತೆ ಅರಿವು-ಮರೆವುಗಳ ಸಂಬಂಧಗಳನ್ನು ಕುರಿತು ಚರ್ಚಿಸುತ್ತದೆ. ಕವಿ ಶಿವಪ್ರಕಾಶರೂ ಈ ಅರಿವು-ಮರೆವಿನ ಚರ್ಚೆಯನ್ನು ತಮ್ಮ ಕವನಗಳಲ್ಲಿ

ತಂದಿದ್ದಾರೆ. ಶಿವಪ್ರಕಾಶರ 'ನದಿಯ ನಾಡಿನಲ್ಲಿ' ಎಂಬ ಕವನವು ಈ ಅರಿವು-ಮರೆವುಗಳಿಂದ ಕೂಡಿದ ಸತ್ವಯುತ ಕವನವಾಗಿದೆ. ಕವನದಲ್ಲಿ ಗೋರಕ್ಷನ ಗುರು ಮತ್ಸ್ಯೇಂದ್ರ ಕಾಣೆಯಾದಾಗ, ಗೋರಕ್ಷನು ತನ್ನ ಗುರುವನ್ನು ಅರಸುತ್ತ ಅಲೆದಾಡುವ ಪ್ರಸಂಗವಿದೆ. ಗೋರಕ್ಷ ತನ್ನ ಅರಿವನ್ನು ತಾನು ತಿಳಿಯದೆ ತನ್ನ ಗುರುವಿಗಾಗಿ ವಿಫಲವಾದ ಹುಡುಕಾಟವನ್ನು ನಡೆಸುತ್ತಾನೆ. ಅವನ ಅರಿವಿಗೆ ಮರವೆಯು ಆವರಿಸಿದೆ. ಆದ್ದರಿಂದಲೇ ತನ್ನೊಳಗೇ ಇರುವ ಮತ್ಸ್ಯೇಂದ್ರನನ್ನು ತಾನು ಕಾಣಲಾಗದ ಸ್ಥಿತಿಯಲ್ಲಿ ಅವನು ಬಾಹ್ಯ ಜಗತ್ತಿನಲ್ಲಿ ಹುಡುಕುತ್ತ ಅಲೆಯುತ್ತಿದ್ದಾನೆ.

ನಿನ್ನ ಹುಡುಕಾಟದಲ್ಲಿ ನಿನ್ನ ನೆನಪೇ ಮುಳ್ಳು
ಹುವ್ವ ಇನ್ನೊಂದು ಸಲ
ಇನ್ನೊಂದು ಸಲ ಹಣ್ಣು ಜೋತು ಕೊನೆ ತುಂಬ
ಕೊನೆಗೆ ಕೊನೆಯೇ ಮಾಯ

ಇಲ್ಲಿ ಕವಿ ಗೋರಕ್ಷನ ಅರಿವಿಗೆ ಆವರಿಸಿರುವ ಮಾಯೆಯನ್ನು ಕುರಿತು ಹೇಳುತ್ತಿದ್ದಾರೆ. ಅರಿವಿಗೆ ಮರೆವಿನ ಕತ್ತಲು ಆವರಿಸಿದಾಗ ಗೋರಕ್ಷನು ಹುಚ್ಚು ಹುಚ್ಚಾಗಿ ತನ್ನ ಗುರುವನ್ನು ಅರಸುತ್ತಾ ಅಲೆಯುವ ಪ್ರಸಂಗದ ಚಿತ್ರಣವಿದೆ. ಇಲ್ಲಿ ಗೋರಕ್ಷನಿಗೆ ಮತ್ಸ್ಯೇಂದ್ರನ ಹುಡುಕಾಟವೇ ಒಂದು ಅನುಭವವಾಗಿ ಕಾಣಿಸುತ್ತಿದೆ. ಹುಡುಕಾಟದ ಸಂದರ್ಭದಲ್ಲಿ ಆಗುವ ವಿಶಿಷ್ಟ ಅನುಭವಗಳು ತನ್ನ ಸ್ವಯಂ ಅರಿವಿನ ಪ್ರಕ್ರಿಯೆಗೆ ಒಳಗಾಗುವ ಸನ್ನಿವೇಶಗಳಾಗಿ ಕವಿತೆಯಲ್ಲಿ ಮೂಡಿವೆ. ಆದರೆ

ಮತ್ಸ್ಯೇಂದ್ರ ನಿನ್ನ ದನಿ. . . . .ನಿನ್ನದೇ. . . . .
ಎಲ್ಲಿರುವೆ ಎಲ್ಲಿರುವೆ
ಮತ್ಸ್ಯೇಂದ್ರ. . . . . ಮತ್ಸ್ಯೇಂದ್ರ. . . . . .

ಎನ್ನುವ ಈ ದನಿಯಲ್ಲಿ ಕೊನೆಗೂ ಗೋರಕ್ಷ ತನ್ನ ಗುರು ತನ್ನೊಳಗೇ ಇರುವ ಸತ್ಯವನ್ನು ಕಾಣಲಾರದವನಾಗಿ ಬಿಡುತ್ತಾನೆ.

ಅಲ್ಲಮಪ್ರಭು ಕೌಳಶೈವಮಾರ್ಗದ ವಿಮರ್ಶೆಯಲ್ಲಿ ತನ್ನನ್ನು ತಾನು ಹೆಚ್ಚು ತೊಡಗಿಸಿಕೊಂಡಿದ್ದಾನೆ. ಶೈವ ತಾಂತ್ರಿಕ ಪಂಥದ ಹಿರಿಯರೊಡನೆ ಸಂವಾದದಲ್ಲಿ ತೊಡಗುತ್ತಾನೆ.

ಉತ್ತರಾಪಥದ ಮೇಲೆ ಮೇಘವರ್ಷ ಕರೆಯಲು
ಆ ದೇಶದಲ್ಲಿ ಬರವಾಯಿತು!(227)

ಎಂದು ಹೇಳುವಾಗ ಅಲ್ಲಮ ಕೌಳಶೈವದ ಒಂದು ಮಾರ್ಗವಾದ 'ಉತ್ತರಾಪಥದ' ಬಗೆಗೆ ವಿಮರ್ಶಿಸುತ್ತಾನೆ. ಕೌಳಶೈವ ಮಾರ್ಗದ ಬಗೆಗೆ ಅಲ್ಲಮನಿಗೆ ತೀವ್ರ ಭಿನ್ನಾಭಿಪ್ರಾಯವಿದೆ.

ಆ ಶೈವ ಪರಂಪರೆಯ ಜೊತೆಗೆ ತನಗಿರುವ ಸಮಸ್ಯೆಗಳನ್ನು, ವಿಷಾದವನ್ನು ಅಲ್ಲಮ ತನ್ನ ವಚನಗಳಲ್ಲಿ ವ್ಯಕ್ತಪಡಿಸುತ್ತಾನೆ. 'ಉತ್ತರಾಪಥದ ದರ್ಶನಾವಾದಿಗಳಿಗೆ ಸುತ್ತಿಮುತ್ತಿದ ಮಾಯೆ ಎತ್ತಲಿಕೆ ಹೋಯಿತ್ತು'(418) ಎಂದು ಉತ್ತರಾಪಥದ ದರ್ಶನಾವಾದಿಗಳಿಗೆ ಸುತ್ತಿದ ಮಾಯೆಯ ಬಗೆಗೆ ಇರುವ ತನ್ನ ವಿಷಾದವನ್ನು, ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ.

ಶಿವಪ್ರಕಾಶರೂ ಕೂಡ ಅಲ್ಲಮನಂತೆ ಶೈವದಾರ್ಶನಿಕ ಪರಿಕಲ್ಪನೆಗಳನ್ನು ಕೊಂಚ ಪರಿವರ್ತಿಸಿಕೊಂಡು ತಮ್ಮದೇ ಆದ ವಿಶಿಷ್ಟ ಪ್ರತಿಮೆಗಳನ್ನಾಗಿಸುತ್ತಾರೆ. ಇವರು ತಮ್ಮ ಕವನಗಳನ್ನು ತೀವ್ರ ಜಿಜ್ಞಾಸೆಯಿಂದ ರಚಿಸಿ ಅವುಗಳಿಗೆ ನಾಟಕೀಯತೆಯನ್ನು ತಂದು ಕೊಡುವುದರಿಂದ ತಮ್ಮ ಶೈವ ತಾತ್ವಿಕತೆಯ ಸಂಸ್ಕಾರಗಳಿಂದ ಬಿಡುಗಡೆ ಹೊಂದುತ್ತಾರೆ. ಶೈವದರ್ಶನಗಳ ಮೂಲಕಲ್ಪನೆಯಾದ 'ಮುಕ್ತಿ'ಯನ್ನು ಅಲ್ಲಮ ಇಚ್ಛಾ, ಜ್ಞಾನ, ಕ್ರಿಯಾ ಶಕ್ತಿಗಳ ಅನಾವರಣದಿಂದ ಶಿವತ್ವಭಾವವನ್ನು ಪಡೆಯಲು ಸಾಧ್ಯ ಎಂದು ಹೇಳಿ ಶಿವತ್ವಭಾವವನ್ನು, ನಿಜ. ಶಿವತತ್ವ ಸ್ವರೂಪವನ್ನು ಅರಿಯುವುದೇ 'ಮುಕ್ತಿ' ಎಂದು ಪರಿಭಾವಿಸುತ್ತಾನೆ. ಮುಕ್ತಿ ಎನ್ನುವ ಕಲ್ಪನೆಯನ್ನು ಅಲ್ಲಮ ಮತ್ತೊಂದು ರೀತಿಯಲ್ಲಿ ಪರಿಭಾವಿಸಿದರೂ ಈ ಶೈವದ ಮುಕ್ತಿಯ ಕಲ್ಪನೆಯನ್ನು ಅನೇಕ ವಚನಗಳಲ್ಲಿ ವಿಡಂಬಿಸಿ ಟೀಕಿಸುತ್ತಾನೆ. ಶೈವದರ್ಶನದ ಮೂಲಕಲ್ಪನೆಯನ್ನೇ ಅಲ್ಲಮ ಸುಲಭವಾಗಿ ಮೀರಿಬಿಡುತ್ತಾನೆ.

> "ಹಣ್ಣು ರಸವೂರುತಿದೆ; ತೊಟ್ಟುಗಳಚುವ ಮೊದಲೆ,
> ಕಿತ್ತು ಒಪ್ಪಿಸು ನಿನ್ನ ಶರಣ ಸಂದೋಹಕ್ಕೆ ಹಣ್ಣಲ್ಲ,
> ಮಣ್ಣು ಹುಳುಗಳ ಹಬ್ಬ."

ಎಂದು ಹೇಳುವಲ್ಲಿ ಶಿವಪ್ರಕಾಶರೂ ಕೂಡ ಅಲ್ಲಮನ ಚಿಂತನೆಗಳೊಂದಿಗೆ ಅನುಸಂಧಾನಿಸುತ್ತಾರೆ. ಶಿವತ್ವಭಾವಕ್ಕೆ ಪ್ರಾಪ್ತನಾದ ಶರಣ ಮರುಳ ಶಂಕರದೇವನನ್ನು ಕವಿ ತಮ್ಮ ಕವನದಲ್ಲಿ ಮುಕ್ತಿಗೆ ಎಡೆಕೊಡದೆ ಮರುಳ ಶಂಕರನ ದೇಹವನ್ನು ಮಣ್ಣು ಹುಳಗಳಿಗೆ ಹಬ್ಬವಾಗಿಸುವುದರ ಚಿತ್ರಣ ಕೊಡುವ ಮೂಲಕ ಭವ ಚಕ್ರದ ಮತ್ತೊಂದು ತಿರುಗಣಿಗೆ ಈಡು ಮಾಡುತ್ತಾರೆ. ಆ ಮೂಲಕ ಶೈವದರ್ಶನದ ಮುಖ್ಯ ಕಲ್ಪನೆಯಾದ 'ಮುಕ್ತಿ'ಯನ್ನು ಅಲ್ಲಮನಂತೆ ಇವರೂ ನಿರಾಕರಿಸುತ್ತಾರೆ. ಕೆಲವೊಮ್ಮೆ ಅಲ್ಲಮನು ಶೈವ ಪರಂಪರೆಗೆ ತೋರುವ ಪ್ರತಿರೋಧ, ಭಿನ್ನಾಭಿಪ್ರಾಯಗಳನ್ನು ಇಲ್ಲಿ ಕವಿಯೂ ತೋರುತ್ತಾರೆ. ಅಷ್ಟೇ ಅಲ್ಲದೆ ಆ ಎಲ್ಲಾ ಶೈವದರ್ಶನ ಪರಂಪರೆಯ ತಾತ್ವಿಕ ಸಿದ್ಧಾಂತಗಳನ್ನು ಹಲವು ಬಾರಿ ಮೀರುವ ಮೂಲಕ ಅಲ್ಲಮನ ಹಾದಿಯನ್ನೇ ಹಿಡಿದು ಮತ್ತೊಂದು ತಾತ್ವಿಕ ಸಿದ್ಧಾಂತವನ್ನು ಕಟ್ಟುವತ್ತ ಹೆಜ್ಜೆ ಇಡುತ್ತಾರೆ. ಇದು

ಶಿವಪ್ರಕಾಶರ ಶೈವದಾರ್ಶನಿಕತೆಯನ್ನು ಮೀರುವ ಕ್ರಮವಾಗಿದೆ. ಇದನ್ನು ಅವರ 'ನದಿಯ ನಾಡಿನಲ್ಲಿ' ಎನ್ನುವ ಕವಿತೆಯಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಮತ್ಸ್ಯೇಂದ್ರ, ಯಾವ ಮಾಯಾವಿಯ ದ್ವೀಪದಲ್ಲಿ
ಬಂದಿಯಾಗಿದ್ದೀಯ
ಪಂಚಭೂತಗಳನ್ನು ದಾಟಿ
ನಾನು ಬಂದು ಸೇರಿದ ಈ ನಡುಗಡ್ಡೆ
ಮತ್ಸ್ಯೇಂದ್ರ, ನೀ ಕೊಟ್ಟ ನಕ್ಷೆಯಲ್ಲಿರಲಿಲ್ಲ.

ಗೋರಕ್ಷ ನಾಥಪಂಥದ ಪ್ರಮುಖ ದಾರ್ಶನಿಕ, ಯೋಗಿ. ಗೋರಕ್ಷ ಹಲವಾರು ಶತಮಾನಗಳ ಕಾಲ ಶೈವದರ್ಶನಗಳನ್ನು, ಧಾರ್ಮಿಕ ಪಂಥಗಳನ್ನು ಕನಸಾಗಿ, ದಾಟಲಾಗದ ಭೀತಿಯಾಗಿ ಕಾಡಿದವನು.[11] ಇಂತಹ ಶೈವ ದಾರ್ಶನಿಕ ಗೋರಕ್ಷನನ್ನೂ ಶಿವಪ್ರಕಾಶರು ಅಲ್ಲಮನ ಪ್ರಭಾವದಿಂದ ಶೈವದರ್ಶನಗಳನ್ನು ಮೀರುವಂತೆ ಮಾಡಿದ್ದಾರೆ. ಕವಿತೆಯ ಮೇಲಿನ ಭಾಗವನ್ನು ನೋಡಿದಾಗ ಅದು ತಿಳಿಯುತ್ತದೆ. ಶೈವದರ್ಶನಗಳನ್ನು ಕವಿ ಇಲ್ಲಿ 'ಮಾಯಾವಿಯ ದ್ವೀಪ' ಎಂದು ವ್ಯಂಗ್ಯವಾಗಿ ಕರೆದು ಅಲ್ಲೇ ಸಿಲುಕಿರುವ ಗೋರಕ್ಷನ ಗುರು ಮತ್ಸ್ಯೇಂದ್ರನನ್ನು ಹೊರಗೆ ಬರುವಂತೆ ಕರೆಯುತ್ತಿದ್ದಾರೆ. ಆ ಕರೆ ಸ್ವತಃ ಶೈವದರ್ಶನಗಳನ್ನು ಪ್ರತಿಪಾದಿಸಿದ ಗೋರಕ್ಷನದ್ದೇ ಆಗಿರುವುದು ಇಲ್ಲಿನ ನಾಥಪಂಥದ ಮೀರುವಿಕೆಗೆ ಸಾಕ್ಷಿಯಾಗಿದೆ. 'ಪಂಚಭೂತಗಳನ್ನು ದಾಟಿ ನಾನು ಬಂದು ಸೇರಿದ ಈ ನಡುಗಡ್ಡೆ' ಎನ್ನುತ್ತಲೇ ಶೈವದರ್ಶನಗಳನ್ನು ಶಿವಪ್ರಕಾಶರು ಗೋರಕ್ಷನಿಂದ ದಾಟಿಸಿದ್ದಾರೆ. ಅಲ್ಲಮಪ್ರಭುವಿಗೂ ಕೂಡ ಈ ಗೋರಕ್ಷನೊಂದಿಗೆ, ಅವನ ಹಠಯೋಗದೊಂದಿಗೆ ತೀವ್ರ ಮುಖಾಮುಖಿಯಿದೆ, ಸೆಣಸಾಟವಿದೆ.[12] ಅಲ್ಲಮ ತನ್ನ ಅನೇಕ ವಚನಗಳಲ್ಲಿ ಶೈವವನ್ನು ಮತ್ತು ಅದರ ಜೊತೆಗೆ ವೀರಶೈವವನ್ನು ಪ್ರಶ್ನಿಸಿ ಅದನ್ನು ಅಪಹಾಸ್ಯ ಮಾಡುತ್ತಾನೆ.(ನೋಡಿ ವಚನ ಸಂಖ್ಯೆ :728, 730, 732)

ಶಿವಶರಣನು ನಿದ್ರೆಗೈದಡೆ ಜಪಕಾಣಿರಣ್ಣ!
ಶಿವಶರಣನು ಎದ್ದಿದ್ದರೆ ಶಿವರಾತ್ರಿ ಕಾಣಿರಣ್ಣ!
....
....
ಶಿವಶರಣನ ಕಾಯವೇ ಕೈಲಾಸ ಕಾಣಿರಣ್ಣ.
ಗುಹೇಶ್ವರ, ನಿಮ್ಮ ಶರಣನ ಚಾರಿತ್ರವು ವಿಪರೀತವು!(732) ಎನ್ನುತ್ತಾರೆ.

ಇಲ್ಲಿ ಶೈವವು ನಂಬಿದ್ದ ಕೈಲಾಸ ಕಲ್ಪನೆಯನ್ನು, ಶಿವಶರಣರು ತಮ್ಮ ಕಾಯ ಮತ್ತು ಕಾಯಕವನ್ನು ಕೈಲಾಸಕ್ಕೆ ಹೋಲಿಸಿಕೊಳ್ಳುವ ಮೂಲಕ ಶೈವ ಕಲ್ಪನೆಯನ್ನು ಒಡೆದು ಹಾಕಿದರೆ ಅಲ್ಲಮ ಈ ವೀರಶೈವರ ವಿಪರೀತದ ವರ್ತನೆಗಳನ್ನು ಖಂಡಿಸುತ್ತಾನೆ.

ಅಲ್ಲಮ ತನ್ನ ಇನ್ನೊಂದು ವಚನದಲ್ಲಿ ಶೈವಧರ್ಮದ ಕಾಪಾಲಿಕರ ಬಗೆಗೆ ತನ್ನ ವಿಡಂಬನೆಯನ್ನು ಮಾಡಿದ್ದಾನೆ. "ಶ್ರೀಶೈಲದುದಕವ ಧರಿಸಲು ಬಾರದು'(228) ಎನ್ನುವ ಮೂಲಕ ಅಲ್ಲಮ ಶೈವ ಕಾಪಾಲಿಕರ ದರ್ಶನ ತತ್ವಗಳನ್ನು ನಿರಾಕರಿಸುತ್ತಾನೆ. ಈ ಶೈವಧರ್ಮದ ಕಾಪಾಲಿಕರು ಶ್ರೀಶೈಲದಲ್ಲಿದ್ದರು ಎಂದು ಪ್ರಭುಲಿಂಗಲೀಲೆ ತಿಳಿಸುತ್ತದೆ.[13] ಆದ್ದರಿಂದ ಅಲ್ಲಮ ಕಾಪಾಲಿಕರ ಹಲವು ತತ್ವಗಳನ್ನು ಪ್ರಶ್ನಿಸುತ್ತಾನೆ. ಅದರಂತೆ ಶಿವಪ್ರಕಾಶರೂ ಕೂಡ ಶೈವ ದಾರ್ಶನಿಕ ತತ್ವಗಳನ್ನು ಪ್ರಶ್ನಿಸುತ್ತಾರೆ. ಅದರ ಜೊತೆಗೆ ಮುಖಾಮುಖಿಯಾಗುತ್ತಾರೆ ಹಾಗು ಅದನ್ನು ಹಲವು ಕಡೆ ನಿರಾಕರಿಸುತ್ತಾರೆ. ಶೈವದ ಹಲವು ದರ್ಶನಗಳನ್ನು, ತತ್ವಗಳನ್ನು ತಮ್ಮ ಕವಿತೆಗಳಲ್ಲಿ ಮೀರುವ ಮೂಲಕ ಅಲ್ಲಮನು ಅನುಸರಿಸುವ ತತ್ವಗಳ ಹಾಗೆಯೇ ಇವರೂ ಅನುಸರಿಸುತ್ತಾರೆ. ಹೀಗೆ ಶಿವಪ್ರಕಾಶರು ಅಲ್ಲಮನೊಂದಿಗೆ ಅವನ ತತ್ವ ಚಿಂತನೆಗಳೊಂದಿಗೆ ಅನುಸಂಧಾನವನ್ನು ನಡೆಸುತ್ತಾರೆ.

ಟಿಪ್ಪಣಿಗಳು

1. ನೋಡಿ, ವೈ.ಬಿ.ನಂದನ : ಭಗವಾನ್ ಬುದ್ಧ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2001, ಪುಟ 190
2. ವಾಸದೇವಮೂರ್ತಿ : ಅಲ್ಲಮಪ್ರಭುವಿನ ವಚನಗಳ ದಾರ್ಶನಿಕ ಮರುಚಿಂತನೆಯ ಸ್ವರೂಪಗಳು (ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ ಮಹಾಪ್ರಬಂಧ, ಅಪ್ರಕಟಿತ, 2008)
3. ಕುವೆಂಪು : ಸಮಗ್ರ ಕಾವ್ಯ ಸಂಪುಟ–1, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000, ಪುಟ 168–169
4. ಎಂ.ಗೋಪಾಲಕೃಷ್ಣ ಅಡಿಗ : ಸಮಗ್ರಕಾವ್ಯ, ಸ್ವಪ್ನಬುಕ್ ಹೌಸ್, ಗಾಂಧಿನಗರ, ಬೆಂಗಳೂರು 2006, ಪುಟ 232
5. ಎಲ್.ಬಸವರಾಜು : (ಸಂ) ಅಲ್ಲಮನ ವಚನಚಂದ್ರಿಕೆ, ಪೀಠಿಕೆ, ಅಡಿ ಟಿಪ್ಪಣಿ, ಲೋಹಿಯಾ ಪ್ರಕಾಶನ, ಬಳ್ಳಾರಿ, 2001, ಪುಟ 51
6. ಎಚ್.ತಿಪ್ಪೇರುದ್ರಸ್ವಾಮಿ : ವಚನಗಳಲ್ಲಿ ವೀರಶೈವಧರ್ಮ, ಡಿ.ವಿ.ಕೆ.ಮೂರ್ತಿ, ಮೈಸೂರು, 1969, ಪುಟ
7. ಡಾ.ರಾಜಾರಾಮ ಹೆಗಡೆ : ಲೌಕಿಕ–ಅಲೌಕಿಕ, ಆನಂದಕಂದ ಗ್ರಂಥಮಾಲೆ, 2001, ಪುಟ 167
8. ಡಿ.ಆರ್. ನಾಗರಾಜ್ : ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ, ಅಕ್ಷರ ಪ್ರಕಾಶನ, ಹೆಗ್ಗೋಡು, 2006, ಪುಟ 199
9. ವಿವರವಾದ ಚರ್ಚೆಗೆ ನೋಡಿ,
   ಡಿ.ಆರ್.ನಾಗರಾಜ್ : ಅಲ್ಲಮಪ್ರಭು ಮತ್ತು ಶೈವಪ್ರತಿಭೆ, ಅಧ್ಯಾಯ 4, 'ಅಲ್ಲಮನ ಕಾಯ ಸಿದ್ಧಾಂತ', ಅಕ್ಷರ ಪ್ರಕಾಶನ, ಹೆಗ್ಗೋಡು, 2006, ಪುಟ 103–104
10. ಬಿ.ಎನ್.ವಾಸುದೇವಮೂರ್ತಿ: ಅಲ್ಲಮಪ್ರಭುವಿನ ವಚನಗಳ ದಾರ್ಶನಿಕ ಮರುಚಿಂತನೆಯ ಸ್ವರೂಪಗಳು (ಹಂಪಿ ಕನ್ನಡ ವಿಶ್ವವಿದ್ಯಾಯಲಕ್ಕೆ ಸಲ್ಲಿಸಿದ ಪಿ.ಎಚ್‌ಡಿ ಮಹಾಪ್ರಬಂಧ, ಅಪ್ರಕಟಿತ, 2008)
11. ಡಿ.ಆರ್.ನಾಗರಾಜ್ : ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ, ಅಕ್ಷರ ಪ್ರಕಾಶನ, ಹೆಗ್ಗೋಡು, 2006, ಪುಟ 20–21
12. ಅದೇ, ಪುಟ 21
13. ಎಂ.ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, 1996, ಪುಟ 151

ಅಧ್ಯಾಯ – 4 : ಕೆ.ಬಿ.ಸಿದ್ದಯ್ಯನವರ ಕಾವ್ಯದಲ್ಲಿ ಅಲ್ಲಮ

ಇತ್ತೀಚಿನ ಆಧುನಿಕ ಕವಿಗಳಲ್ಲಿ ಕೆ.ಬಿ.ಸಿದ್ದಯ್ಯನವರು ಪ್ರಮುಖರಾಗಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಖಂಡಕಾವ್ಯದಂತಹ ವಿಶಿಷ್ಟ ಕಾವ್ಯ ಮಾರ್ಗವನ್ನು ತಮ್ಮ ಬರವಣಿಗೆಗೆ ಅಳವಡಿಸಿಕೊಂಡಿದ್ದಾರೆ. ಇವರ ಕಾವ್ಯ ದಲಿತ ಮತ್ತು ಅದಕ್ಕಿಂತಲೂ ತಳ ಸಂಸ್ಕೃತಿಯ ಜೀವನ ವಿವರಗಳನ್ನು ಒಳಗೊಂಡಿದ್ದು, ಈ ವರ್ಗದ ಸಂಸ್ಕೃತಿಯ ಹಲವು ಬಗೆಗಳನ್ನು ಅನಾವರಣಗೊಳಿಸುತ್ತಾರೆ. ಇವರು ತಮ್ಮ ಕಾವ್ಯದಲ್ಲಿ ವ್ಯಕ್ತಪಡಿಸುವ ಈ ಜನರ ಬದುಕಿನ ಘೋರ ಚಿತ್ರಗಳು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಜನರನ್ನು ದಂಗು ಬಡಿಸುತ್ತದೆ. ಹನ್ನೆರಡನೇ ಶತಮಾನದ ವಚನ ಚಳುವಳಿಯಲ್ಲಿ ನಡೆದ ಸಾಮಾಜಿಕ ಕ್ರಾಂತಿಯ ಬದಲಾವಣೆಯನ್ನು ಇಂದಿನ ಕಾಲದಲ್ಲಿ ಕಾಣಲಾಗದ ಪರಿಸ್ಥಿತಿಯಲ್ಲಿ ಸಿದ್ದಯ್ಯನವರು ತಮ್ಮ ಕಾವ್ಯವನ್ನು ಬರೆಯುತ್ತಾರೆ. ವಚನ ಚಳುವಳಿಯ ಆಶಯಗಳನ್ನು ವರ್ತಮಾನದಲ್ಲಿ ಕಾಣಲಾಗದೆ ಅದನ್ನು ಪ್ರಶ್ನಿಸುವ, ಅನುಮಾನದಿಂದ ನೋಡುವ ಮತ್ತು ಇಂದಿನ ಸಮಾಜಕ್ಕೆ ಅದನ್ನು ಒಗ್ಗಿಸಿಕೊಳ್ಳುವ ವಿವಿಧ ಬಗೆಗಳನ್ನು ಇವರ ಕಾವ್ಯದಲ್ಲಿ ಕಾಣಬಹುದಾಗಿದೆ.

ಕೆ.ಬಿ.ಸಿದ್ದಯ್ಯನವರ ಕಾವ್ಯದ ಜೀವಂತಿಕೆಯಿರುವುದು ಅವರು ಬಳಸುವ ಭಾಷೆ ಮತ್ತು ಸಮಾಜದ ಅತ್ಯಂತ ಕೆಳ ಸಮುದಾಯದ ಬದುಕಿನ ಸೂಕ್ಷ್ಮ ವಿವರಗಳನ್ನು ಕಟ್ಟಿಕೊಡುವಲ್ಲಿ. ಗ್ರಾಮ ಪರಿಸರದ ಸಣ್ಣ ಸಣ್ಣ ವಿವರಗಳನ್ನು ಆಡುಮಾತಿನ ಜಾನಪದೀಯ ಶೈಲಿಯಲ್ಲಿ ಅಭಿವ್ಯಕ್ತಿಪಡಿಸುವ ಇವರು ತಮ್ಮ ಕಾವ್ಯಗಳನ್ನು ತಳಮಟ್ಟದಿಂದ ಕಟ್ಟುತ್ತಾರೆ. ವಚನ ಚಳುವಳಿಯ ಗಾಢ ಪ್ರಭಾವ ಅದರಲ್ಲೂ ಅಲ್ಲಮಪ್ರಭುವಿನಿಂದ ಗಾಢ ಪ್ರಭಾವಿತರಾಗಿರುವ ಸಿದ್ದಯ್ಯನವರು ಅಲ್ಲಮನನ್ನು ತಮ್ಮ ಕಾವ್ಯಗಳಲ್ಲಿ ಅನುಸಂಧಾನಿಸಿದ್ದಾರೆ. ಅವರು ತಮ್ಮ ಕಾವ್ಯಗಳಾದ ಬಕಾಲ, ದಕ್ಲಕಥಾ ದೇವಿಕಾವ್ಯ, ಅನಾತ್ಮ, ಗಲ್ಲೆಬಾನಿಗಳಲ್ಲಿ ಕೆಳವರ್ಗದ ಸ್ಥಳೀಯ ಪ್ರತಿಮೆಗಳ ಆಯ್ಕೆ, ಒಡಲ ನೆಲದಿಂದಲೇ ಒಡಮೂಡುವ ರೂಪಕಗಳ ಸೃಷ್ಟಿ, ಅಲ್ಲಮನು ಬಳಸುವ ಅಪಾರ ಶಬ್ದ ಸಂಪತ್ತಿನ ರಾಶಿಯನ್ನು ಬಳಸಿಕೊಳ್ಳುವ ಮೂಲಕ ಸಿದ್ದಯ್ಯನವರು ತಮ್ಮ ಕಾವ್ಯಗಳನ್ನು ಹೆಣೆದಿದ್ದಾರೆ. ವಚನ ಚಳುವಳಿಯ ಸಾಧ್ಯತೆ–ಬಾಧ್ಯತೆಗಳನ್ನು ವಿಮರ್ಶಿಸುವ, ಪ್ರಶ್ನಿಸುವ ಮೂಲಕ ಇಂದಿಗೆ ವಚನಕಾರರ ಚಿಂತನೆಗಳು ಏನಾಗಿವೆ ಎಂದು ಕೇಳುವುದರ ನೈತಿಕ ಸ್ಥೈರ್ಯ ಸಿದ್ದಯ್ಯನವರ ಕಾವ್ಯದಲ್ಲಿ ಕಂಡು ಬರುತ್ತದೆ.

ಪ್ರಸ್ತುತ ನನ್ನ ಅಧ್ಯಯನದಲ್ಲಿ ಸಿದ್ದಯ್ಯನವರ ಕಾವ್ಯಗಳಲ್ಲಿ ಅಲ್ಲಮನು ವಿವಿಧ ನೆಲೆಗಳಲ್ಲಿ ಅನುಸಂಧಾನಗೊಂಡಿರುವ ಬಗೆಯನ್ನು ಸ್ಥೂಲವಾಗಿ ವಿವರಿಸಲು ಪ್ರಯತ್ನಿಸಿದ್ದೇನೆ.

4(ಎ) 'ಬಕಾಲ'ದ ಜಿಜ್ಞಾಸೆಯ ಧ್ಯಾನ

'ಬಕಾಲ' ಕೆ.ಬಿ.ಸಿದ್ದಯ್ಯನವರ ಪ್ರಥಮ ಕಾವ್ಯವಾಗಿದೆ. ಭೂ ಸೃಷ್ಟಿಯ ಆದಿಯಲ್ಲಿ 'ಬಕಾಲ' ಎನ್ನುವ ಒಬ್ಬ ಮುನಿಗಳಿದ್ದರೆಂದು ಒಂದು ಸಮುದಾಯದ ನಂಬಿಕೆಯಿದೆ. ಈ 'ಬಕಾಲಮುನಿ' ಜಾಂಬವ ಗುರುಗಳ ಮೂಲಗುರುಗಳಾಗಿದ್ದು, ಈ ಭೂಮಿಯ ಸೃಷ್ಟಿಗೆ ಕಾರಣಪುರುಷರೆಂದು, ಮಾದಿಗ ಜನಾಂಗದ ಮೂಲ ಪುರುಷರೆಂದೂ ಆ ಸಮುದಾಯದವರು ನಂಬಿದ್ದಾರೆ. ಸಂಪೂರ್ಣ ಜಲಾವೃತ್ತವಾಗಿದ್ದ ನೀರನ್ನು ಹೆಪ್ಪುಗಟ್ಟಿಸಿ ಭೂಮಿಯನ್ನು ಸೃಷ್ಟಿಸಿದ್ದರಿಂದ ಈ ಭೂಮಿಯಲ್ಲಿ ಯುದ್ದಗಳುಂಟಾಗಿ ಅದಕ್ಕೆ ನಾನೇ ಕಾರಣನೆಂದು ಅರಿತ ಬಕಾಲಮುನಿಗಳು ಪಾತಾಳಲೋಕಕ್ಕೆ ಹೋಗಿಬಿಟ್ಟರೆಂದು ಸಮುದಾಯದ ಜನರು ಹೇಳುತ್ತಾರೆ.

ಸಿದ್ದಯ್ಯನವರು ಕಾವ್ಯದಲ್ಲಿ ಈ ಬಕಾಲಮುನಿಯನ್ನು ತಮ್ಮೊಳಗೆ ಆಹ್ವಾನಿಸಿಕೊಂಡಿದ್ದಾರೆ. ತಮ್ಮ ನಾಲಿಗೆ, ಮಾತು, ಅಕ್ಷರ ರೂಪದಲ್ಲಿ ಆ ಕ್ರಿಯೆಯನ್ನು ಸಾಧ್ಯವಾಗಿಸಿಕೊಂಡಿದ್ದಾರೆ. ದಲಿತ ಸಂವೇದನೆಯನ್ನು ತಮ್ಮ ಕಾವ್ಯದಲ್ಲಿ ವಿಶಿಷ್ಟವಾಗಿ ನಿರೂಪಿಸುವ ಸಿದ್ದಯ್ಯನವರು, ಆ ಸಮುದಾಯದ ನೋವು ಯಾತನೆಗಳನ್ನು, ಸಮಾಜದ ವಿರುದ್ಧ ಅಸಹನೆ ಅತೃಪ್ತಿಗಳನ್ನು ಬಹು ತಣ್ಣನೆಯ ಸ್ಥಿತಿಯಲ್ಲಿ ಪರಿಣಾಮಕಾರಿಯಾಗಿ ವ್ಯಕ್ತಪಡಿಸುತ್ತಾರೆ. ದಲಿತ ಸಮುದಾಯದ ಸಂಸ್ಕೃತಿಯನ್ನು ಅತ್ಯಂತ ಜೀವಂತವಾಗಿ ಸಶಕ್ತವಾಗಿ ತಮ್ಮ ನೆಲದ ಪ್ರತಿಮೆ, ರೂಪಕಗಳನ್ನು ಬಳಸಿ ಕಾವ್ಯದಲ್ಲಿ ನಿರೂಪಿಸುತ್ತಾರೆ. ಇದು ಸಿದ್ದಯ್ಯನವರು ಸಿದ್ದಿಸಿಕೊಂಡ ವಿಶಿಷ್ಟ ಕಾವ್ಯ ಕಲೆಯಾಗಿದೆ. ನೆಲದ ಪ್ರತಿಮೆಗಳ ಬಳಕೆಯು ಕಾವ್ಯದ ಬಂಧವನ್ನು ಗಟ್ಟಿಗೊಳಿಸಿ ಕಾವ್ಯಾರ್ಥವನ್ನು ಶ್ರೀಮಂತಗೊಳಿಸಿದೆ.

ಶೋಷಿತ ಸಮುದಾಯವು ಶತಮಾನಗಳಿಂದ ಅನುಭವಿಸಿದ ನೋವು, ಅವಮಾನ, ಹಿಂಸೆ ಇವು 'ಬಕಾಲ' ಕಾವ್ಯದ ವಸ್ತುವಾಗಿದೆ. "ಬಕಾಲನನ್ನು ಸಂಧಿಸಿದ ಕವನದ ನಾಯಕನ ಮನೋವ್ಯಾಪಾರ, ಒಡನಾಟ, ಸಂವಾದ ಹಾಗೂ ಧ್ಯಾನಧಾರಣೆಗಳೇ 'ಬಕಾಲ' ಕವನದ ಮುಖ್ಯ ಕೇಂದ್ರವಾಗಿದೆ".[1] ಕಾವ್ಯವು ಸಂಕಟಗಳನ್ನು ತೋರಿಸುವ ಭಿತ್ತಿಯಾಗಿದೆ. ಜಾತಿ ವ್ಯವಸ್ಥೆಯಂತಹ ಅಮಾನವೀಯ ಆಚರಣೆಗಳೂ ತಳಸಮುದಾಯವೊಂದನ್ನು ಹೇಗೆ ನಡೆಸಿಕೊಂಡಿವೆ ಎಂಬುದನ್ನು ಕಾವ್ಯವು ಕಾಣಿಸುತ್ತದೆ. ಈ ಜಾತಿ ವ್ಯವಸ್ಥೆಯ ವಿರುದ್ಧ ಬಹುದೊಡ್ಡ ಕ್ರಾಂತಿಯನ್ನುಂಟು ಮಾಡಿದ ವಚನಕಾರರ ಸಾಮಾಜಿಕ ಚಳುವಳಿಯನ್ನು ಇಂದಿನ ವರ್ತಮಾನದ ಸಂಧರ್ಭದಲ್ಲಿ ಪ್ರಶ್ನಿಸುವ, ಮೌಲ್ಯಮಾಪನ ಮಾಡುವ ಗುಣವನ್ನು ಈ ಕಾವ್ಯವು

ಹೊಂದಿದೆ. ದಾಸಿಮಯ್ಯ, ಅಲ್ಲಮ, ಬಸವಣ್ಣ, ಅಕ್ಕಮಹಾದೇವಿ, ಮಾದಾರ ಚೆನ್ನಯ್ಯ ಮುಂತಾದ ವಚನಕಾರರ ಸಾಮಾಜಿಕ ಆಶಯಗಳ ಅಭಿವ್ಯಕ್ತಿಯನ್ನು ಕಾವ್ಯವು ದರ್ಶಿಸುತ್ತದೆ.

ಕವಿತೆಯಲ್ಲಿ ಅಸ್ಪೃಶ್ಯ ಸಮುದಾಯದ ದುಃಖದುಮ್ಮಾನಗಳ ಚಿತ್ರಣವಿದೆ. ಕವನದ ನಾಯಕನ ಕನಸುಗಳು, ತಳಮಳಗಳು ಇಲ್ಲಿ ವ್ಯಕ್ತಗೊಂಡಿವೆ. ಅಳಿದ ಕಾಲ (ಅಕಾಲ) ಮತ್ತು ಮುಂದೆ ಬರುವ ಕಾಲ (ಬಕಾಲ)ಗಳ ಸೂಕ್ಷ್ಮಗ್ರಹಿಕೆ ಕವನದಲ್ಲಿದೆ. ಎಲ್ಲಕ್ಕಿಂತ ಮುಖ್ಯವಾಗಿ ಕವನದಲ್ಲಿ ಸಿದ್ದಯ್ಯನವರಿಗೆ ಈ ಸಮಾಜವು ಎದುರಾಗಿಸಿರುವ ಪ್ರಶ್ನೆಗಳಿಗೆ ಉತ್ತರವನ್ನು ತಿಳಿಯುವ ತೀವ್ರ ಬಯಕೆಯಿದೆ ಹಾಗು ಆ ಗಂಭೀರ ಪ್ರಶ್ನೆಗಳನ್ನು ಪರಿಶೀಲಿಸುವ ಮತ್ತು ಚಿಂತನೆಗೆ ಒಳಪಡಿಸುವ ತವಕವಿದೆ. 'ತಾನು ಮುಟ್ಟಬಾರದವನಾದ ಬಳಿಕ ಏನನ್ನು ಮುಟ್ಟಬೇಕು?' ಎಂದು ಗಂಭೀರವಾಗಿ ಚಿಂತಿಸುತ್ತಾರೆ ಇದನ್ನು ಕಿ.ರಂ.ನಾಗರಾಜರವರು 'ಜಿಜ್ಞಾಸೆಯ ಧ್ಯಾನ'[2] ಎಂದು ಕರೆಯುತ್ತಾರೆ. ಇಂತಹ ಜಿಜ್ಞಾಸೆಯ ಧ್ಯಾನವು ಅಲ್ಲಮನ ವಚನಗಳ ಮುಖ್ಯ ಸಾರವಾಗಿರುವುದನ್ನು ಕಾಣಬಹುದಾಗಿದೆ. ಸಿದ್ಧ ಮಾದರಿಗಳನ್ನು ಪಲ್ಲಟಿಸಿ ಮರು ಚಿಂತನೆಗೆ ಒಳಪಡಿಸುವ ಮೂಲಕ ಸಮಾಜದ, ಮನುಷ್ಯನ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸುವ ಗುಣ ಅಲ್ಲಮನಲ್ಲಿದೆ. ಅಲ್ಲಮನೂ ಕೂಡ ಸದಾ ಧ್ಯಾನಿಸುವ ಮನಸ್ಥಿತಿಯವನು. ಚಿಂತನೆಗೆ ಒಳಪಡಿಸದೆ ಆತ ಏನನ್ನೂ ಒಪ್ಪಿಕೊಳ್ಳಲಾರ, ಹಾಗೆ ಒಪ್ಪಿದ್ದಾನೆ ಎಂದು ತಿಳಿದಿರುವುದನ್ನೂ ಕೂಡ ಮರು ಚಿಂತನೆಗೆ ಒಳಪಡಿಸುವುದೇ ಅವನ ಮುಖ್ಯ ಗುಣ. ಈ ನಿರಂತರ ಧ್ಯಾನದ ಸ್ಥಿತಿಯಿಂದಲೇ ಅಲ್ಲಮ, ಶೂನ್ಯ ಸಿಂಹಾಸನದ ಗದ್ದುಗೆಯೇರಿ ಅಧ್ಯಕ್ಷ ಸ್ಥಾನದಲ್ಲಿ ಕುಳಿತದ್ದು. ಆ ಮೂಲಕ ಶಿವಶರಣರ ಬೌದ್ಧಿಕ ಉತ್ಕರ್ಷಕ್ಕೆ ಕಾರಣಕರ್ತನಾದದ್ದು. ಸಿದ್ದಯ್ಯನವರ 'ಬಕಾಲ' ಕವಿತೆಯಲ್ಲಿ ಈ ರೀತಿಯ ಧ್ಯಾನಿಸುವ ಸ್ಥಿತಿಯನ್ನು ಕಾಣಬಹುದಾಗಿದೆ. ಅಲ್ಲಮನ ಬೆಡಗಿನ ಪದಗಳನ್ನು ತಮಗೆ ಬೇಕಾದಂತೆ ಸಮರ್ಥವಾಗಿ ಬಳಸಿಕೊಂಡು ಈ ಇಡೀ ಕವಿತೆಯಲ್ಲಿ ಅಲ್ಲಮ ಮತ್ತು ಸೃಜನಶೀಲ ಕಾವ್ಯ ಎರಡನ್ನೂ ಬೆಸೆದಿದ್ದಾರೆ, ಐಕ್ಯಗೊಳಿಸಿದ್ದಾರೆ.

'ಬಕಾಲ' ಕವಿತೆಯ ಮೊದಲ ಪಾದದಲ್ಲಿ ಅರಿವು, ಜ್ಞಾನ, ಅಸ್ಪೃಶ್ಯತೆ ಮೊದಲಾದ ಸಂಗತಿಗಳನ್ನು ಹೇಳುವ ಮೂಲಕ ಕವನದ ನಾಯಕ ಬಕಾಲಮುನಿಯನ್ನು ಸಂಧಿಸುವ ಪ್ರಯತ್ನವಾಗಿ ಅವನನ್ನು ಭೂಮಿಗೆ ಆಹ್ವಾನಿಸುವ ವಿವರವಿದೆ.

ತೊಗಲ ಚೀಲದೊಳಗೆ
ಒಂದು ಹಗಲುಗನಸಿನ ಕೂಸು
ಇರುಳು ಇರುವೆ ಸಾಲಾಯ್ತು
ತನ್ನೊಡಲ ಕಣ್ಣಟ್ಟೆಯಲಿ
ಕರುಳ ವ್ಯಸನ ಮಾಂಸ ಪರ್ವತ

ಬೆವರ ಸಮುದ್ರದೊಳೀಜಿ
ಬದುಕಿ ಉಳಿದ ಇರುಳ್ಗಕ್ಕಿ
ಬಾಯಿಗೆ
ಜೀವ ಜಲವನೇ ತಂದೂಯ್ದು
ಜೀವಾಂಶ ಸಂಭೂತರೇ,

'ಬಕಾಲ'ದ ನಾಯಕನು ತನ್ನ ಹುಟ್ಟು, ಪಡೆದ ಜ್ಞಾನದ ಹಿನ್ನಲೆಯ ಬಗ್ಗೆ ತಿಳಿಸುತ್ತಾರೆ. ತನ್ನ ಅಜ್ಞಾನವನ್ನು ಅಳಿಸಿಹಾಕಿ ಜ್ಞಾನವನ್ನು ತುಂಬಿದವರನ್ನು ನೆನೆಯುತ್ತಾನೆ. ಇವನ ಪಾಲಿಗೆ ಜ್ಞಾನವೆನ್ನುವುದು ಜೀವಜಲವಾಗಿದೆ. ಅಜ್ಞಾನದ ಅಂಧಕಾರದಲ್ಲಿದ್ದ ಜೀವಕ್ಕೆ ನೀಡಲೆಂದು, ಜ್ಞಾನದ ಅರಿವಿನ ಅಮೃತವಾಗಿ ಜೀವಜಲವನ್ನು ತರಲಾಗಿದೆ. ಆದರೆ ಹಾಗೆ ತಮದ ಜೀವಜಲವನ್ನು ಅವನಿಗೆ ನೀಡಲಾಗಿಲ್ಲ ಕಾರಣ ಅವನು ಮುಟ್ಟಬಾರದ ಸ್ಥಿತಿಯಲ್ಲಿರುವವನು. ಅವನನ್ನು ಸಮಾಜ ಅಸ್ಪೃಶ್ಯನನ್ನಾಗಿ ಮಾಡಿದೆ.

ಕಾವ್ಯದ ಮೇಲಿನ ಸಾಲುಗಳಲ್ಲಿರುವ 'ತಂದೂಯ್ದು' ಪದ ಆ ಅಸ್ಪೃಶ್ಯ ಆಚರಣೆಯ ಘೋರಸ್ಥಿತಿಯನ್ನು ಚಿತ್ರಿಸುತ್ತದೆ. ಕವಿ ಇದನ್ನು ಉಗ್ರವಾಗಿ ಆಕ್ರೋಶಭರಿತ ಧ್ವನಿಯಲ್ಲಿ ಅಭಿವ್ಯಕ್ತಿಸದೆ ಸಹನೆಯಿಂದಲೇ ಬಹು ತಣ್ಣನೆಯ ಶಾಂತಸ್ಥಿತಿಯಿಂದಲೇ ಅಭಿವ್ಯಕ್ತಿಸುತ್ತಾರೆ. ಈ ರೀತಿಯ ನಿರೂಪಣೆಯು ಇಡೀ ಕಾವ್ಯದಲ್ಲಿ ಮುಖ್ಯಧಾರೆಯಾಗಿ ಹರಿದಿರುವುದನ್ನು ಕಾಣಬಹುದಾಗಿದೆ. ಈ ರೀತಿಯ ನಿರೂಪಣಾ ಶೈಲಿಯು ಕಾವ್ಯಕ್ಕೆ ವ್ಯಾಪಕ ಅರ್ಥವಲಯಗಳನ್ನು[3] ತಂದು ಕೊಟ್ಟಿದೆ.

ನನ್ನ ಅಂಗೈಯಲ್ಲಾಡುವ
'ಮುಟ್ಟಬಾರದ' ಕೂಸಿಗೊಂದು
ಹೆಸರ ಕೊಡಿ, ಹೆಸರ ಕೊಡಿ

ಕವಿಯ ಮನಸ್ಸು ಅಸ್ಪೃಶ್ಯತೆಯ ಬಗೆಗೆ ಬಹಳವಾಗಿ ಧ್ಯಾನಿಸಿದೆ. ತನ್ನ ಇಡೀ ಸಮುದಾಯಕ್ಕೆ ಆದ ಶತಮಾನಗಳ ಶೋಷಣೆಯನ್ನು ಕವಿತೆಯಲ್ಲಿ ನಿರೂಪಿಸುತ್ತಾರೆ. ಸಮಾಜದ ವಿರುದ್ಧ ನಾಯಕನ ವ್ಯಂಗ್ಯವೂ ಈ ಸಾಲುಗಳಲ್ಲಿ ವ್ಯಕ್ತವಾಗುತ್ತದೆ. ಸಮಾಜ ಮಗುವನ್ನು 'ಮುಟ್ಟಬಾರದ ಕೂಸು' ಎಂದು ಈಗಾಗಲೇ ಕರೆದು ಅದನ್ನು ಅಸ್ಪೃಶ್ಯನನ್ನಾಗಿಸಿದೆ. ಸಮಾಜದ ಮನುಷ್ಯನೊಬ್ಬನ ಅಸ್ಮಿತೆಯ ಪ್ರಶ್ನೆ ಇದಾಗಿರುವುದರಿಂದ ಹೆಸರು ಕೊಡಿ ಎಂದು ಕೇಳಲಾಗುತ್ತಿದೆ. ಕೂಸಿಗೆ ಹೆಸರು ಕೊಡಿ ಎಂದು ಇಲ್ಲಿ ಕೇಳುತ್ತಿರುವುದು ಕೇಳುವವನ ಹಕ್ಕು ಮತ್ತು ಸಮಾಜದ ಅಪಹಾಸ್ಯ ಎರಡನ್ನೂ ತೋರಿಸುತ್ತದೆ.

ಎತ್ತಬಾರದ ಕಲ್ಲು
ಎತ್ತಬಾರದ ಕಲ್ಲು?
ನಡೆಯಬಾರದ ಹಾದಿ
ನಡೆಯಬಾರದೆ ತಾಯಿ?

ಮತ್ತೆ ಕವಿ ಸಮಾಜದ ನಿರ್ಬಂಧಿತ ವ್ಯವಸ್ಥೆಯನ್ನು ಪ್ರಶ್ನಿಸುತ್ತಿದ್ದಾರೆ. ಸಮಾಜದ ಉಚ್ಚವರ್ಗವು ಅತ್ಯಂತ ಕೆಳಸ್ತರದ ಸಮುದಾಯಕ್ಕೆ ನುಡಿಯಬಾರದು, ನಡೆಯಬಾರದು, ಮುಟ್ಟಬಾರದು, ಪ್ರವೇಶಿಸಬಾರದು. . . . . ಹೀಗೆ ಅನೇಕ ನಿಷಿದ್ಧ, ನಿರ್ಬಂಧಗಳನ್ನು ಹೇರಿದೆ. ಆ ಸಮುದಾಯದವರನ್ನು ಮನುಷ್ಯರೆಂದು ತಿಳಿಯದೆ ಅಮಾನವೀಯ ಆಚರಣೆಗಳನ್ನು ನಡೆಸುತ್ತಿದೆ. ಮನುಷ್ಯರಾದ ತಾವು ಈ ಭೂಮಿಯ ಮೇಲೆ ಬದುಕುವುದಾದರೂ ಹೇಗೆ? ಎಂಬ ಜಿಜ್ಞಾಸೆ ಇಲ್ಲಿದೆ.

ಬಯಲ ಕುಸುಮದ
ಮೇಲೊಂದಾಲಯದ
ದುಂಬಿ ಬಂದೆರಗಿತ್ತು
ಪಾತಾಳ ಪಕ್ಷಿಗೆ ಬಿದ್ದೊ
ಗಾವುದ ಗಾವುದ ಕನಸುಗಳು

ಸಮಾಜದ ಕೆಳಸ್ತರದ ಜೀವ ಚೇತನದಲ್ಲಿ ಹೊಸ ಕನಸುಗಳ, ಹೊಸ ಬಯಕೆಗಳ ಮಹಾಪೂರವೇ ಇದೆ. ಆದರೆ ಅಜ್ಞಾನ, ಭ್ರಮೆ ಎನ್ನುವ ದುಂಬಿ ಆ ಕನಸುಗಳ, ಬಯಕೆಗಳ ಜೀವರಸವನ್ನು ಹೀರಿ ಅವುಗಳನ್ನು ಅಶಕ್ತಗೊಳಿಸುತ್ತಿದೆ. ಆ ಮೂಲಕ ಜೀವ ಚೇತನದಲ್ಲಿ ಹೊಸಬಯಕೆಗಳು ಗರಿಗೆದರದಂತೆ ಮಾಡಿದೆ.

ಗೋಣಿ, ಆಲವ, ಅರಸಿ ಆಕಾಶಕೆ
ತಾನುಂಡ ಫಲವನು ತನ್ನ ಬಳಗವು
ಭೂ ಸೂತಕದಲಿ ಮಹಾಭಾರತವು
ಸ್ತ್ರೀ ಸೂತಕದಲಿ ರಾಮಾಯಣವು

ಈ ಸಾಲುಗಳಲ್ಲಿ ಕವಿತೆಯ ನಾಯಕ ಅರಿವನ್ನು, ಆತ್ಮಜ್ಞಾನವನ್ನು ಅರಸಿ ತಾನು ಅದನ್ನು ಪಡೆದುಕೊಂಡದ್ದನ್ನು ಹೇಳುತ್ತಾನೆ. ತಾನು ಪಡೆದಕೊಂಡ ಆ ಜ್ಞಾನವು ತನ್ನ ಸಮುದಾಯದವರೆಲ್ಲರಿಗೂ ಸಿಗಬೇಕು ಎಂಬ ಅಪೇಕ್ಷೆಯಿದೆ. ಇಲ್ಲಿ ಅಲ್ಲಮನ ಅರಿವು ಮತ್ತು ಸೂತಕ ಪ್ರಜ್ಞೆಗಳು ಬೆಸೆದುಕೊಂಡಿವೆ. ಭೂಸೂತಕದಿಂದ ಮಹಾಭಾರತ, ಸ್ತ್ರೀ ಸೂತಕದಿಂದ ರಾಮಾಯಣ ಯುದ್ಧಗಳು ನಡೆದಿವೆ. ಈ ಯುದ್ಧಗಳು ಮನುಷ್ಯನ ಅಜ್ಞಾನದ ಕಾರಣವಾಗಿ ಉಂಟಾಗಿವೆ ಎಂಬ ವಿಷಾದವಿದೆ.

ಅಕಾಲ-ಬಕಾಲ ಮುನಿಯೇ
ನಿನ್ನೆಡ ತೊಡೆ ಮಾಂಸದಲಿ
ಮಲವೇ ಫಲವು
ಫಲವೇ ವೃಕ್ಷವು
ಆಕಾಶದಗಲ - ಸಮುದ್ರದಗಲ
ಭೂಮಿ - ಆಕಾಶವೆಂಬರಡು ಘನವು
ನಿನ್ನೆದೆಯ ಜಲಗಣ್ಣಿನಲ್ಲಿ ಅರಳಿದಂಥ
ಹಾಲುಗುಸುಮಗಳು
ಬಕಾಲ ಮುನಿಯೇ ಬಾ
ಬಯಲ ಕುಸುಮವ ತಾ॥

ಇಂದ್ರಿಯಗಳ ಸುಖವನ್ನು ಮಲವೆಂದು ಪರಿಗಣಿಸಿ ವಿಸರ್ಜಿಸಿದ, ತ್ಯಜಿಸಿದ ಮಹಾಮುನಿ ಬಕಾಲನನ್ನು ಕವಿತೆಯ ನಾಯಕ ಮತ್ತೊಮ್ಮೆ ಭೂಮಿಗೆ ಆಹ್ವಾನಿಸುತ್ತಿದ್ದಾರೆ. ವರ್ತಮಾನದ ಇಂದಿನ ಸಾಮಾಜಿಕ ಸ್ಥಿತಿಯನ್ನು ಸರಿಪಡಿಸಲು ಬಕಾಲನ ಅವಶ್ಯಕತೆ ಇದೆ. ಒಂದು ಕಾಲದಲ್ಲಿ ಸಂಪೂರ್ಣ ಜಲಾವೃತ್ತ ಸ್ಥಿತಿಯಲ್ಲಿದುದ್ದನ್ನು ಭೂಮಿಯಾಗಿ ಪರಿವರ್ತನೆಗೊಳಿಸಿದ್ದು ಬಕಾಲ ಮುನಿ. ಇಂದು ಈ ವರ್ತಮಾನದ ಬದುಕನ್ನು ಶೋಷಣೆಯಿಂದ ಮುಕ್ತಗೊಳಿಸಲು ಅದೇ ಪರಿವರ್ತನಕಾರನ ಆಗಮನ ಅನಿವಾರ್ಯವಾಗಿದೆ ಎಂದು ಇಲ್ಲಿ ಭಾವಿಸಲಾಗಿದೆ. ಬಕಾಲನನ್ನು ಯುಗಪ್ರವರ್ತಕನೆಂದು ಪರಿಗಣಿಸಿ ಕತೆಯನಾಯಕ ಇಂದಿನ ಸಾಮಾಜಿಕ ಸಂದಿಗ್ಧ ಪರಿಸ್ಥಿತಿಯನ್ನು ಸರಿಪಡಿಸಲು ಕರೆಯುತ್ತಿದ್ದಾನೆ. ತನ್ನ ಹೃದಯದಲ್ಲಿ ಬ್ರಹ್ಮಾಂಡವೆಂಬ ಘನವನ್ನು ಒಳಗೊಂಡಿರುವ ಬಕಾಲನನ್ನು ಕವಿತೆಯ ನಾಯಕ ಹೊಸ ಬಯಕೆ, ಹೊಸ ಕನಸುಗಳ ಜೊತೆಗೆ ಮಾನವೀಯತೆಯುಳ್ಳ ಮೃದು ಜೀವಗಳನ್ನು ತರುವಂತೆ ಆಹ್ವಾನಿಸುತ್ತಿದ್ದಾನೆ.

ಇಲ್ಲಿನ ಭೂಮಿ-ಆಕಾಶವೆಂಬ ಘನದ ಬಗ್ಗೆ ಅಲ್ಲಮನ ಚಿಂತನೆಯನ್ನು ಕಾಣಬಹುದಾಗಿದೆ.

ಭೂಮಿಯಾಕಾಶವೊಂದು ಜೀವನ ಉದರ
ಅಲ್ಲಿ ಘನವೇನು ಘನವೆನ್ನದವಂಗೆ?
ಅಲ್ಲಿ ಕಿಱಿದೇನು ಕಿರಿದೆನ್ನದವಂಗೆ?
ಆ ಘನವು ಮನಕ್ಕೆ ಗಮಿಸಿದರೆ
ಇನ್ನು ಸರಿಯುಂಟೆ ಗುಹೇಶ್ವರ?(20)

ಭೂಮಿಯಾಕಾಶಗಳು ಅಲ್ಲಮನ ಪರಿಭಾಷೆಯಲ್ಲಿ ಬ್ರಹ್ಮಾಂಡವಾಗುತ್ತದೆ. ಈ ಬ್ರಹ್ಮಾಂಡವೆಂಬ ಘನತತ್ವವನ್ನು ತಾನೇ ಎಂದು ಅರಿತರೆ ಪೂರ್ಣತ್ವ ಲಭಿಸುತ್ತದೆ ಎನ್ನುವುದು ಅವನ ನಿಲುವಾಗಿದೆ. ಕವಿತೆಯಲ್ಲಿ ಇಂಥ ಬ್ರಹ್ಮಾಂಡವು ಬಕಾಲನ ಹೃದಯದ ಜಲಗಣ್ಣಿನಲ್ಲಿ ಅರಳಿರುವಂತದ್ದಾಗಿದೆ ಎಂದು ಹೇಳಲಾಗಿದೆ.

'ಬಕಾಲ' ಕವಿತೆಯ ಎರಡನೇ ಪಾದದಲ್ಲಿ ಸಿದ್ದಯ್ಯನವರ ಗ್ರಾಮೀಣ ಬದುಕಿನ ಚಿತ್ರಣವನ್ನು ಕೊಡುತ್ತಾರೆ.

ನಾವು-ನಮ್ಮವರ ಅಂಗಡಿಗಳು
ರಾತ್ರಿ-ಹಗಲೆಂಬ ದಾಹದ್ದಂಬಲವೇ
'ಅಲ್ಲಮ'ನ ಬಾಯ್ದೊಂಬುಲಕೆ
ಕೈಯೊಡ್ಡಿದ 'ಕರುಣದ ಕಂದ'

ಕವಿತೆಯಲ್ಲಿ ನಾಯಕನಿಗೆ ತಾನು ಮತ್ತು ತನ್ನ ಸಮುದಾಯದ ಜನರ ಪರವಾದ ಚಿಂತನೆಯಿದೆ. ನಾಯಕ ತನ್ನನ್ನು ತಾನು ಅಲ್ಲಮನ ತತ್ವ-ಚಿಂತನೆಗಳಿಗೆ ಪ್ರಭಾವಿತನಾಗಿರುವ ಅಲ್ಲಮನ ಶಿಷ್ಯನೆಂದು ಕರೆದುಕೊಂಡಿದ್ದಾನೆ. ಅಲ್ಲಮನ ಕರುಣದ ಕಂದನಾಗಿದ್ದಾನೆ. ಇಲ್ಲಿ ನಾಯಕ ಮತ್ತು ಅವನ ಸಮುದಾಯದವರಿಗೆ ಜ್ಞಾನ, ಅರಿವನ್ನು ಪಡೆಯಬೇಕೆಂಬ ತೀವ್ರ ಹಂಬಲವಿದೆ, ದಾಹವಿದೆ. ಆದ್ದರಿಂದ ಇಲ್ಲಿ ಅರಿವಿನ ಗುರು ಅಲ್ಲಮನನ್ನು ನೆನೆಯಲಾಗಿದೆ. ಅಲ್ಲಮನು ರಾತ್ರಿ ಎನ್ನುವುದನ್ನು ಅಜ್ಞಾನವೆಂದೂ, ಹಗಲು ಎನ್ನುವುದನ್ನು ಅರಿವು ಎಂದೂ, ಕಂದ ಎನ್ನುವುದನ್ನು ಶಿಷ್ಯ ಎಂದೂ ತನ್ನ ವಚನ(ವಚನ ಸಂಖ್ಯೆ 13)ದಲ್ಲಿ ಬಳಸುತ್ತಾರೆ.

ನೀನೊಂದು ಹಸಿರು ಮರ ಬುಡದ
ಗೆದ್ದಲ ಜೀವ-ಜೀವ ನೀರು
ಎಲೆ, ಹೂವು, ಕಾಯಿ, ರಣ
ಹಣ್ಣ ಚಿತ್ತದೊಳಗೆ
ಒಂಬತ್ತು ಕ್ಲೇಶ ತತ್ತಿಗಳು

ಕಾವ್ಯದಲ್ಲಿ ಅಲ್ಲಮನ ಪಾರಿಭಾಷಿಕ ಪದಕೋಶವನ್ನು ಸಮರ್ಥವಾಗಿ ಬಳಸಿಕೊಳ್ಳಲಾಗಿದೆ. ಮನುಷ್ಯನ ದುಃಖ ನೋವುಗಳಿಗೆ ಕಾರಣವಾಗುವ, ಮನಸ್ಸಿಗೆ ವ್ಯಥೆಯನ್ನುಂಟು ಮಾಡುವ ಇಂದ್ರಿಯ ಸುಖಗಳನ್ನು, ವಿಷಯಾಸಕ್ತಿಗಳಿಗೆ ಕಾರಣವಾಗುವ ನವದ್ವಾರಗಳನ್ನು ಕುರಿತು ಇಲ್ಲಿ ಹೇಳಲಾಗಿದೆ. ಎಲೆ-ಪಂಚಕರ್ಮೇಂದ್ರಿಯಗಳಾದರೆ, ಹೂ-ಪಂಚವಿಷಯಗಳು, ಕಾಯಿ-ಪಂಚಜ್ಞಾನೇಂದ್ರಿಯಗಳು ಎಂದು ಅಲ್ಲಮ ತನ್ನ ವಚನದಲ್ಲಿ ಹೇಳಿದ್ದಾನೆ.

ಐದು ಬಣ್ಣದ ಗಿಡುವಿಂಗೆ
ಐದೆಲೆ, ಐದು ಹೂ, ಐದು ಕಾಯಾಯಿತ್ತು
ಮತ್ತೈದಜಿ ಠಾವಿನಲ್ಲಿ, ಐದು ಹೂವಿನ ಕ್ರಮದಲ್ಲಿ
ಹಣ್ಣ ಮೆಲಬಲ್ಲಡೆ ಗುಹೇಶ್ವರಲಿಂಗವು ತಾನೆ ನೋಡಾ!(242)

ಈ ವಚನದ ಸಾಲುಗಳ ಸಾರವನ್ನು ಸಿದ್ದಯ್ಯನವರು ಕಾವ್ಯದ ಮೇಲಿನ ಸಾಲುಗಳಲ್ಲಿ ಬಳಸಿಕೊಂಡಿದ್ದಾರೆ.

ಕುಸುಮದ ಆವಯಯವಗಳ
ಆಯ್ದು-ಆಲಂಗಿಸಿ ಅತ್ತು ಕರೆದು
ಫಲವೇನು ತಂಗಿ?
ನಿನ್ನ ಕೈಗೆಟುಕದ ಫಲ
ಪಕ್ಷಿಯವನು,
ಅವನ ಕಾಲುಗಳಲ್ಲಿ ಚಕ್ರ ಇದ್ದಾವು
ನೀನೇರಿದ ಆಸೆಗುದುರೆಯ ಬೆನ್ನ
ಬೆವರೊಳಾಡುವ ಕ್ರಿಮಿಕೀಟಗಳ
ಆಯ್ದು ತಿನ್ನುವ
ಆದಿ ಪಕ್ಷಿಯದು.

ಕಾವ್ಯದ ನಾಯಕ ಬಕಾಲಮುನಿಯನ್ನು ಸಂಧಿಸಿ ಅವನನ್ನು ಭೂಮಿಗೆ ಬರುವಂತೆ ಬೇಡಿಕೊಂಡಿದ್ದಾನೆ. ಇಲ್ಲಿ ಆ ಬಕಾಲ ಮುನಿಯನ್ನು ಧ್ಯಾನಿಸುತ್ತಾನೆ. ಅವನ ಗುಣಗಳನ್ನು ವಿವರಿಸುತ್ತಾನೆ. ಅವನು ತನ್ನ ಕಾಲುಗಳಲ್ಲಿ ಚಕ್ರವುಳ್ಳವನಾಗಿದ್ದು, ಪಾತಾಳಲೋಕಮಾರ್ಗವಾಗಿ ಹೋಗುತ್ತಿದ್ದವನನ್ನು ತನ್ನ ನಡುನೆತ್ತಿಯ ಬಾಯ ಮಾರ್ಗದಲ್ಲಿ ಬರುವಂತೆ ಮಾಡಿದ್ದಾನೆ. ಮಾನವನ ಇಂದ್ರಿಯಗಳ ಆಸೆಗಳನ್ನು ಮನಸ್ಸಿಂದ ದೂರಮಾಡುವ ಅರಿವಿನ ಗುರುವಾಗಿ ಬಕಾಲ ಮುನಿ ಇದ್ದಾನೆ. ಆ ಸಲುವಾಗಿ ಮನಸ್ಸನ್ನು ಆಧ್ಯಾತ್ಮಿಕ ಚಿಂತನೆಗೊಯ್ಯುವ ಪರಮಹಂಸದ ಪ್ರತೀಕನಾಗಿದ್ದಾನೆ. ಅವನು ಈ ಭೂಮಿಗೆ ಆದಿಗುರು, ಜೀವ ಸಂಕುಲಗಳ ಪಾಲಿಗೆ ಅದಿಜೀವವಾಗಿದ್ದಾನೆ ಎಂದು ನಾಯಕ ಅಭಿಪ್ರಾಯಪಡುತ್ತಾನೆ. ಅಲ್ಲಮನಲ್ಲಿ ಪಕ್ಷಿ ಎನ್ನುವುದು ಜೀವದ, ಪರಮಹಂಸದ ಸಂಕೇತವಾಗಿ ಬಳಕೆಯಾಗುತ್ತಿದೆ. 'ಮುಗಿಲ ಬಣ್ಣದ ಪಕ್ಷಿ, ಮಗನ ಕೈಯ ಅರಗಿಳಿ'(34) ಎನ್ನುವಲ್ಲಿ ಅಲ್ಲಮ ಪಕ್ಷಿಯನ್ನು ಜೀವಕ್ಕೂ, 'ವೃಕ್ಷವಿಲ್ಲದ ಕಳದಲ್ಲಿ ಒಂದು ಪಕ್ಷಿ ಹುಟ್ಟಿತ್ತು ನೋಡಾ'(297) ಎನ್ನವಲ್ಲಿ ಪರಮಹಂಸದ ಸಂಕೇತವಾಗಿಯೂ ಬಳಸುತ್ತಾರೆ.

'ಬಕಾಲ' ಕವಿತೆಯ ಮೂರನೇ ಪಾದದಲ್ಲಿ ಕವಿ ಸಿದ್ದಯ್ಯನವರು ಕವನದ ನಾಯಕನ ಕುಟುಂಬದ ಜೀವನವನ್ನು ಕುರಿತು ಹೇಳುತ್ತಾರೆ. ಕುಟುಂಬದ ಹುಡುಗ-ಹುಡುಗಿಯ ಚಿತ್ರಣ, ಸಂಸಾರದ ಚಿತ್ರಣವನ್ನು ಕೊಡುತ್ತಾರೆ.

ಬೆನ್ನದಗರಿ ಮೂಳೆಗೆ ಕಟ್ಟಿದ್ದೀಯಲ್ಲ
ಅದು ಯಾರು ಹೊರಿಸಿದ ಗಂಟು?
ನಿನ್ನೆದೆಯ ಬಯಲಿನ ಹಸಿರು
ಅದು ಯಾವ ಕಾಲದ ನಂಟು?

ಗಿಡಬಾಲೆಗೆ ನೂರಾರು ಆಸೆಗಳಿವೆ, ಬಯಕೆಗಳಿವೆ. ಅವಳು ಆಸೆಗುದುರೆಯ ಬೆನ್ನೇರಿದವಳಾಗಿದ್ದಾಳೆ. ಅವಳು ಫಲವಂತಿಕೆ ಪಡೆಯಬೇಕೆಂಬ ಆಸೆಯ ಗಂಟನ್ನು ಬೆನ್ನಿಗೆ ಕಟ್ಟಿಕೊಂಡು ಅದನ್ನು ಜೀವಂತವಾಗಿರಿಸಿಕೊಂಡಿದ್ದಾಳೆ.

ಹಸಿರು ಲೋಕದ ಹಕ್ಕಿ
ಕಣ್ತೆರಸಿ ಕೂಗಿತ್ತು
'ಮುತ್ತಿನಶೆಟ್ಟಿ ತೊರೆ-ತೊರೆ'
'ಮುತ್ತಿನಶೆಟ್ಟಿ ತೊರೆ-ತೊರೆ'

ಸಂಸಾರದ ಬಂಧನದಿಂದ ಬಿಡುಗಡೆ ಹೊಂದಬೇಕೆಂಬ ಆಶಯವಿದೆ. ಕವನದಲ್ಲಿ ಶೆಟ್ಟಿಗೆ ಮುತ್ತು, ರತ್ನ, ಸಂಪತ್ತು, ಐಶ್ವರ್ಯ ಎಲ್ಲಾ ಇದ್ದರೂ ನಿಮ್ಮದಿಯಿಲ್ಲ. ಸಂಸಾರವೆನ್ನುವುದು ನೇಣು ಹಗ್ಗವಾಗಿ ಪರಿಣಮಿಸಿದೆ. ಹೊನ್ನು, ಹೆಣ್ಣು, ಅಹಂಕಾರ, ಸಂಸಾರ ಸಾಗರ ಇವೆಲ್ಲವನ್ನೂ ತೊರೆಯಬೇಕು ಎಂಬ ಕರೆಯಿದೆ. ಅಲ್ಲಮನ ಆಶಯ ಇಲ್ಲಿ ವ್ಯಕ್ತವಾಗಿದೆ. 'ತೊರೆ'ಯನ್ನು ಸಂಸಾರದ ಪ್ರತಿಮೆಯಾಗಿ(360), 'ಮುತ್ತು' ಮುಕ್ತಿಯ ಪ್ರತಿಮೆಯಾಗಿ(101, 690), ಕೂಗುತ್ತಿರುವ ಹಕ್ಕಿಯನ್ನು ಪರಮಹಂಸದ ಸಂಕೇತವಾಗಿ(292) ಅಲ್ಲಮ ಬಳಸಿದ್ದಾನೆ. ಸಂಸಾರದಿಂದ ವಿಮುಕ್ತರಾಗಿ ಮುಕ್ತಿಯನ್ನು ಹೊಂದಬೇಕೆನ್ನುವುದು ಅಲ್ಲಮನ ಆಶಯವಾಗಿದೆ. ಪಟ್ಟಪಾಡು, ಜ್ಞಾನ ಪಡೆಯಲು ಪಟ್ಟ ಕಷ್ಟ, ಪ್ರಭುತ್ವದ ಶೋಷಣೆಯ ವಿರುದ್ದ ಕೂಗು, ಆಧ್ಯಾತ್ಮದ ನುಡಿ ಮುಂತಾದವುಗಳನ್ನು ಹೇಳಲಾಗಿದೆ.

ಬಿಳಿಹಾಳೆ ರೂಲು ಕಾಲುವೇಲಿ
ತೇಲಿ ಮುಳುಗಿ ಈಜುವ
'ಅ' 'ಆ' 'ಇ' 'ಈ'
ಬೀಸಿದ ಬಲೆಯ ಕಡಿದು ಕಡಿದು
ಪಡೆದಂಥ ಜ್ಞಾನ

ಶಿಕ್ಷಣವನ್ನು, ಜ್ಞಾನವನ್ನು ಪಡೆದದ್ದು ನಾಯಕನಿಗೆ ಸುಲಭದ ಮಾತಾಗಿರಲಿಲ್ಲ. ಅವನಲ್ಲಿ ಅಜ್ಞಾನವೇ ತುಂಬಿ ಜ್ಞಾನವೆನ್ನುವುದು ತಲೆಯೊಳಗೆ ಸುಲಭವಾಗಿ ಹೋಗುವಂತಿರಲಿಲ್ಲ: ಆದ್ದರಿಂದ ಅವನು ಅದನ್ನು ಕಡಿದು ಕಡಿದು ಕಷ್ಟಪಟ್ಟು ತಲೆಗೆ ತುಂಬಿಕೊಂಡಿದ್ದಾನೆ. ಆ ಫಲವಾಗಿ ಪ್ರಭುತ್ವದ ಶೋಷಣೆಯ ವಿರುದ್ಧ ಸಂಘಟನೆ, ಹೋರಾಟ ಮಾಡುವಂತಹವನಾಗಿದ್ದಾನೆ.

ತೆರೆದ ಬಾಯಿಗೆ, ಅರಳೋ ಹೂವಿಗೆ
ನೀರೋ ಉಸಿರೋ?
ಎಳೆ ನೀರೋ ಗಿಣಿಮಾತೋ
ಅಗಸನ ಸೆಣೆತ ಸಿಳ್ಳೆಗೆ
ನೆರಳ ಪಕ್ಷಿಯು ಹಾರಿ
ಇರುಳ ಬೆಳಕನೇ ಚೆಲ್ಲಿ
ಚಂದ್ರನ ನುಂಗಿ ಮೈದುಂಬಿದ
ಕಪ್ಪು ಆಲದ ಮರವೇ
ನಿನ್ನ ಒಡಲ ಉಸಿರ ಗೂಡ ಕೆಡವು

ಧ್ವಂಸ ನರಪಕ್ಷಿಗಳ ಬಿಡು
ಹಾರಿಬಿಡು,
ಬಿಟ್ಟು ಬಿಡು.

ಇಲ್ಲಿ ಇಂದ್ರಿಯಗಳನ್ನು ಮೀರಿ ಪಡೆಯುವ ಆಧ್ಯಾತ್ಮದ ಅರಿವಿನ ಜಿಜ್ಞಾಸೆಯಿದೆ. ಇಲ್ಲಿ ವಿಷಯಾಸಕ್ತಿಗಳಿಂದ ಮುಕ್ತಿಯ ಕಡೆಗೆ ಪಯಣವಿದೆ. ಅಗಸನ ಕಾಯಕದ ಶ್ರಮದಲ್ಲಿಯೇ ಆಧ್ಯಾತ್ಮದ ಧ್ಯಾನವೊಂದನ್ನು ಕಾಣಲಾಗುತ್ತಿದೆ. ಕಾಯಕದ ಜ್ಞಾನ ಮತ್ತು ಇಂದಿನ ಶಿಕ್ಷಣದ ಜ್ಞಾನ ಎರಡನ್ನೂ ಸಮೀಕರಿಸಿರುವಂತೆ ತೋರುತ್ತದೆ. ಅಲ್ಲಮನ ಬೆಡಗಿನ ಪದಕೋಶವನ್ನು ಕವಿತೆ ಬಳಸಿಕೊಂಡಿದೆ. ಅದರಂತೆ ಕಾವ್ಯದ ಈ ಸಾಲುಗಳನ್ನು ಹೀಗೆ ವ್ಯಾಖ್ಯಾನಿಸಬಹುದಾಗಿದೆ.

ಭೋಗಾಪೇಕ್ಷೆಯಿಂದ ಇಂದ್ರಿಗಳೂ, ವಿಷಯಗಳೂ ತೆರೆದುಕೊಂಡಿರುವಾಗ, ಹಸಿದಿರುವಾಗ ಅಥವಾ ಅವು ಸುಖವನ್ನು ಅಪೇಕ್ಷಿಸುತ್ತಿರುವಾಗ ಅವುಗಳನ್ನು ತಣಿಸಲು ವಿಷಯರಸವನ್ನು ನೀಡಬೇಕೋ, ಪರಮಹಂಸ ಅಥವಾ ಶಿವಧ್ಯಾನವೆಂಬ ಆಧ್ಯಾತ್ಮದ ಮಾತನ್ನು ನೀಡಬೇಕೋ ಎಂಬ ಜಿಜ್ಞಾಸೆಯನ್ನು ನಡೆಸಲಾಗುತ್ತಿದೆ. ಅಜ್ಞಾನವೆಂಬ ಜೀವವು ಸುಜ್ಞಾನವನ್ನು ತನ್ನ ಮಾಯಾತಮಂಧದಿಂದ ಆವರಿಸಿದೆ. ಆ ಮಾಯಾ ತಮಂಧವನ್ನು ವಿಮುಕ್ತಗೊಳಿಸಿ ಆಧ್ಯಾತ್ಮದ ಕಡೆಗೆ ಸಾಗಬೇಕೆಂಬ ಆಶಯ ಇಲ್ಲಿ ವ್ಯಕ್ತವಾಗಿದೆ.

ಕವಿತೆಯ ಐದನೆಯ ಪಾದದಲ್ಲಿ ಕುಟುಂಬದ ವಿವರಗಳಿವೆ ಹಾಗು ನಾಯಕ ಮತ್ತು ಅವನ ಪರಿಸರದ ಕೆಲವು ವಿವರಗಳಿವೆ. ಸಂಸ್ಕೃತಿಯ ಉನ್ನತಿ-ಅವನತಿಗಳ ಹೆಜ್ಜೆಗುರುತುಗಳಿವೆ.

ಬೆಂಕಿ ಬಿರುಗಾಳಿ ಬಯಲನಂಟಿಗೆ
ಸುಖದ ಗೂಡನು ತೊರೆದು
ಹಾರದಿರಿ ಹಾರದಿರಿ, ಇಳಿದು ಬನ್ನಿ
ನಡುನೆತ್ತಿಯ ಜೀವ ಬಾಯಿಂದ
ನನ್ನೊಳಗೆ
ಅಂಗಾಲ ಕಣ್ಣ ಬಾಗಿಲ ತೆರೆದು
ಭೂಮಿಗೆ
ಈ ಭೂಮಿ ಮೇಲಿರುವ ಅರಗಿನ
ಸ್ವಂತ ಮನೆಯೊಳಗೆ

ಸಂಸಾರದ ಜಂಜಡಗಳಿಗೆ, ಕಷ್ಟ ನಷ್ಟಗಳಿಗೆ ಹೆದರಿ ಸಂಸಾರವನ್ನು ತೊರೆದು ಬಯಲಾಗುವತ್ತ, ಆಧ್ಯಾತ್ಮದತ್ತ ಸಾಗುವ ಮನಸ್ಸುಗಳಿಗೆ ಇಲ್ಲಿನ ನಾಯಕ ಜೀವ ಚೈತನ್ಯವನ್ನು ಅವರಲ್ಲಿ ಪುಟಿಸುತ್ತಾನೆ. ತನ್ನ ಜನಗಳಲ್ಲಿ ಅದಮ್ಯ ಆತ್ಮವಿಶ್ವಾಸವನ್ನು ತುಂಬುವ ಕೆಲಸದಲ್ಲಿ ನಾಯಕ ನಿರತನಾಗಿದ್ದಾನೆ. ನಡುನೆತ್ತಿಯ ಜೀವಬಾಯಿಂದ ಭೂಮಿಗೆ ಜೀವಜಲವನ್ನು ತರುವ ಪ್ರಯತ್ನದಲ್ಲಿದ್ದಾನೆ. ತನ್ನೆಲ್ಲಾ ಅಸಹಾಯಕತೆಯ ನಡುವೆಯೂ ನಾಯಕ ಕುಗ್ಗದೆ

ಕ್ರಿಯಾಶೀಲನಾಗಿದ್ದಾನೆ. ತನ್ನ ಪ್ರಯತ್ನ, ಕಾರ್ಯ, ಶ್ರಮದ ಮೂಲಕ ಸದಾ ಧ್ಯಾನದ ಸ್ಥಿತಿಯಲ್ಲಿದ್ದಾನೆ.

ಆರನೇ ಪಾದದಲ್ಲಿ ನಾಯಕನ ಸುತ್ತಲಿನ ಪರಿಸರದ ವಿವರಗಳು ಮುಂದುವರೆಯುವುದರೊಂದಿಗೆ ಸಮಾಜದ ಜನಗಳ ವಿಷಮುಖವನ್ನು ಪರಿಚಯಿಸುತ್ತಾರೆ. ಇಲ್ಲಿ ಕವಿತೆಯ ನಾಯಕ ಸಮಾಜದ ಜನಗಳ ಸ್ವಾರ್ಥ ಲಾಭಕೋರತನವನ್ನು ಕಾಣಲಾರದೆ ಪಲಾಯನ ಮಾಡುವ ಮನಸ್ಸು ಮಾಡುತ್ತಾನೆ. ಇದು ಅವನ ಸಾಹಸಯಾತ್ರೆಯ ಮುಂದುವರಿಕೆಯಾಗಿ ಕಾಣಿಸುತ್ತದೆ.

ಏಳನೇ ಪಾದದಲ್ಲಿ ನೋವು, ಹಸಿವು, ಬಡತನದ ಧ್ಯಾನವಿದೆ. ನಾಯಕನ ಸಂಸ್ಕೃತಿಯ ಚಿತ್ರಣದೊಂದಿಗೆ ಗಿಡಬಾಲೆಯ ಚಿತ್ರಣವನ್ನು ಕೊಡುತ್ತಾರೆ.

ಎಡಗೈಲಿ ಹೆಂಡ ತುಂಬಿದ ಗಡಿಗೆ
ಬಲಗೈಲಿ ಬಾಡಿನ ಮಡಕೆ ತೂಕ
ನೆತ್ತಿಗುಣೆ 'ಮುಳ್ಳಕ್ಕಿ' ಕೂಳಿಗೆ
ದಂಗೆ ಎದ್ದ ಕಾಗೆ ದಂಡು

ಹೆಂಡದ ಗಡಿಗೆ ಮತ್ತು ಬಾಡಿನ ಮಡಕೆಯ ಪ್ರತಿಮೆಗಳು ದಲಿತ ಜೀವನದ, ದಲಿತ ಸಂಸ್ಕೃತಿಯ ಭಾಗವೆಂದು ಭಾವಿಸಲಾಗಿದೆ. ಇಲ್ಲಿ ಅನ್ನಕ್ಕಾಗಿ ಹಸಿದು ಕಾತರಿಸುತ್ತಿರುವ ಜೀವಗಳಿವೆ.

ದೇವನೂರು ಮಹಾದೇವರವರ 'ಒಡಲಾಳ' ಕೃತಿಯು ಕಟ್ಟಿಕೊಡುವ ಹಸಿವಿನ ಚಿತ್ರಣದಷ್ಟೇ ಸಿದ್ದಯ್ಯನವರ ಈ ಕಾವ್ಯವೂ ಸಮರ್ಥವಾಗಿ ಹಸಿವಿನ ತೀವ್ರತೆಯನ್ನು ಕಟ್ಟಿಕೊಡುತ್ತದೆ. ದಲಿತಲೋಕದ ದುಸ್ತರದ ಬದುಕನ್ನು ಹಸಿವಿನ ಚಿತ್ರಣ ಮನಗಾಣಿಸುತ್ತದೆ.

ಅಂಚಿನ ಸಿಡಿಗಾಳ ಉಗುರಕಣ್ಣಲಿ
ಆಯ್ದು
ಸೆರಗು ತುದಿಯಲಿ ಗಂಟಿಕ್ಕಿ ತಂದು
ಗುಟ್ಟೆಕಲ್ಲ ಗೊಟರಲಿ
ಎರಡು ಕಾಲಸಂದಿಗೆ ತಲೆ ಇಕ್ಕಿ
ಕುಂತು
ಬಾಯ ಮುಕ್ಕುಳಿಸಿ ಕಾಸಿದ
ಅಂಬಲಿ,

ಒಂದೇ ಗುಟುಕು, ಒಂಬತ್ತು ಬಾಯಿಗಳು
ತೆರೆದೋ
ಯಾವ ಬಾಯಿಗೆ ಸೆರಗು
ಯಾರ ಬಾಯಿಗೆ ಅಂಬಲಿ?

ಕಾವ್ಯದಲ್ಲಿ ನಾಯಕನ ಅಜ್ಜಿ ಮುಟ್ಟಬಾರದ ಕೂಸುಗಳಿಗೆ ಸಿಡಿದ ಅಕ್ಕಿಕಾಳುಗಳನ್ನು ಆಯ್ದು-ತಂದು ಅಂಬಲಿ ಮಾಡಿ ಹಾಕುವುದು ಬಡತನದ ಹಸಿವಿನ ನೈಜ ದರ್ಶನವನ್ನು ಮಾಡಿಸುತ್ತದೆ. ಇಲ್ಲಿ ಅನ್ನಕ್ಕಾಗಿ ಕಾಯುತ್ತಿರುವ ತುಂಬಿದ ಕುಟುಂಬವೊಂದಿದೆ. ತಾನು ತಂದ ಸ್ವಲ್ಪ ಅಕ್ಕಿಯಲ್ಲಿ ಒಂಬತ್ತು ಜೀವಗಳ ಹಸಿವನ್ನು ತಣಿಸಬೇಕಾದ ಸಂದಿಗ್ಧತೆಯಿದೆ. ಇಲ್ಲಿ ಯಾವ ಬಾಯಿಗೆ ಸೆರಗು? ಯಾರ ಬಾಯಿಗೆ ಅಂಬಲಿ ಕೊಡಬೇಕೆನ್ನುವ ಜಿಜ್ಞಾಸೆಯಿದೆ. ಜೊತೆಗೆ ಇಲ್ಲಿ ಹಸಿವಿನ ನಡುವೆಯೂ ಧ್ಯಾನದ ಸ್ಥಿತಿಯೊಂದಿರುವುದನ್ನು ಕಾಣಬಹುದಾಗಿದೆ.

ಕವಿತೆಯ ಮುಂದಿನ ಪಾದದಲ್ಲಿ ಗಿಡಬಾಲೆಯು ಫಲವಂತಿಕೆ ಪಡೆದು ಹೊಸಹುಟ್ಟಿಗೆ ಕಾರಣಳಾಗಿದ್ದಾಳೆ. ನಾಯಕ ಜೀವ ಜಲವನ್ನು ತರುವ ಮೂಲಕ ಅಸಾಧ್ಯವನ್ನೂ ಸಾಧ್ಯಗೊಳಿಸಿದ್ದಾನೆ. ಹೊಸ ಕನಸುಗಳಿಗೆ, ಹೊಸ ಬಯಕೆಗಳಿಗೆ ಪ್ರಾಣಸೆಲೆಯೊಂದನ್ನು ತರಲಾಗಿದೆ.

ಕವಿತೆಯ ಕೊನೆಯಲ್ಲಿ ಅಲ್ಲಮನನ್ನು ನೆನೆಯಲಾಗಿದೆ. ಅವನ ತತ್ವ-ಚಿಂತನೆಯನ್ನು ವಚನದ ಬಳಕೆಯ ಮೂಲಕ ಕಾವ್ಯದಲ್ಲೂ ಹೇಳಲಾಗುತ್ತಿದೆ. ಯಾವುದನ್ನು ನಾವು ಸಾಕ್ಷಾತ್ಕಾರ ಅಥವಾ ಅತೀಂದ್ರಿಯ ಅನುಭವವನ್ನು 'ಅನುಭಾವ' ಎಂದು ಕರೆಯುತ್ತಿದ್ದೇವೆಯೋ ಅದನ್ನು ಅಲ್ಲಮ ಪಲ್ಲಟಿಸಿ ಹೊಸ ವ್ಯಾಖ್ಯಾನವೊಂದನ್ನು ಕೊಡುತ್ತಾನೆ. ಜೀವ ಮತ್ತು ಶಿವ ಎರಡೂ ಐಕ್ಯಗೊಂಡ ಸಂಬಂಧವೇ ಅನುಭಾವ ಎನ್ನುತ್ತಾನೆ. ಈ ಅನುಭಾವವನ್ನು ಸಾಧಕರು, ಆತ್ಮದ ಬಗೆಗೆ ಚಿಂತಿಸಿದ ಚಿಂತಕರು ಆಧ್ಯಾತ್ಮದ ಮೂಲದ ನಿಜವನ್ನು ಅರಿಯದೆ ಹೋಗಿದ್ದಾರೆ ಎಂಬ ಆಶಯ ವಚನದಲ್ಲಿ ವ್ಯಕ್ತವಾಗುತ್ತದೆ.

ಅನುಭಾವ ಅನುಭಾವವೆಂಬಣ್ಣಗಳು ನೀವು ಕೇಳಿರೇ!
ಅನುಭಾವವೆಂಬುದೊಂದೆತ್ತು ಕೆಟ್ಟಿತ್ತು!
ಎತ್ತು ಗೇಣುದ್ದ; ಕೊಂಬು ಮೊಳದುದ್ದ
ಕೆಟ್ಟೆಂಟು ದಿನ; ಕಂಡು ಹದಿನಾಲು ದಿನ!
ನಿನ್ನೆ ಮೆಟ್ಟಿದ ನಾಟಿಯ ಮೊನ್ನೆ ಮೇವುದ ಕಂಡೆ
ಗುಹೇಶ್ವರ, ಆಳಿಸುವ ಬಾಲೈ ಕಡೆಯ ಹೊಲಕೆ.(696)

ಆಧ್ಯಾತ್ಮಿಕ ಚಿಂತಕರು ಆಧ್ಯಾತ್ಮದ ಮೂಲದ ನಿಜವನ್ನು ಅರಿಯದೆ ಹೋಗಿರುವುದು ಕೆ.ಬಿ.ಸಿದ್ದಯ್ಯನವರ ಕಾವ್ಯ ಸೃಷ್ಟಿಗೆ ಕಾರಣವಾಗುತ್ತದೆ ಹಾಗು ಇದು ಅವರ ಕಾವ್ಯಗಳಲ್ಲಿನ ಮೂಲ ಅಥವಾ ಕೇಂದ್ರ ಆಶಯವಾಗಿದೆ. ಅವರು ಪ್ರತಿಯೊಂದು ಕಾಯಕದಲ್ಲಿಯೂ ಆಧ್ಯಾತ್ಮವನ್ನು ಹುಡುಕುವ, ಕಾಣುವ ಪ್ರವೃತ್ತಿಯವರಾಗಿದ್ದಾರೆ. ಆದ್ದರಿಂದಲೇ ಅವರ ಕಾವ್ಯಗಳಲ್ಲಿ ಆಧ್ಯಾತ್ಮದ ಬಗೆಗೆ ಹೊಸ ಜಿಜ್ಞಾಸೆಯ ಧ್ಯಾನವನ್ನು ಕಾಣಬಹುದಾಗಿದೆ. ಈ ಆಧ್ಯಾತ್ಮಿಕ ಶೋಧವನ್ನು ದಲಿತ ಸಂವೇದನೆ, ದಲಿತ ಸಂಸ್ಕೃತಿಯ ಒಡಲಿನಿಂದಲೇ ಹೆಕ್ಕಿ ತೆಗೆದಿರುವುದರಿಂದ ಅರ್ಥಪೂರ್ಣ ಹಾಗು ವಿಶಿಷ್ಟ ಅಭಿವ್ಯಕ್ತಿಯಾಗಿದೆ. ಈ ಎಲ್ಲಾ ಅಂಶಗಳು ಕೆ.ಬಿ.ಸಿದ್ದಯ್ಯನವರ ಕಾವ್ಯ ಶ್ರೇಷ್ಠತೆಗೆ ಪ್ರಮುಖ ಕಾರಣವಾಗಿವೆ.

4(ಬಿ) ದಕ್ಲಕಥಾ ದೇವಿಕಾವ್ಯ ಮತ್ತು ಗಲ್ಲೆಬಾನಿಗಳಲ್ಲಿ ಅಲ್ಲಮ, ಲವಣದಂತೆ ಕರಗಿರುವ ಪರಿ

ಕೆ.ಬಿ.ಸಿದ್ದಯ್ಯನವರ ಕಾವ್ಯಗಳಲ್ಲಿ ದಕ್ಲಕಥಾ ದೇವಿಕಾವ್ಯ, ಗಲ್ಲೆಬಾನಿ ಖಂಡಕಾವ್ಯಗಳು ಆಧುನಿಕ ಕನ್ನಡ ಕಾವ್ಯ ಜಗತ್ತಿನಲ್ಲಿ ತಮ್ಮ ವಿಶಿಷ್ಟತೆಯಿಂದಾಗಿಯೇ ಸ್ಥಾನವನ್ನು ಪಡೆದಿವೆ. ಭಾಷೆಯ ಬಳಕೆಯಲ್ಲಿ, ನಿರೂಪಣಾ ವಿಧಾನದಲ್ಲಿ ಜೀವನ ವಿವರಗಳನ್ನು ಇವರು ಜೀವಂತವಾಗಿ ಕಟ್ಟಿಕೊಡುತ್ತಾರೆ. ಆದ್ದರಿಂದ ಒಂದು ಜನಾಂಗದ ನೈಜ ಸಂಸ್ಕೃತಿಯ ಅನಾವರಣ ಈ ಕೃತಿಗಳಲ್ಲಾಗಿದೆ.

'ದಕ್ಲಕಥಾ ದೇವಿಕಾವ್ಯ' ದಕ್ಲ ಸಮುದಾಯದ ಜೀವನವನ್ನು ಕುರಿತದ್ದಾದ ಕಾವ್ಯವಾಗಿದೆ. ಈ ದಕ್ಲ ಜನಾಂಗ ಮಾದಿಗರ ಸಾಕು ಮಕ್ಕಳು ಎಂದು ನಂಬಲಾಗಿದೆ. ಈ ಜನಾಂಗದವರು ವರುಷಕ್ಕೊಮ್ಮೆ ತಮ್ಮ ಮೂಲದ ಹಿರಿಯರಾದ ಮಾದಿಗರ ಮನೆಗಳಿರುವ ಊರುಗಳಾಚೆ ತಮ್ಮ ಕುಟುಂಬ ಸಮೇತರಾಗಿ ಬಂದು ವರ್ಷಕ್ಕೊಮ್ಮೆ ನೆಲೆಯೂರುತ್ತಾರೆ. ಆಗ ಮಾದಿಗರ ಮನೆಗಳವರು ತಮ್ಮ ಸಾಕು ಮಕ್ಕಳಾದ ಈ ಜನಗಳಿಗೆ ಅನ್ನ ಮತ್ತು ಬಟ್ಟೆಗಳನ್ನು ನೀಡುವ ಪದ್ಧತಿ ಹಿಂದಿನಿಂದಲೂ ಆಚರಣೆಯಲ್ಲಿದೆ. ಇಂಥ ದಕ್ಲ ಜನಾಂಗದ ಆಚರಣೆಗಳನ್ನು ಜೀವನ ವಿವರಗಳನ್ನು ಕಾವ್ಯದಲ್ಲಿ ಕಾಣಬಹುದಾಗಿದೆ. ಇಲ್ಲಿ ಕವಿ ತನ್ನ ಜನಾಂಗದ ಕಷ್ಟಸುಖಗಳನ್ನು, ನೋವು-ನಲಿವುಗಳನ್ನು, ದಬ್ಬಾಳಿಕೆ, ಶೋಷಣೆ, ಅಸಹನೆಗಳನ್ನು, ಆಕ್ರೋಶ, ಆವೇಶಭರಿತವಾಗಿ ಮಂಡಿಸದೆ ಸಹನೆಯಿಂದಲೇ ಮಂಡಿಸುತ್ತಾರೆ. ಒಂದು ರೀತಿಯ ಆಧ್ಯಾತ್ಮಿಕ ಧ್ಯಾನದ ಚಿಂತನೆಯನ್ನು ಇಟ್ಟುಕೊಂಡೇ ಸಮುದಾಯದ ಜೀವ ಕಾಳಜಿಯ ಪರ ತುಡಿಯುವುದನ್ನು ಇಡೀ ಕಾವ್ಯದಲ್ಲಿ ಕಾಣಬಹುದಾಗಿದೆ. ವಚನ ಚಳುವಳಿಯ ತಾತ್ವಿಕ ಚಿಂತನೆಗಳನ್ನು ಬೇರು ಮಟ್ಟದಲ್ಲಿ ಗ್ರಹಿಸಿರುವುದರಿಂದ ಅವುಗಳೊಂದಿಗಿನ ಸಂವಾದ ರೂಪವಾಗಿ ಈ ಕಾವ್ಯವನ್ನು ಹೇಳುತ್ತಿದ್ದಾರೆ

ಎಂದು ಅನಿಸುತ್ತದೆ. ವಚನ ಚಳುವಳಿಯ ಶಿವಶರಣರು, ಅವರ ತತ್ವಗಳು ಕಾವ್ಯದಲ್ಲಿ ಪ್ರಶ್ನೆಗೆ, ನಿರಾಕರಣೆಗೆ ಕೂಡ ಒಳಗಾಗಿರುವುದನ್ನು ಕಾಣಬಹುದಾಗಿದೆ. ಹಸಿವಿಗಾಗಿ ಪರಿತಪಿಸುವ ದಕ್ಲರ ಜೀವನದ ದಯಾನೀಯ ಸ್ಥಿತಿ, ಉನ್ನತವರ್ಗದ ಮಂದಿ ದಲಿತರನ್ನು, ದಕ್ಲರನ್ನು ಸಮಾಜದಲ್ಲಿ ಅಸ್ಪೃಶ್ಯರೆಂದು ಪರಿಗಣಿಸಿ ಅವರನ್ನು ಮುಟ್ಟಬಾರದ ಸ್ಥಿತಿಯಲ್ಲಿ ನಿಲ್ಲಿಸಿದ ಶೋಷಣೆಯ ಸಂಗತಿಗಳು ಕಾವ್ಯದಲ್ಲಿ ಮಿಳಿತವಾಗಿರುವುದನ್ನು ಕಾಣಬಹುದಾಗಿದೆ.

ಈ ಕಾವ್ಯಗಳಲ್ಲಿ ಅಲ್ಲಮಪ್ರಭು ಮತ್ತು ಅವನ ಚಿಂತನೆಗಳೊಂದಿಗೆ ಮುಖಾಮುಖಿ ಹಾಗೂ ಸಂವಾದವನ್ನು ಸಿದ್ದಯ್ಯನವರು ಸಾಧಿಸಿದ್ದಾರೆ. ಆ ಮೂಲಕ ವಚನ ಚಳುವಳಿ ಅದರಲ್ಲೂ ಅಲ್ಲಮನ ಪ್ರಭಾವಕ್ಕೆ ಒಳಗಾಗಿದ್ದಾರೆ. ಅವರೇ ಹೇಳಿಕೊಂಡಂತೆ "ಬೆನ್ನ ಹಿಂದೆ ಅಂಬೇಡ್ಕರ್ ಕೂಗಿದ ಕೂಗು, ಒಂದು ಅಂಗೈಯಲ್ಲಿ ಗಾಂಧೀಜಿ, ಇನ್ನೊಂದು ಅಂಗೈಯಲ್ಲಿ ಬುದ್ಧ, ಎದುರಿಗೆ ಅಲ್ಲಮಪ್ರಭು ಈ ನಾಲ್ಕು ಮಹಾಜ್ಯೋತಿಗಳ ನಡುವೆ ಹಣತೆ ಧ್ಯಾನಿಸುತ್ತದೆ."[4] ಇದು ಅವರ ಕಾವ್ಯದ ಅಂತಃಸತ್ವ ಗುಣವೂ ಕೂಡ ಆಗಿದೆ. ಎದುರಿಗೆ ಅಲ್ಲಮಪ್ರಭುವನ್ನು ನಿಲ್ಲಿಸಿಕೊಂಡೇ ಸಿದ್ದಯ್ಯನವರು ತಮ್ಮ ಕಾವ್ಯಗಳನ್ನು ಕಟ್ಟಿದ್ದಾರೆ. ಆ ಮೂಲಕ ಸಿದ್ದಯ್ಯನವರು ಅಲ್ಲಮನನ್ನು ಅನುಸಂಧಾನಿಸಿದ್ದಾರೆ. ದಕ್ಲಕಥಾ ದೇವಿಕಾವ್ಯದ ಕೆಲವು ಸಾಲುಗಳನ್ನು ಅಲ್ಲಮನ ಅನುಸಂಧಾನದ ದೃಷ್ಟಿಯಿಂದ ಪರಿಶೀಲಿಸೋಣ. ಕವಿ ಮೊದಲಿಗೆ ಏಳು ಮಂದೆಮ್ಮಗಳ ಹೆಸರುಗಳನ್ನು ಪರಿಚಯಿಸುವುದರೊಂದಿಗೆ ಕಾವ್ಯವನ್ನು ಆರಂಭಿಸುತ್ತಾರೆ.

ಹಗಲು ಇರುಳೆಂಬೊ ಮಾಯ, ಇರುಳು ಹಗಲೆಂಬೊ ಮಾಯ
ಮಾಯ ಮಾಯವನೆ ಗೆದ್ದು
ದೊಡ್ಡ ದೊಡ್ಡೋರ ಮನೆಯೊಳಗೆ
ನುಗ್ಗಿ ನುಗ್ಗಿ ಹೋದವಳೆ (ದಕ್ಲಕಥಾ ದೇವಿಕಾವ್ಯ ಪುಟ 2)

ಇಲ್ಲಿ ಸಿದ್ದಯ್ಯನವರು ಹಗಲು–ಇರುಳಿನ ಬಗ್ಗೆ ಹೇಳುತ್ತಾ ಮಾಯೆಯ ಪ್ರಸ್ತಾಪವನ್ನು ಮಾಡುತ್ತಾರೆ. ಅಲ್ಲಮನೂ ಕೂಡ ಹಗಲು–ಇರುಳು, ಮಾಯೆಯನ್ನು ಕುರಿತು ತನ್ನ ಅನೇಕ ವಚನಗಳಲ್ಲಿ ಜಿಜ್ಞಾಸೆಯನ್ನು ನಡೆಸಿದವನಾಗಿದ್ದಾನೆ.

ಇರುಳಿನ ಮುಖ ಹಗಲೆಂದಜಿಯರು
ಹಗಲಿನ ಮುಖ ಇರುಳೆಂದಜಿಯರು(218)

ಎನ್ನುವ ಅಲ್ಲಮ ತನ್ನ ಇನ್ನೊಂದು ವಚನದಲ್ಲಿ

ಹಗಲನಿರುಳ ಮಾಡಿ, ಇರುಳ ಹಗಲ ಮಾಡಿ;
ಆಚಾರವ ಅನಾಚಾರವ ಮಾಡಿ, ಅನಾಚಾರವ ಆಚಾರವ ಮಾಡಿ;(472)

ಎಂದು ಹೇಳುತ್ತಾನೆ. ಇಲ್ಲಿನ ವಚನಗಳ ವಾಕ್ಯಗಳಲ್ಲಿನ ಶೈಲಿಯನ್ನೇ ಕಾವ್ಯದ ಮೇಲಿನ ಸಾಲುಗಳಲ್ಲಿ ಸಿದ್ದಯ್ಯನವರು ಅನುಸರಿಸಿದ್ದಾರೆ.

ಸಿದ್ದಯ್ಯನವರು ತಮ್ಮ ಈ ಕಾವ್ಯದಲ್ಲಿ ಮುಂದುವರೆಯುತ್ತಾ,

ಜಂಗಮರ ಕಣ್ಣಲ್ಲಿ ಜಲಹಿಂಗಿ ದೇವ ದೇವಿಯರು ಮೌನ
ಜಗವ ತೂಗುವ ದೇವಿ, ಮಗುವ ತೂಗುವ ದೇವಿ
ನಿನ್ನ ಗರ್ಭದಲ್ಲಿ ನನ್ನ ಮರಳಿ ಕರೆದು ಧರಿಸು
ಕಂದನ ಕೈಹಿಡಿದು ಯೋನಿಗುಹೆಯಿಂದ ಧ್ಯಾನಿಗುಹೆಗೆ
ನಡೆಸು.(ದಕ್ಲಕಥಾ ದೇವಿಕಾವ್ಯ, ಮಟ 3)

ಎಂದು ಹೇಳುತ್ತಾರೆ. ದಲಿತರು ಮತ್ತು ದಕ್ಲರನ್ನು ಮುಟ್ಟಬಾರದ, ಅಸ್ಪೃಶ್ಯ ಸ್ಥಿತಿಯಲ್ಲಿ ದೂರ ಇಡಲಾಗಿದೆ. ಹನ್ನೆರಡನೇ ಶತಮಾನದ ವಚನಚಳುವಳಿಯ, ಶಿವಶರಣರ ಜಂಗಮರ ಆಶಯವಾದ ಸಮಾನತೆ, ಮಾನವೀಯ ಮೌಲ್ಯಗಳು ಇಂದಿನ ವರ್ತಮಾನದಲ್ಲಿ ಇಲ್ಲವಾಗಿದೆ. ಹಾಗಾಗಿ ಇಂದು ಜಂಗಮರ ಕಣ್ಣಲ್ಲಿ ಜಲ ಹಿಂಗಿದೆ. ದೇವ ದೇವಿಯರು ಹಿಂದಿನ ಆ ದಿವ್ಯ ಮೌನ ವಹಿಸುವ ಮೂಲಕ ಅಸಹಾಯಕ ಸ್ಥಿತಿಯಲ್ಲಿದ್ದಾರೆ. ಆದ್ದರಿಂದ ದೇವಿ ಈ ಕಂದನನ್ನು ಕೈ ಹಿಡಿದು ಮುಟ್ಟಿ ಮರಳಿ ಹಿಂದಿನ ಆ ವಚನ ಚಳುವಳಿಯಲ್ಲಿದ್ದ ಮುಟ್ಟುವ ಸಮಾಜಕ್ಕೆ, ಸಮಾನತೆಯನ್ನು ಸಾಧಿಸಲು ಕ್ರಾಂತಿ ಎಸಗಿದ್ದ ಸಮಾಜಕ್ಕೆ ಕರೆದೊಯ್ಯು ಎಂದು ಕವಿ ಬೇಡಿಕೊಳ್ಳುತ್ತಿದ್ದಾರೆ. ಇಲ್ಲಿ ಯೋನಿ ಗುಹೆಯಿಂದ ಧ್ಯಾನಿಗುಹೆಗೆ ನಡೆಸು ಎಂದು ಹೇಳುತ್ತಾರೆ. ಇಲ್ಲಿನ ನಡೆ ಬರೀ ನಡಿಗೆಯಾಗಿಲ್ಲ ಅದೊಂದು ಮಹಾ ಪ್ರಯಾಣವಾಗಿದೆ. ಇದೊಂದು ಅಲ್ಲಮನ ಚಿಂತನೆಯ ಸ್ಥಿತಿಯೇ ಆಗಿದೆ. ಯೋನಿಗುಹೆಯಿಂದ ಧ್ಯಾನಿ ಗುಹೆಯವರೆಗಿನ ನಡೆಯನ್ನು ಆಧ್ಯಾತ್ಮಿಕ ಪ್ರಯಾಣ, ಆಧ್ಯಾತ್ಮಿಕ ನಡೆ ಎಂದೇ ಅಲ್ಲಮ ಭಾವಿಸುತ್ತಾನೆ. ಆದರೆ ಅಲ್ಲಮ ಈ ಆಧ್ಯಾತ್ಮಿಕ ನಡೆಯಲ್ಲಿ ಎದುರಾಗುವ ಕಷ್ಟದ ಸ್ಥಿತಿಯನ್ನೂ ಅರಿತವನಾಗಿದ್ದಾನೆ. ಆದ್ದರಿಂದಲೇ ತನ್ನ ಇನ್ನೊಂದು ವಚನದಲ್ಲಿ 'ಹೃದಯ ಕಮಲ ಕರ್ಣಿಕೆಯಲ್ಲಿ ಸಿಲುಕಿದೆನೆಂಬುದು ಯೋಗವಲ್ಲ'(998) ಎಂದು ಈ ಮಾರ್ಗದ ಆಧ್ಯಾತ್ಮಿಕ ಗೋಜಲನ್ನು ಕುರಿತು ಹೇಳುತ್ತಾನೆ.[5]

ಬಂದ ಬಟ್ಟೆಯ ನಿಂದು ನೋಡದೆ
ಬಂದ ಬಟ್ಟೆಯ ಕಂಡು ಸುಖಿಯಾದೆ(83)

ಎಂದು ಮತ್ತೊಂದು ವಚನದಲ್ಲಿ ಹೇಳುತ್ತಾನೆ. ಇಲ್ಲಿ ಅಲ್ಲಮ ಯೋನಿದ್ವಾರವನ್ನು ತಿರುಗಿ ನೋಡದೆ ತಾನು ಶಿವತತ್ವದ್ವಾರದಿಂದ ಬಂದೆ ಎಂದು ತಿಳಿಯಬೇಕೆಂದು ಈ ಮಾರ್ಗಗಳನ್ನು ಕುರಿತು ಹೇಳುತ್ತಾನೆ.

ಪ್ರಭಾವ್ಯೂಹ ಕಾಲಾತೀತದೊಳಗೆ
ಹುಲಿ, ಹುಲ್ಲೆಯೊಳಗೆ ಮರಿಮಾಡಿ ಆಡೊ
ಉಸಿರೆ. . . . . . ಉಸಿರೆಂಬೊ. . . . . . .
ಅಕ್ಷರ ಭ್ರಾಂತು, ಸೂತಕ ಜ್ಞಾನ ಭಂಡಾರವ
ಮುಟ್ಟಿ, ತಟ್ಟಿ, ಕಂಗೆಡಿಸಿದ ಕೆಂಧೂಳು(ಮಟ3)

ಎಂದು ಹುಲಿ-ಹುಲ್ಲೆಯೆಂಬ ಅಲ್ಲಮನು ಬಳಸಿರುವ ಪದಗಳನ್ನು ಕಾವ್ಯದಲ್ಲಿ ಬಳಸುತ್ತಾರೆ. 'ಹುಲಿಯ ಬೆನ್ನಿನಲ್ಲಿ ಒಂದು ಹುಲ್ಲೆ ಹೋಗಿ, ಮೇದು ಬಂದೆನೆಂದರೆ ಇದ ಕಂಡು ಬೆರಗಾದೆ!' (27) ಎಂದು ತನ್ನ ವಚನದಲ್ಲಿ ಅಲ್ಲಮ ಹೇಳುತ್ತಾನೆ. ಮತ್ತೊಂದು ವಚನದಲ್ಲಿ-

'ಹುಲಿಯ ತಲೆಯ ಹುಲ್ಲೆ, ಹುಲ್ಲೆಯ ತಲೆಯ ಹುಲಿ;
ಈ ಎರಡಱ ನಡು ಒಂದಾಯಿತ್ತು! ಹುಲಿಯಲ್ಲ ಹುಲ್ಲೆಯಲ್ಲ!
ಕೆಲದಲೊಂದು ಬಂದು ಮೆಲುಕಾಡಿತ್ತು ನೋಡಾ.'(39)

ಎಂದು ಹುಲಿ-ಹುಲ್ಲೆಯ ಕುರಿತು ಮಾತನಾಡಿದ್ದಾನೆ. ಈ ಮೇಲಿನ ವಚನದಲ್ಲಿ ಹುಲಿಯನ್ನು ಕಾಲದ ಸಂಕೇತವಾಗಿ ಹುಲ್ಲೆಯನ್ನು ಜೀವದ ಸಂಕೇತವಾಗಿ ಬಳಸಿ ಹೇಳಿದ್ದಾನೆ. ಇಲ್ಲಿ ಸಿದ್ದಯ್ಯನವರೂ ಕಾಲವನ್ನು ಅತೀತಗೊಳಿಸಿ ಜೀವವೊಂದು ಜ್ಞಾನವನ್ನು ಪಡೆಯುವ ಸಂಧರ್ಭವನ್ನು ಕುರಿತು ಮಾತನಾಡಿದ್ದಾರೆ. ಅಲ್ಲಮ ಅಕ್ಷರ ಕಲಿತು ಅಹಂಕಾರದಿಂದ ಬೀಗುವವರನ್ನು, ಭ್ರಾಂತಿನ ಲೋಕದಲ್ಲಿ ವಿಹರಿಸುವವರನ್ನು ಲೇವಡಿ ಮಾಡಿದ್ದಾನೆ. ಮನುಷ್ಯ ಒಬ್ಬ ವಿದ್ವತ್ತಿನ ಅಹಂಕಾರಿ, ಆ ಅಹಂಕಾರವನ್ನು ಬಿಡಬೇಕು ಮುಕ್ತಿಯನ್ನು ಪಡೆಯಲು ಪ್ರಯತ್ನಿಸಬೇಕು, ಬಯಲಾಗಬೇಕು ಎಂದು ಹೇಳುತ್ತಾನೆ. ಅದೂ ತನ್ನ ಶೈವ ಹಿರಿಯರನ್ನು, ಪಂಡಿತರನ್ನು ವ್ಯಂಗ್ಯವಾಗಿ, ವಿಡಂಬನೆಯಿಂದ ಕಾಣುತ್ತಾನೆ. 'ಅಕ್ಷರವ ಬಲ್ಲೆವೆಂದು ಅಹಂಕಾರವೆಡೆಗೊಂಡು ಲೆಕ್ಕಗೊಳ್ಳರಯ್ಯ, ಗುರುಹಿರಿಯರು ತೋಱಿದ ಉಪದೇಶದಿಂದ ವಾಗದ್ವೈತವ ಕಲಿತು ವಾದಿಪರಲ್ಲದೆ, ಆಗುಹೋಗೆಂಬುದನಱಿಯರು'(69) ಎಂದು ಹೇಳುತ್ತಾನೆ.

ಜ್ಞಾತೃವೇ ಅಱುಹಿಸುವುದು, ಜ್ಞಾನವೇ ಅಱಿವುದು,
ಜ್ಞೇಯವೇ ನಿಶ್ಚಯಿಸುವುದು
ಈ ಜ್ಞಾತೃ ಜ್ಞಾನ ಜ್ಞೇಯವೆಂಬ ತ್ರಿವಿಧಸಾಧನದಿಂದ
ಲಿಂಗವನಱಿಸಿ ಲಿಂಗವನಱಿದು ಲಿಂಗವ ಬೆಱಿಸಿ ಲಿಂಗವಾದ ಮತ್ತೆ,
ಜ್ಞಾತೃ ಜ್ಞಾನ ಜ್ಞೇಯುವೆಂಬ ತ್ರಿವಿಧಭ್ರಾಂತಿಸೂತಕ ಹೋಯಿತ್ತು,
ನಿಜವಾಯಿತ್ತು ಕಾಣಾ, ಗೊಹೇಶ್ವರ.(780)

ಈ ವಚನದಲ್ಲಿ ಅಲ್ಲಮ ಜ್ಞಾನ ಸೂತಕದ ಬಗ್ಗೆ ಮಾತನಾಡಿದ್ದಾನೆ. ಸಿದ್ದಯ್ಯನವರು ತಮ್ಮ ಈ ಕಾವ್ಯದಲ್ಲಿ ಇದನ್ನೆ ಅಕ್ಷರಭ್ರಾಂತು, ಸೂತಕಜ್ಞಾನವೆಂದು ಕರೆದಿರುವುದು. ಕವಿ ಇಲ್ಲಿ ತನ್ನ ಸಮುದಾಯವನ್ನು ಅಕ್ಷರದಿಂದ ದೂರವಿರಿಸಿದ್ದರ ಬಗ್ಗೆ ಹಾಗು ಜ್ಞಾನವೆಂಬುದನ್ನು

ಮುಟ್ಟಲಾರದ ಸೂತಕದ ಸ್ಥಿತಿಯಲ್ಲಿ ಇಡಲಾಗಿದ್ದ ಸಮಾಜವನ್ನು ಮುಟ್ಟಿ, ಸೂತಕವೆಂಬುದನ್ನು ಕಳೆದು ಜ್ಞಾನದ ಪಡೆದದ್ದರ ಬಗ್ಗೆ ಮಾತನಾಡುತ್ತಾರೆ.

ಸಿದ್ದಯ್ಯನವರು ಈ 'ದಕ್ಲಕಥಾ ದೇವಿಕಾವ್ಯ'ದಲ್ಲಿ ಮುಂದುವರೆದು

ಮುಟ್ಟಬಾರದ ಜಲವು ಜಲಪ್ರಳಯವಲ್ಲ
ಹೆಪ್ಪುಮುನಿ ಎಂಬುವನು ಹೆಪ್ಪಾಗಿ ಹಿಡಿಯುವನು
ಕಂಡರಿಯದ ನಿಲುವು ಭೂ ಪ್ರಳಯವಲ್ಲ
ಪ್ರಳಯಕ್ಕೆ ಪ್ರಳಯ ಜ್ಯೋತಿಗೆ ಜ್ಯೋತಿ ಅಸ್ಪೃಶ್ಯ
ಅಗ್ನಿ ಪ್ರಳಯವಲ್ಲ
ಸೂರ್ಯದೇವನು ಉರಿದು ಕರುಕಾಗಿ ಉದುರುವನು
ಕಗ್ಗತ್ತಲು ಕವಿಯುವುದು
ಅಂತರಂಗ ಬಹಿರಂಗದಲಿ (ಪುಟ 5)

ಇಲ್ಲಿ ಸಿದ್ದಯ್ಯನವರು ಭೂಸೃಷ್ಟಿಯ ಕಾರಣಕರ್ತನಾದ ಬಕಾಲ ಮುನಿಯನ್ನು ಕುರಿತು ಧ್ಯಾನಿಸುತ್ತಾರೆ. ಜಲವನ್ನೆಲ್ಲ ಹೆಪ್ಪುಗಟ್ಟಿಸಿ ಭೂಮಿಯನ್ನಾಗಿ ಪರಿವರ್ತಿಸಿದ ಹೆಪ್ಪುಮುನಿಯನ್ನು ಕುರಿತು ಹೇಳುತ್ತಾರೆ. ಸೃಷ್ಟಿಯ ಬಗ್ಗೆ ಮಾತನಾಡುವಾಗ ಪ್ರಳಯವನ್ನು ಕುರಿತು ಮಾತನಾಡುತ್ತಾರೆ. ಅಲ್ಲಮನು ಪ್ರಳಯದ ವಿಷಯವಾಗಿ ಹೆಚ್ಚು ಮಾತನಾಡಿದ್ದಾನೆ.

ಕೆಂಡದ ಮಳೆ ಕಱೆವಲ್ಲಿ ಉದಕವಾಗಿರಬೇಕು
ಜಲಪ್ರಳಯವಾದಲ್ಲಿ ವಾಯುವಿನಂತಿರಬೇಕು
ಮಹಾಪ್ರಳಯವಾದಲ್ಲಿ ಆಕಾಶದಂತಿರಬೇಕು
ಜಗತ್ಪ್ರಳಯವಾದಲ್ಲಿ ತನ್ನ ತಾ ಬಿಡಬೇಕು
ಗುಹೇಶ್ವರ ಲಿಂಗ ತಾನಾಗಿರಬೇಕು. (556)

ಎಂದು ಪ್ರಳಯವನ್ನು ಕುರಿತು ಅಭಿಪ್ರಾಯಪಡುತ್ತಾನೆ. ಮತ್ತೊಂದು ವಚನದಲ್ಲಿ ತನ್ನನ್ನು ಅರಿತರೆ ಅದೇ ಪ್ರಳಯ, ಅದೇ ನಂತರದ ಹೊಸ ಸೃಷ್ಟಿಗೆ ಕಾರಣವಾಗುತ್ತದೆ ಎನ್ನುವುದನ್ನು 'ತನ್ನ ಸ್ಥಿತಿಯ ತಾನಱಿದಡೆ ಅದೇ ಪ್ರಳಯವಲ್ಲಾ!'(655) ಎಂದು ಹೇಳುತ್ತಾನೆ. ಅಲ್ಲಮನಿಗೆ ಅರಿವೇ ಸೃಷ್ಟಿ, ಅಜ್ಞಾನವೇ ವಿನಾಶವಾಗಿದೆ.

ಸಿದ್ದಯ್ಯನವರು ಈ ಕಾವ್ಯದಲ್ಲಿ ಜ್ಯೋತಿಯನ್ನು ಜ್ಞಾನದ ಸಂಕೇತವಾಗಿ ಬಳಸುತ್ತಾ ತನ್ನ ಸಮುದಾಯದವರಿಗೆ ಅಸ್ಪೃಶ್ಯರನ್ನಾಗಿಸಿ ಜ್ಯೋತಿಯನ್ನು ಕಾಣದ ಹಾಗೆ ಮಾಡಲಾಗಿದ್ದ ಸಂದರ್ಭವನ್ನು ಹೇಳುತ್ತಾನೆ. ಪ್ರಳಯವಾಗುವುದೇ ಹೊಸ ಸೃಷ್ಟಿಗೆ ಆದಿ ಎಂದು ಅಲ್ಲಮ ಭಾವಿಸಿದ್ದಾರೆ. ಆದರೆ ಇಲ್ಲಿ ದಕ್ಲರನ್ನು ಅಸ್ಪೃಶ್ಯರನ್ನಾಗಿಸಿದ್ದು ಅವರಿಗೆ ಜ್ಞಾನ ವಂಚಿತರನ್ನಾಗಿಸಿ ಪ್ರಳಯ ಅಂದರೆ ಹೊಸ ಸೃಷ್ಟಿ, ಬದಲಾವಣೆಯಿಂದ ದೂರವಿಡಲಾಗಿತ್ತು. ಅದನ್ನೇ ಇಲ್ಲಿ ಜಲಪ್ರಳಯವಲ್ಲ, ಭೂ ಪ್ರಳಯವಲ್ಲ, ಅಗ್ನಿ ಪ್ರಳಯವಲ್ಲ ಎಂದಿರುವುದು. ಇಲ್ಲಿ ಹಳೆಯ ಸ್ಥಗಿತದ

ಸ್ಥಿತಿ ಮುಂದುವರೆದಿದೆ, ಬದಲಾವಣೆ ಇನ್ನೂ ಕಂಡಿಲ್ಲ. ಆದ್ದರಿಂದಲೇ ಅಂತರಂಗ-ಬಹಿರಂಗದಲಿ ಕಗ್ಗತ್ತಲು ಆವರಿಸಿದೆ ಎಂದು ಕವಿ ಹೇಳುತ್ತಿದ್ದಾರೆ.

ಚಂದ್ರನು ಚಪ್ಪಟೆಯಾಗಿ ಆಯತದೊಳಗೆ ಆಯತದಂತೆ
ಕಣ್ಣೀರು ಸುರಿಸುವನು
ನಕ್ಷತ್ರ ಪುಷ್ಪಗಳು ಮರಳುಗಲ್ಲಾಗಿ ಜಾರುವುವು
ಸೊಂಟದಿಂದ ಶಿಶು ಜಾರಿದಂತೆ
ಗರ್ಭದಲ್ಲಿ ಶಿಶುಗಳು ಸತ್ತು ಏಳು ದಿನದ
ಬಾಣ್ತೆಯರು ರತಿಸುಖ ಬೇಡಿ ಪೀಡಿಸುವರು,
ಕಾಡು ಪ್ರಯಾಣಿಸುವುದು ಊರೊಳಗೆ
ಕಾಡು ಪ್ರಾಣಿಗಳು ಮನುಷ್ಯರ ಬೇಟೆಯಾಡುವುವು
ಹೆಂಗಸರು ಮಕ್ಕಳು, ಅಂಗವಿಕಲರು ಅಮಾಯಕರ
ಚೀರಾಟ ಮುಗಿಲು ಮುಟ್ಟುವುದು.(ಪುಟ 5)

ಇಲ್ಲಿ ಕವಿ ಪ್ರಕೃತಿ ಹೇಗೆ ಮುಂದೆ ಅಸ್ಪೃಶ್ಯ ಅಥವಾ ಮುಟ್ಟಬಾರದ ಜೀವದ ಸೃಷ್ಟಿಗಾಗಿ ಸ್ಪಂದಿಸುತ್ತಿದೆ ಎಂದು ಹೇಳಿದ್ದಾರೆ. ಮೇಲಿನ ಸೂರ್ಯದೇವನೇ ಉರಿದು ಬೂದಿಯಾಗುವ, ಕಗ್ಗತ್ತಲು ಆವರಿಸುವ, ಚಂದ್ರ ಕಣ್ಣೀರು ಸುರಿಸುವ, ನಕ್ಷತ್ರಗಳು ಕೂಡ ಬಿದ್ದು ಹೋಗುವ ಸ್ಥಿತಿಯನ್ನು ಕಟ್ಟಿಕೊಡುತ್ತಾರೆ. ಗರ್ಭದಲ್ಲಿ ಶಿಶುಗಳು ಸತ್ತು ಏಳು ದಿನದ ಬಾಣ್ತೆಯರು ರತಿ ಸುಖ ಬೇಡಿ ಪೀಡಿಸುವರು, ಕಾಡು ಪ್ರಯಾಣಿಸುವುದು ಊರೊಳಗೆ ಮುಂತಾದ ಅಸಂಬದ್ಧ, ವಿರುದ್ಧಾತ್ಮಕ ಪ್ರತಿಮೆಗಳನ್ನು ಅಲ್ಲಮನಂತೆಯೇ ಕವಿಯೂ ಬಳಸುತ್ತಾರೆ. ಏಳುದಿನದ ಬಾಣ್ತೆಯರು ರತಿಸುಖಕ್ಕಾಗಿ ಬೇಡುವುದು, ಕಾಡು ಊರೊಳಗೆ ಪ್ರಯಾಣಿಸುವುದು ಎರಡೂ ಅಸಂಬದ್ಧ ಮತ್ತು ಅಸಾಧ್ಯವಾದ ಮಾತುಗಳಾಗಿವೆ. ಮುಂದೆ ಆಗಲಿರುವ ಜೀವಸೃಷ್ಟಿಗೆ ಪ್ರಕೃತಿಯಲ್ಲಿ ಈಗ ಪ್ರಳಯವಾಗುತ್ತಿದೆ ಎನ್ನುವುದನ್ನು ಹೇಳುತ್ತಿದ್ದಾರೆ.

ದಕ್ಲಗಿತ್ತಿಗೆ ದೊರೆತ ಅಗ್ನಿಭಿಕ್ಷೆಯನ್ನು ಕುರಿತು ಕಾವ್ಯದಲ್ಲಿ ಕಟ್ಟೆಮನೆ ಯಜಮಾನ ಅಗ್ನಿಭಿಕ್ಷೆ ನೀಡಿದ ದಾತರನು ಯಾರವ್ವ'?(ಪುಟ 7) ಎಂದು ಪ್ರಶ್ನಿಸುವ ಪ್ರಸಂಗವೊಂದಿದೆ. ಅದನ್ನು ಹೇಳುವಾಗ ವಚನಚಳುವಳಿಯ ಹಿರಿಯರನ್ನು ಕವಿ ಸ್ಮರಿಸುತ್ತಾರೆ. ಹರಳಯ್ಯ, ಬಸವಣ್ಣನವರನ್ನು ಹೆಸರಿಸುತ್ತಾರೆ. ಆ ಅಗ್ನಿ ಭಿಕ್ಷೆ

ಅದು ಬಸಿರೊಳಗೆ ಹುಟ್ಟಿದ ಉಸಿರೆಂಬ ಘನವಲ್ಲೊ
ಉಸಿರೊಳಗೆ ಹುಟ್ಟಿದ ಶಬ್ದವೆಂಬ ಸೂತಕವಲ್ಲೊ.(ಪುಟ 7)

ಎಂದು ಯಜಮಾನ ಪ್ರಶ್ನಿಸಿಕೊಂಡು ತಾನೇ ಉತ್ತರವನ್ನು ಕಂಡುಕೊಂಡು ಸಮಾಧಾನ ಪಟ್ಟುಕೊಳ್ಳುವ ಸ್ಥಿತಿಯ ಹಾಗೆ ಆ ಅಗ್ನಿಭಿಕ್ಷೆಯನ್ನು ಕುರಿತು ಕವಿ ಮಾತನಾಡುತ್ತಾರೆ. ಆ ಅಗ್ನಿಭಿಕ್ಷೆಯನ್ನು ಯಾರೂ ನೀಡಿಲ್ಲದೆ, ಅದು ಮುಟ್ಟಬಾರದ ಕೂಸಿಗೆ ಜನ್ಮವಿತ್ತ ಕಾರಣವಾಗಿ ಆ

ತಾಯಿಯ ಒಡಲಿನ ಉಸಿರಲ್ಲೇ ಹುಟ್ಟಿದುದಾಗಿದೆ ಎಂದು ಕವಿ ಭಾವಿಸಿದ್ದಾರೆ. ಅಲ್ಲಮನು ಈ ಪರಿಭಾಷೆಗಳನ್ನು ತನ್ನ ವಚನಗಳಲ್ಲಿ ಬಳಸಿದವನಾಗಿದ್ದಾನೆ.

'ಶಬ್ದಸೂತಕವೆಂಬರು, ಶಬ್ದಕ್ಕೆ ಸೂತಕವುಂಟೆ-
ತನ್ನಯ ಸಂದೇಹವಲ್ಲದೆ'?(1198).

'ಪ್ರಾಣಕ್ಕೆ ಪ್ರಾಣ ಸಮದರ್ಶನವಾಗಿದ್ದವರಲ್ಲಿ
ಮನ ವಚನ ಕಾಯದಲ್ಲಿ ಶಬ್ದಸೂತಕ ಹುಟ್ಟಿದರೆ ಸೈರಿಸಬಾರದು ಕಾಣಾ'(1021)

ಎಂದು ಅಲ್ಲಮ ಶಬ್ದಸೂತಕವನ್ನು ಕುರಿತು ಮಾತನಾಡಿದವನಾಗಿದ್ದಾನೆ.

ಊರಿಗೆ ದಾರಿ ಯಾರು ತೋರಿದರೇನು
ಗುರುವಿಲ್ಲದ ಶಿಷ್ಯಂಗೆ ಶಿಶುವೇ ಗುರು(ಪುಟ 12)

ಎಂದು ಸಿದ್ದಯ್ಯನವರು ಅಲ್ಲಮನ ಗುರು-ಶಿಷ್ಯ ಸಂಬಂಧವನ್ನು ಕುರಿತು ಮಾತನಾಡಿದ್ದಾರೆ. ಅಲ್ಲಮ ಗುರುಶಿಷ್ಯ ಸಂಬಂಧವನಜೆಸಲೆಂದು ಹೋದರೆ ತಾನೆ ಗುರುವಾದ, ತಾನೆ ಶಿಷ್ಯನಾದ, ತಾನೆ ಲಿಂಗವಾದ(63) ಎಂದು, ಮತ್ತೊಂದು ವಚನದಲ್ಲಿ –

ಗುರುವಿಂಗೂ ಶಿಷ್ಯಂಗೂ ಆವುದು ದೂರ,
ಆವುದು ಸಾರೆಯೆಂಬುದನಾರು ಬಲ್ಲರು?!
ಗುರುವೆ ಶಿಷ್ಯನಾದ ತನ್ನ ವಿನೋದಕ್ಕೆ;
ಶಿಷ್ಯನೆ ಗುರುವಾದ ತನ್ನ ವಿನೋದಕ್ಕೆ.
: : : : : : : : : : : : : : : : : : : :
ನೀನೆ ಸ್ವಯಂಜ್ಯೋತಿ ಪ್ರಕಾಶನೆಂದಜೆಯಲು,
ನಿನಗೆ ನೀನೆ ಗುರುವಲ್ಲದೆ ನಿನ್ನಿಂದಧಿಕಮಪ್ಪ ಗುರುವುಂಟೆ?(949).

ಗುರುವೆಂಬುದು ಶಿಷ್ಯನೆಂದಲ್ಲಿಯೆ ಹೋಯಿತ್ತು(950)

ಎಂದು ಗುರು ಶಿಷ್ಯ ಸಂಬಂಧವನ್ನು ಕುರಿತು ಹೇಳುತ್ತಾನೆ. ಅಲ್ಲಮನಲ್ಲಿ ಗುರು-ಶಿಷ್ಯ ಸಂಬಂಧಗಳ ನಡುವೆ ಅಂತರವಿಲ್ಲ, ಪೂಜ್ಯವೆಂದು ಭಾವಿಸುವ ಅತಿರೇಕದ ಗೌರವವಿಲ್ಲ. ಯಾರು ತನ್ನನ್ನು ತಾನು ಅರಿತು ನಿಜವಾದ ಜ್ಞಾನವನ್ನು ಸಂಪಾದಿಸಿರುವನೋ ಅವನೇ ವಯಸ್ಸಿನಲ್ಲಿ ಕಿರಿಯನಾದರೂ ಗುರುವಾಗುತ್ತಾನೆ. ಇದು ಅಲ್ಲಮನು ಮಂಡಿಸುವ ಗುರು-ಶಿಷ್ಯ ಮೀಮಾಂಸೆಯಾಗಿದೆ.

ತಂದೆ ಹರಳಯ್ಯನವರ ತೊಡೆ ತೊಗಲು
'ಚಮ್ಮಾವುಗೆ' ನಿಮಗೆ
ನಿಮ್ಮ ಅಂಗೈಯಲ್ಲಿ ನನ್ನ ಹೆಬ್ಬೆರಳು
ಲಿಂಗವಾಯಿತ್ತಲ್ಲ!
ಡಣ್ಣಾಯಕ ಬಸವ ಬಸವಣ್ಣ
ನಮ್ಮ ಗುಹೇಶ್ವರನ ಕರುಣದ ಕಂದನಾದ

ಕಾರಣ
ಲಿಂಗ ಸ್ಫೋಟವಾಗಿ ನಿರ್ಲಿಂಗ ಹುಟ್ಟಿತ್ತಲ್ಲ
ಬೀಜಲಿಂಗ ಕೊಳೆತು ಮೊಳಕೆಯೊಡೆದಂತೆ (ಪುಟ 13)

ಕಾವ್ಯದಲ್ಲಿ ಕವಿ ಸಿದ್ದಯ್ಯನವರು ಅಲ್ಲಮನ ಅಂಕಿತದೊಂದಿಗೆ ಲಿಂಗ ಕಲ್ಪನೆಯ ಬಗ್ಗೆ ಮಾತನಾಡುತ್ತಾರೆ. ಇಲ್ಲಿ ಲಿಂಗ ಎನ್ನುವುದು ಅನೇಕಾರ್ಥದಲ್ಲಿ ಪ್ರಯೋಗವಾಗುತ್ತಿದೆ. ಅಲ್ಲಮನ ಭಾಷೆಯೇ ಈ ರೀತಿಯದ್ದಾಗಿದೆ. ಅವನ ಭಾಷೆ ಅನೇಕಾರ್ಥಗಳನ್ನು, ಸಂಕೀರ್ಣಾರ್ಥಗಳನ್ನು ಒಳಗೊಂಡಿರುತ್ತದೆ. ಇಲ್ಲಿಯೂ ಲಿಂಗ ಎನ್ನುವುದಕ್ಕೆ ಗಂಡು–ಹೆಣ್ಣು ಎಂಬ ಲಿಂಗ ಕಲ್ಪನೆ ಹೋಗಿ ಈ ಸ್ಪೃಶ್ಯ ಸಮಾಜದಲ್ಲಿ, ಮಡಿವಂತ ಸಮಾಜದಲ್ಲಿ ಮುಟ್ಟಬಾರದ ಮಗುವಾಗಿ ಹುಟ್ಟಿ ನಪುಂಸಕಗೊಂಡ ಪರಿಯನ್ನು ಕುರಿತು ಒಂದು ಅರ್ಥವು ಹೇಳುತ್ತಿದ್ದರೆ, ಮತ್ತೊಂದು ಅರ್ಥವು ಸ್ಥಾವರ ಲಿಂಗವೊಂದು ಸ್ಫೋಟಗೊಂಡು ಜಂಗಮವಾದದ್ದನ್ನು ಕುರಿತು ಹೇಳುತ್ತಿರುವಂತಿದೆ! ಮತ್ತೊಂದು ಅರ್ಥವು ಅನೇಕ ವರ್ಷಗಳಿಂದ ಕೊಳೆತಿರುವ ಈ ಸಾಂಪ್ರದಾಯಿಕ ಸಮಾಜವೊಂದರಿಂದ ಜೀವಿಯೊಂದು ಗುಹೇಶ್ವರನ ತಾತ್ವಿಕ ಚಿಂತನೆಯಿಂದ ಚಿಗುರೊಡೆದಿರುವ ಸಾಂಕೇತಿಕತೆಯನ್ನು ಒಳಗೊಂಡಿರುವಂತಿದೆ. ಹೀಗೆ ಅನೇಕಾರ್ಥಗಳನ್ನು ಏಕವಾಕ್ಯದಲ್ಲೇ ಧ್ವನಿಸುವ ವಿಶಿಷ್ಟ ಶೈಲಿಯನ್ನು ಅಲ್ಲಮ ತನ್ನ ವಚನಗಳಲ್ಲಿ ಪ್ರಯೋಗಿಸಿದ್ದಾನೆ. ಆಧುನಿಕ ಕನ್ನಡ ಕವಿಗಳಲ್ಲಿ ಬೇಂದ್ರೆಯವರೂ ಕೂಡ ಈ ಶೈಲಿಯನ್ನು ಅನುಸರಿಸಿದವರಾಗಿದ್ದಾರೆ. ಕವಿ ಸಿದ್ದಯ್ಯನವರೂ ಇಲ್ಲಿ ಆ ಶೈಲಿಯನ್ನು ತಮ್ಮದಾಗಿಸಿಕೊಂಡಿದ್ದಾರೆ.

ಕಾವ್ಯದಲ್ಲಿ ಮುಂದೆ,

'ಸಾಯೋಮರಿ: ಸಾವು ಘನ, ಹುಟ್ಟು ಮುಟ್ಟಿಲ್ಲದ ಕಂದ ನಾನು' (ಪುಟ 16)

ಎಂದು ಹೇಳುವ ಮೂಲಕ ಈ ಮೊದಲು ಮೇಲೆ ಹೇಳಿದ ಮುಟ್ಟಬಾರದ ಸ್ಥಿತಿಯಲ್ಲಿ ಹುಟ್ಟಿದ ಜೀವಿಯೊಂದು ತಾತ್ವಿಕ ಚಿಂತನೆಗಳ ಫಲವಾಗಿ ಯಾವುದೇ ಬಗೆಯ ಅಸ್ಪೃಶ್ಯ ಅಥವಾ ಮುಟ್ಟು ತಟ್ಟಿಲ್ಲದ ಸ್ಥಿತಿಯಲ್ಲಿ ಘನಗೊಂಡ, ನಿರ್ವಲಯ ಸ್ಥಿತಿಗೆ ತಲುಪಿದ ಆಶಯವನ್ನು ಇಲ್ಲಿ ವ್ಯಕ್ತಪಡಿಸುತ್ತಿದ್ದಾರೆ. ಅಲ್ಲಮ ಘನ ಮತ್ತು ಹುಟ್ಟುಮುಟ್ಟಿನ ಬಗ್ಗೆ ತನ್ನ ವಚನಗಳಲ್ಲಿ ಹೇಳಿದ್ದಾನೆ. ಅಲ್ಲಮನಲ್ಲಿ ಸಾವು, ಮುಕ್ತಿ ಇವು ಘನವೆಂಬ ಭಾವನೆಯನ್ನು ತಳೆದಿವೆ. ಆದ್ದರಿಂದಲೇ 'ಜನನವಿಲ್ಲದ ಘನಕ್ಕೆ ಮರಣವುಂಟೆ?'(938) ಎಂದು ಅಲ್ಲಮ ಪ್ರಶ್ನಿಸುತ್ತಾನೆ. ಹುಟ್ಟು–ಮುಟ್ಟಿನ ಬಗ್ಗೆಯೂ ಹೆಚ್ಚು ಚಿಂತನೆಯನ್ನು ನಡೆಸಿದವನಾಗಿದ್ದಾನೆ.

ಅಟ್ಟಿ ಮುಟ್ಟಲಿಲ್ಲ, ಮುಟ್ಟಿ ಮರಳಲಿಲ್ಲ
ಏನೆಂಬೆ ಲಿಂಗವೇ ಎಂತೆಂಬೆ ಲಿಂಗಯ್ಯ?
ನಿಜವನಜಿದ ಬಳಿಕ ಮರಳಿ ಹುಟ್ಟಲಿಲ್ಲ ಕಾಣಾ, ಗುಹೇಶ್ವರ. (685)

ಎಂದು ಹೇಳಿದ್ದಾನೆ.

ಸಿದ್ದಯ್ಯನವರು ಕಾವ್ಯವನ್ನು ಮುಂದುವರೆಸುತ್ತಾ ಅಲ್ಲಮನ ಮಾಯೆಯ ಬಗೆಗಿನ ಅಭಿಪ್ರಾಯವನ್ನು ಬಳಸಿಕೊಳ್ಳುತ್ತಾರೆ.

ಮಾತಿಗೆ ಮೌನದ ಪಟ್ಟು, ಮೌನಕ್ಕೆ ಮಾಯೆಯ ಪಟ್ಟು
ಮಾಯೆಗೆ ಹೆಣ್ಣು, ಹೊನ್ನು, ಮಣ್ಣಿನ ಪಟ್ಟು
ಕುಂತೇಬಿಟ್ಟ ಗರುಡಗಂಭದ ತುದೀಲಿ
ಜ್ಯೋತಿಯಾಗಿ ಉರಿಯುತ್ತ. (ಪುಟ 29)

ಕವಿ ಸಿದ್ದಯ್ಯನವರು ಅನ್ನದ, ಹಸಿವಿನ ತೀವ್ರತೆಯನ್ನು ಕುರಿತು ಹೇಳುತ್ತಾರೆ. ಹಸಿವಿಗಾಗಿ ಯುದ್ಧ, ಹೋರಾಟ ನಡೆಸಿದ ಮತ್ತು ಈಗ ನಡೆಸಲು ಶಸ್ತ್ರಾಸ್ತ್ರವನ್ನು ಹುಡುಕುವ ಪರಿಸ್ಥಿತಿಯ ಚಿತ್ರಣವನ್ನು ಕೊಡುತ್ತಾರೆ. ವ್ಯಕ್ತಿಯೊಬ್ಬ ಭಿಕ್ಷಾಪಾತ್ರೆ ಹಿಡಿದು ಹೊಸಲಾಚೆ ಬಾಗಿಲ ಬಳಿಯಲ್ಲಿ ಪಟ್ಟಿಡಿದು ನಿಲ್ಲುವ ಸ್ಥಿತಿಯನ್ನು ಹೇಳುತ್ತಾರೆ. ಇದೇ ಅರಿವಿನ ಆಧ್ಯಾತ್ಮಜ್ಞಾನದ ಶಿಖರವೇರಿದ ಸ್ಥಿತಿ.

ಹೊನ್ನು ಮಾಯೆಯೆಂಬರು, ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ
ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರ.(72)

ಎಂದು ಅಲ್ಲಮ ಮಾಯೆಯನ್ನು ಕುರಿತು ಹೇಳಿದ್ದಾನೆ. ಕಾವ್ಯದಲ್ಲಿ ಹಸಿವನ್ನು ತಡೆಯಲಾರದ ಸ್ಥಿತಿಯಲ್ಲಿ ಅನ್ನಕ್ಕಾಗಿ ಪರಿತಪಿಸುವುದೇ ಮನದ ಮುಂದೆ ಇರುವ ಆಸೆಯಾಗಿದೆ. ಅದಕ್ಕಾಗಿ ಮನೆಯ ಹೊರಬಾಗಿಲಿನಲ್ಲಿ ಅನ್ನವನ್ನು ಪಡೆದೇ ತೀರುವೆನೆಂದು ವ್ಯಕ್ತಿಯೊಬ್ಬ ಮಾತನಾಡದೆ ಮೌನದ ಸ್ಥಿತಿಯಲ್ಲಿ ಘನಪಟ್ಟು ಹಾಕಿ ಕುಳಿತುಕೊಳ್ಳುವ ಸಂಗತಿಯನ್ನು ಕಾವ್ಯದಲ್ಲಿ ಅಲ್ಲಮನ ಈ ಮಾಯೆಯ ವ್ಯಾಖ್ಯಾನವನ್ನು ಬಳಸಿ ಚಿತ್ರಿಸಿದ್ದಾರೆ.

ಹೀಗೆ 'ದಕ್ಲಕಥಾ ದೇವಿಕಾವ್ಯ'ದಲ್ಲಿ ಕವಿ ಸಿದ್ದಯ್ಯನವರು ಅಲ್ಲಮನ ವಚನಗಳಲ್ಲಿನ ಪದ, ವಾಕ್ಯ, ತತ್ವ-ಚಿಂತನೆ, ಭಾಷಾ ಬಳಕೆಯ ಶೈಲಿ ಮುಂತಾದವುಗಳನ್ನು ಬಳಸಿಕೊಳ್ಳುವುದರೊಂದಿಗೆ ಅವನೊಂದಿಗೆ ಅನುಸಂಧಾನವನ್ನು ನಡೆಸಿದ್ದಾರೆ..

ಗಲ್ಲೆಬಾನಿ:

'ಗಲ್ಲೆಬಾನಿ' ಕೆ.ಬಿ.ಸಿದ್ದಯ್ಯನವರ ಸೋಜಿಗದ ಕಥೆಯನ್ನು ಹೇಳುವ ಒಂದು ಕಾವ್ಯವಾಗಿದೆ. ಕಾವ್ಯದಲ್ಲಿ ಆಧ್ಯಾತ್ಮವನ್ನು ವಿಶಿಷ್ಟ ರೀತಿಯಲ್ಲಿ ಶೋಧಿಸುವ ಕಾಯಕವನ್ನು ಸಿದ್ದಯ್ಯನವರ ಈ ಕಾವ್ಯದಲ್ಲಿ ಮಾಡಿದ್ದಾರೆ. ಗಲ್ಲೆಬಾನಿ ವರ್ಗೀಕೃತ ಸಮಾಜವೊಂದರ ಅತ್ಯಂತ ತಳಮಟ್ಟದ ಸಂಸ್ಕೃತಿಯ ಅನಾವರಣವಾಗಿದೆ. ಇದರಲ್ಲಿ ಚಮ್ಮಾರ ವರ್ಗದ ಬದುಕು, ವರ್ತಮಾನದಲ್ಲಿ ಪಡೆಯುವ ವಿವಿಧ ಆಯಾಮಗಳನ್ನು ಹೇಳಲಾಗಿದೆ. ಗಲ್ಲೆಬಾನಿ ಎನ್ನುವುದು ಚಮ್ಮಾರನ ಕಾಯಕದಲ್ಲಿ ಬೇಕಾಗಿರುವ ಬಹುಮುಖ್ಯ ಸಾಧನ. ಅಂತಹ ಗಲ್ಲೆಬಾನಿಯೊಂದಿಗೆ ಚಮ್ಮಾರನ ಅವಿನಾಭಾವ ಸಂಬಂಧ ಏರ್ಪಟ್ಟಿರುತ್ತದೆ. ಅದು ಅವನ ಜೀವನ ನಿರ್ವಹಣೆಯನ್ನು ಬದುಕಿನ ಚಲನೆಯನ್ನು ಮುಂದುವರೆಸುವ, ನಿರ್ಧರಿಸುವ ಜೀವನಾಡಿಯಾಗಿದೆ. ಅದರೊಂದಿಗಿನ ದಿನನಿತ್ಯದ ಒಡನಾಟ ಅವನಿಗೆ ಸಂಗಾತಿಯೊಂದಿಗೆ ನಡೆಸುವ ಸ್ನೇಹ ಸಂಭಾಷಣೆಯಷ್ಟೇ ಅನುಭವವನ್ನು ತರಿಸುತ್ತದೆ. ಚಮ್ಮಾರನು ಕಷ್ಟ-ಸುಖ-ದುಃಖಗಳನ್ನು ಅದರೊಂದಿಗೆ ಹಂಚಿಕೊಳ್ಳವಷ್ಟರ ಮಟ್ಟಿಗೆ ತನ್ನ ಕಾಯಕದೊಂದಿಗೆ ತಾದಾತ್ಮ್ಯವನ್ನು ಬೆಳೆಸಿಕೊಂಡಿರುತ್ತಾನೆ. ಅದನ್ನು ಈ ಕಾವ್ಯದಲ್ಲಿ ಸಿದ್ದಯ್ಯನವರು ಹಿಡಿದಿಡಲು ಪ್ರಯತ್ನಿಸಿದ್ದಾರೆ.

'ಗಲ್ಲೆಬಾನಿ' ಚಮ್ಮಾರನ ಬದುಕಿನ ಅಂತಃಸತ್ವ ಮೌಲ್ಯಗಳೊಂದಿಗೆ ನಡೆಸುವ ಸಂವಾದ ಕೃತಿಯಾಗಿದೆ. ಜೊತೆಗೆ ಅವನ ಕಾಯಕ ವೃತ್ತಿಯಿಂದಲೇ ಒಂದು ರೀತಿಯ ಆಧ್ಯಾತ್ಮದ ತುದಿಯನ್ನು ತಲುಪಲು ಪ್ರಯತ್ನಿಸುತ್ತಿರುವ ಕಾವ್ಯವಾಗಿದೆ. ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ 'ಗಲ್ಲೆಬಾನಿ' ತುಂಬಾ ಮಹತ್ವದ ಕಾವ್ಯವಾಗಿದೆ. ಸಮಾಜದ ಅಲಕ್ಷಿತ ವರ್ಗದ ಜನಸಮುದಾಯದ ಬದುಕಿನ ಅನಾವರಣ ಸಾಮಾಜಿಕ ಚರಿತ್ರೆಯ ಜೊತೆಜೊತೆಗೆ ನಿರೂಪಣೆಗೊಂಡಿದೆ. ವಚನ ಚಳುವಳಿಯ ತಾತ್ವಿಕ ಚಿಂತನೆಗಳು ಕಾವ್ಯದ ತತ್ತಿಯೊಡೆದು ಜೀವವೊಂದು ರೂಪುಪಡೆಯಲು ಕಾವು ಕೊಡುವುದರ ಮೂಲಕ ಸಹಾಯ ಮಾಡಿದೆ. ಕೆ.ಬಿ.ಸಿದ್ದಯ್ಯನವರು ಈ ವಚನ ಚಳುವಳಿಯ ಸಾರವನ್ನು ಹೀರಿಕೊಂಡು ತಮ್ಮ ಕಾವ್ಯಗಳಲ್ಲಿ ತಮಗೆ ಬೇಕಾದ ಹಾಗೆ ಬಳಸಿಕೊಂಡಿದ್ದಾರೆ. ಪ್ರತಿಯೊಂದು ಕಾಯಕದಲ್ಲಿಯೂ ಆಧ್ಯಾತ್ಮವನ್ನು ಹುಡುಕುವ ಸಿದ್ದಯ್ಯನವರು ಚಮ್ಮಾರನ ಗಲ್ಲೆಬಾನಿಯಿಂದ ಆಧ್ಯಾತ್ಮವನ್ನು ಕಾಣಲು ಪ್ರಯತ್ನಿಸುತ್ತಿದ್ದಾರೆ. ಪ್ರತಿಯೊಬ್ಬನ ಕಾಯಕ ಕೌಶಲ್ಯ ಒಂದು ಮಹಾಪ್ರಯಾಣ. ಅದರೊಳಗೆ ದಿನನಿತ್ಯದ ಬದುಕು, ಮಾನವೀಯತೆ, ಸಂಸ್ಕೃತಿ, ಧರ್ಮ, ರಾಜಕಾರಣ, ಕಲೆ, ಕಾವ್ಯ, ಕೃಷಿ ಮುಂತಾದವುಗಳಿರುತ್ತವೆ. ಈ ಕಾಯಕ ಕೌಶಲ್ಯ ಬರೀ ಕೆಲಸ ಮಾತ್ರ ಆಗಿರದೆ ಅದು ಸಾಮಾಜಿಕ ಚರಿತ್ರೆಯೊಂದನ್ನು ಒಳಗೊಂಡಿರುತ್ತದೆ. ಇದನ್ನು ಸಿದ್ದಯ್ಯನವರು ಸಮಾಜೋ-ಆಧ್ಯಾತ್ಮಿಕ ಪ್ರಯಾಣ[6] ಎನ್ನುತ್ತಾರೆ.

ತಳ ಸಮುದಾಯವೊಂದರ ಒಡಲಿನಿಂದ ಬರುವ ಸಾಮಾಜಿಕ ಸಂಕಟದಲ್ಲಿ ಆಧ್ಯಾತ್ಮವನ್ನು ಶೋಧಿಸುವ ಕಾರ್ಯವನ್ನು ಕವಿ ಈ ಕಾವ್ಯದಲ್ಲಿ ಮಾಡಿದ್ದಾರೆ. 'ಗಲ್ಲೆ ಬಾನಿ' ಸಿದ್ದಯ್ಯನವರ ಹಿಂದಿನ ಎಲ್ಲಾ ಕಾವ್ಯಗಳ ಮುಂದುವರಿದ ಆಧ್ಯಾತ್ಮ ಕಾವ್ಯವಾಗಿದೆ. ಮಾನವ, ಮನುಷ್ಯನನ್ನು ಶೋಷಿಸುವ ಹಾಗೆಯೇ ಭೂಮಿ ಮತ್ತು ಪ್ರಕೃತಿಯ ಮೇಲೆ ನಿರಂತರ ಶೋಷಣೆಯನ್ನು ಮಾಡುತ್ತಿದ್ದಾನೆ. ಇಂದಿನ ಆಧುನಿಕತೆಯ ಮಾರುಕಟ್ಟೆ ಯುಗವು ಭೂಮಿಯ ಮೇಲೆ ತನ್ನ ಪ್ರಭುತ್ವ ಸಾಧಿಸಿ ಪ್ರಕೃತಿಯ ವಿನಾಶಕ್ಕೆ ಕಾರಣವಾಗಿದೆ. ಇದರಿಂದ ಪ್ರಕೃತಿ ನರಳುತ್ತಿದೆ. ಅದು ತನ್ನ ಬಿಡುಗಡೆಗೆ ಹವಣಿಸುತ್ತಿದೆ ಎಂದು ಕಾವ್ಯ, ಪರಿಸರನಾಶದತ್ತಲೂ ತನ್ನ ದೃಷ್ಟಿನೆಟ್ಟಿದೆ. ಆ ಮೂಲಕವಾಗಿ ಅದರೊಳಡಗಿರುವ ಮತ್ತೊಂದು ಆಧ್ಯಾತ್ಮವನ್ನು ಕಟ್ಟಿಕೊಡುವ ಪ್ರಯತ್ನ ಮಾಡುತ್ತದೆ. ಹುಟ್ಟು-ಲಯ ಹಾಗು ಪ್ರಳಯದ ಕಲ್ಪನೆಯ ಮೂಲಕ ಹೊಸ ಆಧ್ಯಾತ್ಮವೊಂದನ್ನು ಕಾವ್ಯ ಇಲ್ಲಿ ಹೇಳಲು ಪ್ರಯತ್ನಿಸುತ್ತಿದೆ. ಆದ್ದರಿಂದಲೇ ಕವಿ 'ಕಣ್ಣಿದ್ದವರು ಕಾಣಿರೋ, ಕಣ್ಣಿಲ್ಲದವರು ಕಣ್ಣು ಧರಿಸಿ ಕಾಣಿರೊ' ಎಂದು ಸೂಕ್ಷ್ಮವಾಗಿ ಹೇಳುತ್ತಿರುವಂತದ್ದಾಗಿದೆ.

ಸಿದ್ದಯ್ಯನವರು ಅಲ್ಲಮನನ್ನು ಕಣ್ಣೆದುರಿಗೆ ನಿಲ್ಲಿಸಿಕೊಂಡೇ ತಮ್ಮ ಈ ಗಲ್ಲೆಬಾನಿ ಕಾವ್ಯವನ್ನು ಕಟ್ಟಿದ್ದಾರೆ. ಇದರಲ್ಲಿ ಅಲ್ಲಮನ ಚಿಂತನೆಗಳು, ತತ್ವಗಳು ನಿರಂತರ ದಾರೆಯಾಗಿ ಪ್ರವಹಿಸುವುದನ್ನು ಕಾಣಬಹುದಾಗಿದೆ.

ಕಾವ್ಯದಲ್ಲಿ –

'ದೇಹವೇ ದೇವಾಲಯ
ಗುರಿಯೇ ಪೊಡುವಿಗೆ
ಒಡೆಯ'ನಾದ ಬಳಿಕ (ಗಲ್ಲೆಬಾನಿ ಪುಟ 2)

ಎಂದು ಕವಿ ಹೇಳುತ್ತಾರೆ. ಸಿದ್ದಯ್ಯನವರು ಶಿಶುನಾಳ ಷರೀಫರ 'ಗುಡಿಯ ನೋಡಿರಣ್ಣ ದೇಹದ ಗುಡಿಯ ನೋಡಿರಣ್ಣ, ಗುಡಿಯ ನೋಡಿ ಇದು ಪೊಡವಿಗೆ ಒಡೆಯನು' ಎನ್ನುವ ತತ್ವಪದವನ್ನು ತಮಗೆ ಬೇಕಾದ ಹಾಗೆ ಕಾವ್ಯಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಶಿಶುನಾಳ ಷರೀಫರಿಗೆ ಅಲ್ಲಮನ ಪ್ರಭಾವವಾಗಿರುವುದನ್ನು ಈ ಮೊದಲೇ ಪ್ರಸ್ತಾಪಿಸಿದ್ದೇನೆ. ಅಲ್ಲಮನನ್ನು ಷರೀಫರು ಮತ್ತು ಸಿದ್ದಯ್ಯನವರು ತಮ್ಮ ರಚನೆಗಳಲ್ಲಿ ಅನುಸಂಧಾನಿಸಿದ್ದಾರೆ. ಇಲ್ಲಿ ಶಿಶುನಾಳ ಷರೀಫರ ತತ್ವ ಪದವನ್ನು ಬಳಸಿಕೊಳ್ಳುವುದರ ಮೂಲಕ ಸಿದ್ದಯ್ಯನವರು ಅಲ್ಲಮನೊಂದಿಗೆ ಪರೋಕ್ಷವಾಗಿ ಅನುಸಂಧಾನ ನಡೆಸಿದ್ದಾರೆ.

ಇಗೋ ಇಗೋ ಈಗಲೇ
ನನ್ನೆರಡು ಕೈಗಳ ಇಕ್ಕುಳ

ಮಾಡಿಕೊಡುವೆ
ಕುಲ ಕುಲುಮೆಯ ಒಲೆಯಲ್ಲಿ
ಕುದಿಯುತ್ತಿರುವ
ಅರಿವಿನ ಕುರುಹಿನ ಕಿಡಿಗಳನ್ನು
ಆ ಇಕ್ಕಳದ ಕೊಕ್ಕಿನಲ್ಲಿ
ಹಿಡಿದ್ಹಿಡಿದು ಹಿಡಿದ್ಹಿಡಿದು
ಕಂಡೂ ಕಂಡೂ ಕಾಣದುದ
ಕಾಣುವಂತವನಾದರೆ,
ಶಿವ........ಶಿವ.........ಶಿವ.........
ಶಿರವನ್ನೊಲ್ಲದ ಅಲ್ಲಮನಂತೆ (ಗಲ್ಲಬಾನಿ ಪುಟ 34)

ಎಂದು ಹೇಳುತ್ತಿರುವ ಕವಿ ಸಿದ್ದಯ್ಯನವರು ಅಲ್ಲಮನ ಪಾರಿಭಾಷಿಕ ಕೋಶಗಳನ್ನು ಸಮರ್ಥವಾಗಿ ಕಾವ್ಯಕ್ಕೆ ಬಳಸಿಕೊಳ್ಳುತ್ತಾರೆ. ಅಲ್ಲಮ ಅರಿವು-ಕುರುಹಿನ ಬಗ್ಗೆ ಅತಿಯಾದ ಜಿಜ್ಞಾಸೆಯನ್ನು ನಡೆಸಿದ್ದಾನೆ.

ಅಱಿದೆನೆಂಬುದು ತಾ ಬಯಲು
ಅಱಿಯೆನೆಂಬುದು ತಾ ಬಯಲು
ಅಱಿವಿನ, ಕುಱುಹಿನ, ಮಱಹಿನೊಳಗೆ
ಗುಹೇಶ್ವರನೆಂಬುದು ತಾ ಬಯಲು; (623)

ಎಂದು ಮತ್ತೊಂದು ಕವನದಲ್ಲಿ –

ಅಱಿದು ನೆನೆಯಲಿಲ್ಲ, ಮಱೆದು ಪೂಜಿಸಲಿಲ್ಲ;
ತೆಱಹಿಲ್ಲದ ಘನಕ್ಕೆ ಕುಱುಹು ಮುನ್ನಿಲ್ಲ
ತನಗೆ ಗುರುವಿಲ್ಲ, ಗುರುವಿಗೆ ತಾನಿಲ್ಲ
– – – – – – – – – – – – – – – (635)

ಎಂದು ಅರಿವು-ಕುರುಹನ್ನು ಕುರಿತು ಅಲ್ಲಮ ಹೇಳಿದ್ದಾನೆ. ಕಾವ್ಯದ ಮೇಲಿನ ಸಾಲುಗಳಲ್ಲಿ ಕವಿಯು ಕಮ್ಮಾರನ ಕಸುಬಿನಲ್ಲಿ ಆಧ್ಯಾತ್ಮವನ್ನು ಕಾಣುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಮುಟ್ಟಬಾರದ ಮಗುವಾಗಿ ಹುಟ್ಟಿದ ವ್ಯಕ್ತಿಯೊಬ್ಬನ ಸಾಮಾಜಿಕ ಸಂಕಟ ಇಲ್ಲಿ ಆಧ್ಯಾತ್ಮೀಕರಣಗೊಳ್ಳುತ್ತಿದೆ. ಕುಲದ ಕುಲುಮೆಯಲ್ಲಿ ಬೇಯಿಸುತ್ತಿರುವ ಅರಿವು-ಕುರುಹುಗಳನ್ನು ಕಮ್ಮಾರನೊಬ್ಬ ತನ್ನ ಕೈಗಳನ್ನೇ ಇಕ್ಕಳವಾಗಿ ಮಾಡಿಕೊಂಡು ಹೊರತೆಯುವ ಚಿಂತನೆಯೇ ಆಧ್ಯಾತ್ಮಗೊಳ್ಳುವ ಚಿಂತನೆಯಾಗಿದೆ. ಇಂತಹ ಕಾಣದ ಆಧ್ಯಾತ್ಮವನ್ನೇ ಕಾಣಿಸುವಂತೆ ಮಾಡುವ ಬೆಳಕು ಅಲ್ಲಮನದು. ಅದಕ್ಕೇ ಅವನು 'ಕಂಡುದನೆ ಕಂಡು ಗುರುಪಾದವ ಹಿಡಿದಲ್ಲಿ, ಕಾಣದುದ ಕಾಣಬಹುದು ಗುಹೇಶ್ವರ'(51) ಎಂದು ಹೇಳುತ್ತಾನೆ. ಅಲ್ಲಮನಲ್ಲಿ ಶಿರವೆನ್ನುವುದು ಸುಜ್ಞಾನ, ಪೂರ್ಣಜ್ಞಾನದ ಸಂಕೇತವಾಗಿ ಬಳಕೆಯಾಗುತ್ತದೆ. ಈ ಪೂರ್ಣಜ್ಞಾನ, ಸುಜ್ಞಾನವನ್ನು

ಪಡೆಯಲು ಮಾಯೆಯನ್ನು ಗೆಲ್ಲಬೇಕಾಗುತ್ತದೆ. ತಾನೆಂಬ ಅಹಂಕಾರವನ್ನು ಕಳೆಯಬೇಕಾಗುತ್ತದೆ. 'ತಾನೆಂಬುದ ತಾನಳಿದಲ್ಲಿ ಗುಹೇಶ್ವರ ಲಿಂಗವು ತಾನೆ'(1193) ಆಗುತ್ತಾನೆ, ಸುಜ್ಞಾನವನ್ನು ಪಡೆಯುತ್ತಾನೆ. ಆದರೆ ಅಲ್ಲಮನಿಗೆ ಇಂತಹ ಸುಜ್ಞಾನವನ್ನು ಹಿಡಿದವರೊಬ್ಬರೂ ಕಾಣುತ್ತಿಲ್ಲ. ಆದ್ದರಿಂದಲೇ 'ಶಿರವ ಹಿಡಿದಹೆನೆಂಬವರಿನ್ನಾರು ಇಲ್ಲ!'(662) ಎಂದು ಹೇಳುತ್ತಾನೆ. ಇದನ್ನೇ ಕಾವ್ಯದಲ್ಲಿ ಕವಿ ಹೇಳಿದ್ದಾರೆ.

'ಗಲ್ಲೆಬಾನಿ' ಕಾವ್ಯದಲ್ಲಿ ಜಾನಪದೀಯ ಪದ್ಯವೊಂದರ ಜೊತೆ ಕವಿ ಅನುಸಂಧಾನ ನಡೆಸಿದ್ದಾರೆ. ಮಂಟೇಸ್ವಾಮಿ ಕಾವ್ಯವನ್ನು ತಮ್ಮ ಕಾವ್ಯದ ಒತ್ತಾಸೆಯಾಗಿ ಅಲ್ಲಲ್ಲಿ ಬಳಸಿಕೊಂಡಿದ್ದಾರೆ.

ಕಂಡೂ ಕಂಡೂ ಕಾಣದುದ
ಕಾಣುವಂತವನಾದರೆ
ಶಿವ........ಶಿವ.........ಶಿವ.........
ಶಿರವ ತಂದು ಮೆರೆವ
ಮಂಟೇದ ಸ್ವಾಮಿಯಂತೆ(ಪುಟ 4)

ಮಂಟೇಸ್ವಾಮಿ ಕಾವ್ಯಕ್ಕೂ ಅಲ್ಲಮನಿಗೂ ನೇರ ಸಂಬಂಧವೊಂದನ್ನು ಶೂನ್ಯ ಸಂಪಾದನೆಯು ಹೇಳುತ್ತದೆ. ಮಂಟೇಸ್ವಾಮಿ ಕಾವ್ಯದ 'ಕಲ್ಯಾಣ ಪಟ್ಟಣದ ಸಾಲು' ಎಂಬ ಭಾಗದಲ್ಲಿ ಅಲ್ಲಮನನ್ನು ಮಂಟೇಸ್ವಾಮಿಗೆ ಸಮೀಕರಿಸಲಾಗಿದೆ. ಅಲ್ಲಮನೇ ಮಂಟೇಸ್ವಾಮಿಯಾಗಿ ಗುರು ಸ್ವರೂಪಿಯಾಗಿದ್ದಾನೆ ಎಂದು ನಂಬಲಾಗಿದೆ. ಯಾವುದನ್ನು ಶಿಷ್ಟ ಸಮುದಾಯವು ನಂಬಿತ್ತೋ ಆ ನಂಬಿಕೆಗಳನ್ನು ಒಡೆದು ಕಟ್ಟುವ ಕಾಯಕದಲ್ಲಿ ಅಲ್ಲಮನನ್ನು ಮಂಟೇಸ್ವಾಮಿಗೆ ಹೋಲಿಸಲಾಗಿದೆ. ವ್ಯಕ್ತಿಯ ಅಹಂಕಾರವನ್ನು ಕಳೆಯುವ, ಜ್ಞಾನದ, ತನ್ನ ತನದ ಅರಿವನ್ನು ತಿಳಿಸಿಕೊಡುವ ಅಲ್ಲಮನ ವ್ಯಕ್ತಿತ್ವ ಈ ಜಾನಪದ ಕಾವ್ಯದ ನಾಯಕ ಮಂಟೇಸ್ವಾಮಿಗೆ ಆರೋಪಿಸಲಾಗಿದೆ. ಯಾವುದನ್ನು ಸಾಂಪ್ರದಾಯಿಕ ಸಮಾಜವೊಂದು ಸಹ್ಯ ನೆಲೆಯಲ್ಲಿ ಆಚರಣೆಗಳನ್ನು ನಡೆಸಿಕೊಂಡು ಬಂದಿತ್ತೋ ಅವುಗಳನ್ನು ಪಲ್ಲಟಿಸಿ ಅಸಹ್ಯ ಮತ್ತು ವಿಕಾರದ ನೆಲೆಯಲ್ಲಿ ಅವುಗಳನ್ನು ಗ್ರಹಿಸುವ ನೈಜ ಕ್ರಮವೊಂದನ್ನು ಈ ಜಾನಪದ ಕಾವ್ಯ ಕಲಿಸುತ್ತದೆ.

ಮಂಟೇಸ್ವಾಮಿ ಕಾವ್ಯದಲ್ಲಿ ಬಸವಣ್ಣ ಮತ್ತು ಅಲ್ಲಮ ಸ್ವರೂಪಿ ಮಂಟೇಸ್ವಾಮಿಗೂ ಭೇಟಿಯ ಪ್ರಸಂಗವೊಂದಿದೆ. ಮಂಟೇದಲ್ಲಮ ಕಲ್ಯಾಣಕ್ಕೆ ಬಂದಾಗ ಅವನ ವೇಷಭೂಷಣಗಳನ್ನು ನೋಡಿ ದ್ವಾರಪಾಲಕರು ಒಳಗೆ ಬಿಡದೆ ಹಿಂದಕ್ಕೆ ಕಳುಹಿಸಿಬಿಡುತ್ತಾರೆ. ನಂತರ ಊರ ಬಾಗಿಲಲ್ಲಿ ಕಟ್ಟಿದ್ದ ನಾಲಗೆ ಇಲ್ಲದ ಗಂಟೆಯ ಶಬ್ದ ಕೇಳಿ ತನಗಿಂತಲೂ ಹಿರಿಯ ಶರಣರು ಆಗಮಿಸಿರುವ ಸೂಚನೆಯನ್ನು ಅರಿತು ಬಸವಣ್ಣ ಪತ್ನಿ ಸಮೇತನಾಗಿ ಹರಳಯ್ಯನ ತಿಪ್ಪೇಗುಂಡಿಯ ಮೇಲೆ

ಕುಳಿತಿದ್ದ ಮಂಟೇದಲ್ಲಮನ ಬಳಿಗೆ ಬಂದು ತಮ್ಮ ಮಹಾಮನೆಗೆ ಆಹ್ವಾನಿಸುತ್ತಾರೆ. ಆಗ ಮಂಟೇಸ್ವಾಮಿ ತೋರುವ ಪವಾಡಗಳಿಂದ ಬಸವಣ್ಣನಿಗೆ ಅರಿವಾಗಿ ಜ್ಞಾನದ ಅಹಂಕಾರ ಅಳಿಯುತ್ತದೆ. ಹೀಗೆ ಬಸವಣ್ಣನಿಗೆ ಇದ್ದ ಜ್ಞಾನದಹಂಕಾರವನ್ನು, ಆಧ್ಯಾತ್ಮಿಕ ಮದವನ್ನು[7] ಅಲ್ಲಮ ಸ್ವರೂಪಿ ಮಂಟೇಸ್ವಾಮಿ ಕಳೆಯುತ್ತಾರೆ. ಸಿದ್ದಯ್ಯನವರು ಇದನ್ನೇ ತಮ್ಮ ಕಾವ್ಯದಲ್ಲಿ 'ಶಿರವ ತರಿದು ಮೆರೆವ ಮಂಟೇದ ಸ್ವಾಮಿಯಂತೆ' ಎಂದು ಅಲ್ಲಮನನ್ನು ಸಮೀಕರಿಸಲಾಗಿರುವ ಜಾನಪದ ಕಾವ್ಯವೊಂದಿಗೆ ಅನುಸಂಧಾನಿಸಿದ್ದಾರೆ.

ಸಿದ್ದಯ್ಯನವರು ತಮ್ಮ ಕಾವ್ಯವನ್ನು ಮುಂದುವರೆಸುತ್ತಾ,

> ಶಬ್ದವೆಂಬುದು ಅರ್ಧ
> ಅರ್ಥವೆಂಬುದು ಅರ್ಧ
> ಶಬ್ದಾರ್ಥವೆಂಬುದು ಅಪೂರ್ಣ
> ಪೂರ್ಣವು ಅಪೂರ್ಣದಲ್ಲಿ
> ಅಪೂರ್ಣವು ಪೂರ್ಣದಲ್ಲಿ
> : : : : : : : : : : : : : : : : : (ಪುಟ 4–5)

ಎಂದು ಹೇಳುತ್ತಾರೆ. ಈ ಸಾಲುಗಳು ಮತ್ತೆ ಅಲ್ಲಮನ ಚಿಂತನಾಧಾರೆಯನ್ನೇ ಭಿನ್ನವಾಗಿ ಹೇಳುತ್ತಿವೆ. ಇಲ್ಲಿ ಶಬ್ದವೆಂಬುದು ಅರ್ಧ ಮಾತ್ರ, ಅದು ಪೂರ್ಣವಾದುದ್ದಲ್ಲ, ಅಪೂರ್ಣವಾದುದು ಎಂದು ಕವಿ ಹೇಳುತ್ತಿದ್ದಾರೆ. ಇದು ಅಲ್ಲಮನು ಶೂನ್ಯ ಮೀಮಾಂಸೆಯನ್ನು ಹೇಳುವಾಗ ನಿಶೂನ್ಯ ಕಲ್ಪನೆಯನ್ನು ಬಳಸಿಕೊಳ್ಳುವ ರೀತಿಯದ್ದಾಗಿದೆ. ಇಲ್ಲಿ ಕೆ.ಎಸ್.ನ ಅವರ 'ಇಷ್ಟು ಬೆಳಕಿಗಿನ್ನೆಷ್ಟು ಕತ್ತಲೆಯೋ ಅರಿವಿನಾಳಗಹನ' ಎಂಬ ಮಾತನ್ನು ಈ ಹಿನ್ನೆಲೆಯಲ್ಲಿ ನೋಡಬಹುದಾಗಿದೆ.

ಅಲ್ಲಮ ತನ್ನ ಒಂದು ವಚನದಲ್ಲಿ –

> ಜ್ಞಾನವೆಂಬ ಕಾಯವ ಹಿಡಿದು ನಿಶೂನ್ಯವೆಂಬ ತೇಜದಲ್ಲಿ ಸುಟ್ಟವನ,
> ನಿಶೂನ್ಯವೆಂಬ ಶಬ್ದವ ಸುಟ್ಟು ಭಸ್ಮವ ಧರಿಸಿದ ಲಿಂಗೈಕ್ಯನ(968)

ಎಂದು ಹೇಳುತ್ತಾನೆ. ಈ ವಚನವು ಶಬ್ದವೆಂಬುದು ಶೂನ್ಯ ಅಥವಾ ಪೂರ್ಣವಾದ ಕಲ್ಪನೆಯಲ್ಲ ಎಂದು ಹೇಳುತ್ತಿರುವುದನ್ನು ಕಾಣಬಹುದಾಗಿದೆ. ಶಬ್ದವೆಂಬುದು ಪರಿಪೂರ್ಣ ಸ್ಥಿತಿಯಲ್ಲ ಅದು ಅಪೂರ್ಣವಾದದ್ದು, ನಿಶೂನ್ಯವಾದದ್ದು ಎಂದು ವಚನ ಹೇಳುತ್ತದೆ. ಹಾಗೆಯೇ ಈ ಶೂನ್ಯವು ನಿಶೂನ್ಯದಲ್ಲಿ, ನಿಶೂನ್ಯವು ಶೂನ್ಯದಲ್ಲಿ ಲೀನವಾಗುವ ಸ್ಥಿತಿಯನ್ನು ಅಲ್ಲಮನ ಮತ್ತೊಂದು ವಚನ ನಿರೂಪಿಸುತ್ತದೆ.

'ದೇವದಾನವ ಮಾನವರೆಲ್ಲ ಈ ಬಾಣಕ್ಕೆ ಗುರಿಯಾಗಿ ಬಿದ್ದುದ ಕಂಡೆ; ಗೋಗೇಶ್ವರನೆಂಬ ಶೂನ್ಯ ನಿಶೂನ್ಯದೊಳಗೆ'(791) ಎಂದು ಅಲ್ಲಮ ಶೂನ್ಯ-ನಿಶೂನ್ಯಗಳು ಲೀನವಾದ ಸ್ಥಿತಿಯನ್ನು, ಐಕ್ಯವಾದ ಸ್ಥಿತಿಯನ್ನು ಹೇಳುತ್ತಿದ್ದಾನೆ. ಅದನ್ನೇ ಸಿದ್ದಯ್ಯನವರು 'ಪೂರ್ಣ ಅಪೂರ್ಣದಲ್ಲಿ, ಅಪೂರ್ಣ ಪೂರ್ಣದಲ್ಲಿ' ಎಂದು ಹೇಳುತ್ತಿರುವುದಾಗಿದೆ.

ಸಿದ್ದಯ್ಯನವರು ಈ 'ಗಲ್ಲೆಬಾನಿ' ಕಾವ್ಯದಲ್ಲಿ ಕತ್ತಲಿನ ಪ್ರತಿಮೆಯನ್ನು ಹೆಚ್ಚಾಗಿ ಬಳಸುತ್ತಾರೆ. ಯಾವುದನ್ನು ಕತ್ತಲೆ-ಬೆಳಕು ಪ್ರತಿಮೆಗಳನ್ನು ಅಲ್ಲಮ ತನ್ನ ವಚನಗಳಲ್ಲಿ ಬಳಸುತ್ತಾನೋ ಅದನ್ನು ಸಿದ್ದಯ್ಯನವರೂ ಅನುಸರಿಸುತ್ತಾರೆ.

ಕತ್ತಲನು ಎಚ್ಚೆತ್ತು
ಜಗಜ್ಯೋತಿಯ ಕತ್ತುಹಿಸುಕಿ
ಕತ್ತಲು ಬೀಜ ಬಿತ್ತಿ
ಕತ್ತಲನೆ ಬೆಳೆದು
ಕತ್ತಲನೆ ಕೊಯ್ಯುವ
ಕತ್ತಲುಗಾರ
ಅಂತರಂಗದ ಪರಂಜ್ಯೋತಿ
ಬೆಳಗೋ(ಪುಟ 8)

ಇಲ್ಲಿ ಅಸ್ಪೃಶ್ಯ ಪ್ರಜ್ಞೆಯೆಂಬ ಅವಮಾನದ ಕತ್ತಲು, ವ್ಯಕ್ತಿಯ ಅಂತರಂಗದಲ್ಲಿ ಆವರಿಸಿದೆ. ಇದಕ್ಕೆ ಸಮಾಜವು ಇವರನ್ನು ಸಾಮೂಹಿಕವಾಗಿ ದೂರವಿರಿಸಿರುವ ಮೂಲಕ ಶೋಷಣೆಯನ್ನು ಎಸಗುತ್ತಿರುವ ಕ್ರಮವೇ ಕಾರಣವಾಗಿದೆ. ಈ ಅಂತರಂಗದ ಕತ್ತಲೆಂಬ ಅಜ್ಞಾನವನ್ನು ದೂರವಾಗಿಸು ಎಂದು ಪ್ರಾರ್ಥಿಸುತ್ತಿದ್ದಾರೆ. ಕತ್ತಲೆ ಎನ್ನುವುದನ್ನು ಅಜ್ಞಾನದ ಸಂಕೇತವಾಗಿ ಅಲ್ಲಮನೂ ಅನೇಕ ವಚನಗಳಲ್ಲಿ ಬಳಸಿದ್ದಾನೆ. ಕತ್ತಲೆ-ಬೆಳಕಿನ ದಟ್ಟ ಪ್ರತಿಮೆಗಳ ಬಳಕೆಯೇ ಅವನ ಬಹುಮುಖ್ಯ ವಚನಗಳ ಬೆಡಗಾಗಿದೆ.

ಅಪರಿಮಿತದ ಕತ್ತಲೆಯೊಳಗೆ
ವಿಪರೀತದ ಬೆಳಗನಿಕ್ಕಿದವರಾರೋ?
ಬೆಳಗೂ ಅದೆ, ಕತ್ತಲೆಯೂ ಅದೆ!
ಇದೇನು ಚೋದ್ಯವೋ? ಒಂದಕ್ಕೊಂದಂಜದು.
ಆನೆಯು ಸಿಂಹವೂ ಒಂದಾಗಿ ಉಂಬುದ ಕಂಡು
ಬೆರಗಾದೆನು ಕಾಣಾ ಗುಹೇಶ್ವರ.(499)

ಎಂದು ಅಲ್ಲಮ ಕತ್ತಲೆ-ಬೆಳಕಿನ ಬಗ್ಗೆ ಮಾತನಾಡುತ್ತಾನೆ. 'ಕತ್ತಲ ಮಱೆಯಲ್ಲಿ ಕಾಣರು ನೋಡಾ!'(84) ಎಂದು ಅಜ್ಞಾನ ಆವರಿಸಿದಾಗ ತತ್ವವೆಂಬ ಜ್ಞಾನವು ಕಾಣದಿರುವ ಬಗ್ಗೆ

ಹೇಳುತ್ತಾನೆ. ಮತ್ತೊಂದು ವಚನದಲ್ಲಿ 'ಕತ್ತಲೆ ಬೆಳಗಾಯಿತ್ತ ಕಂಡೆ'(439) ಎಂದು ಅಜ್ಞಾನದ ತಮಂಧ ಹರಿದು ಜ್ಞಾನದ ಮಹಾಬೆಳಕಾದದ್ದನ್ನು ಕಂಡೆನೆಂದು ಹೇಳುತ್ತಾನೆ.

'ಗಲ್ಲೆಬಾನಿ' ಕಾವ್ಯದ ಮೇಲಿನ ಸಾಲುಗಳಲ್ಲಿ ಕತ್ತಲೆಯನ್ನು ಹೇಳುವ ಮೂಲಕ ಮತ್ತೆ ಸಿದ್ದಯ್ಯನವರು ಜಾನಪದ ಮಹಾಕಾವ್ಯವಾದ ಮಂಟೇಸ್ವಾಮಿ ಕಾವ್ಯದ ತಿರುಳನ್ನು ಬಳಸಿಕೊಳ್ಳುತ್ತಿದ್ದಾರೆ. ಅಲ್ಲಮನನ್ನು ಶೂನ್ಯ ಸಂಪಾದನೆ ಹಾಗೂ ಮಂಟೇಸ್ವಾಮಿ ಕಾವ್ಯ ಇವೆರಡೂ 'ಪರಂಜ್ಯೋತಿ' ಎಂಬ ಬಿರುದಿನಿಂದ ಸಂಬೋಧಿಸಿವೆ,[8] ಸ್ತುತಿಸಿವೆ. ಮಂಟೇಸ್ವಾಮಿ ಕಾವ್ಯದಲ್ಲಿ 'ಜಗಂಜ್ಯೋತಿ', 'ಪರಂಜ್ಯೋತಿ' ಎಂದು ನಾನಾಕಡೆಗಳಲ್ಲಿ ಕರೆದಿರುವುದನ್ನು ಕಾಣಬಹುದಾಗಿದೆ. ಭೂಮಿಗೆ ಭಿನ್ನಭೇದವಿಲ್ಲದಂತೆ ಉರಿವ ಪರಂಜ್ಯೋತಿಯನ್ನು ತಂದವರು ಅಲ್ಲಮಪ್ರಭುದೇವರು ಅವರೇ ಮಂಟೇಸ್ವಾಮಿ ಎಂದು ಮಂಟೇಸ್ವಾಮಿ ಕಾವ್ಯ ಹೇಳುತ್ತದೆ.[9] ಅಲ್ಲಮ ಸ್ವರೂಪಿ ಮಂಟೇಸ್ವಾಮಿಯವರು ಬೆಳಕಿನ ಮಿಣುಕು ಹುಳವಾಗಿ ಈ ಲೋಕಕ್ಕೆ ಬರುತ್ತಾರೆ ಎನ್ನುವ ಕಲ್ಪನೆಯನ್ನು ಈ ಜಾನಪದ ಮಹಾಕಾವ್ಯ ತಿಳಿಸುತ್ತದೆ.[10] ಗಲ್ಲೆಬಾನಿ ಕಾವ್ಯವು 'ಅಂತರಂಗದ ಪರಂಜ್ಯೋತಿ ಬೆಳಗೋ ಎಂದು ಹೇಳುತ್ತದೆ. ಇಲ್ಲಿ ಮಂಟೇಸ್ವಾಮಿ ಕಾವ್ಯದ ಮೇಲಿನ ತಾತ್ವಿಕ ಕಲ್ಪನೆಯನ್ನು ಬಳಸಿಕೊಳ್ಳುತ್ತಿದೆ. ಮಂಟೇಸ್ವಾಮಿ ಕಾವ್ಯದ ಮೂಲಕ ಸಿದ್ದಯ್ಯನವರು ತಮ್ಮ ಕಾವ್ಯದಲ್ಲಿ ಅಲ್ಲಮನನ್ನು ಅನುಸಂಧಾನಿಸುವ ಪ್ರಯತ್ನ ಮಾಡಿದ್ದಾರೆ.

ಸ್ವರ್ಗ ನರಕಗಳೆಂಬ ದ್ವಯವನಳಿದು
ಅದ್ವಯವೆಂದರಿತು
ಕರೆದುಕೊ ರುದ್ರ (ಪುಟ 23-24)

ಎಂದು ಕವಿ ಸಿದ್ದಯ್ಯನವರು ಕಾವ್ಯದಲ್ಲಿ ಹೇಳುತ್ತಾರೆ. ಇಲ್ಲಿ ದ್ವೈತದಿಂದ ಅದ್ವೈತವಾಗುವ ಕ್ರಿಯೆಯನ್ನು ಕುರಿತು ಹೇಳುತ್ತಾರೆ. ಎರಡೆಂಬುದು ಅಳಿದು ಒಂದೇ ಆಗುವ, ಒಂದರಲ್ಲಿ ಮತ್ತೊಂದು ಐಕ್ಯಗೊಳ್ಳುವ ಸ್ಥಿತಿಯನ್ನು ಕುರಿತು ಹೇಳುತ್ತಾರೆ. ಇದು ಅಲ್ಲಮನು ಹೇಳುವ ಅದ್ವೈತದ ಮಾದರಿಯೇ ಆಗಿದೆ.

ಉಪಾಧಿಕ ಮನವು, ಉಪಾಧಿರಹಿತ ಮನವು
ನಿಂದಲ್ಲಿಯೆ ನಿವಾತವಾಯಿತ್ತು
ಆನಂದಭಾವವು ಬಿಂದು ತಾನುಳಿದು ನಿಂದಲ್ಲಿಯೆ ನಿವಾತವಾಯಿತ್ತು
ಲಿಂಗ ಉದಯ ಪ್ರಜ್ವಲಿಸುತ್ತಿದೆ
ಗುಹೇಶ್ವರನೆಂಬ ಲಿಂಗ ತಾನೆಯಾಗಿ.(669)

ಈ ವಚನದಲ್ಲಿ ಅಲ್ಲಮ ತನ್ನ ಅದ್ವಯ ಚಿಂತನೆಯನ್ನು ಕುರಿತು ಹೇಳಿದ್ದಾನೆ. ಅಲ್ಲಮನಲ್ಲಿ ಗುಹೇಶ್ವರ ಲಿಂಗ ಮತ್ತು ತಾನು ಎರಡೂ ಒಂದೇ ಆಗುವುದು ಅದ್ವಯದ

ಸ್ಥಿತಿಯಾಗಿದೆ. ಅದಕ್ಕೆ ' ಗುಹೇಶ್ವರನೆಂಬ ಲಿಂಗ ತಾನೆಯಾಗಿ' ಎಂದು ಹೇಳುತ್ತಾನೆ. 'ನೀ ನಾನೆಂಬುದು ಮಾದು ತಾನೆಯಾಗಿ ಸಾಧ್ಯವಾಯಿತ್ತು'(938) ಎನ್ನುವ ಸಾಲನ್ನುಳ್ಳ ಇನ್ನೊಂದು ವಚನದಲ್ಲಿ ಅದೇ ಆಶಯವನ್ನು ಮುಂದುವರೆಸುತ್ತಾನೆ.

ಅಲ್ಲಮ ಮತ್ತೊಂದು ವಚನದಲ್ಲಿ 'ಜ್ಞಾನ ಶೂನ್ಯದಲಡಗಿದ ಘನವನೇನೆಂಬೆ ಗುಹೇಶ್ವರ'(672) ಎಂದು ಜ್ಞಾನವು ಶೂನ್ಯದಲ್ಲಿ ಐಕ್ಯವಾದ ಸ್ಥಿತಿಯನ್ನು ಹೇಳುತ್ತಾನೆ. ಅಲ್ಲಮನ ಅದ್ವಯದ ಕಲ್ಪನೆಯೇ ಬೇರೆಯದ್ದಾಗಿದೆ. ಕೆಲವೊಮ್ಮೆ ತಾನು ಹೇಳಿದ ಅದ್ವಯವನ್ನು ನಿರಾಕರಿಸುವ ಹಂತವನ್ನು ತಲುಪಿಬಿಡುತ್ತಾನೆ. ಒಂದು ಬಾರಿ 'ಅದ್ವೈತವ ನುಡಿದು ಅಹಂಕಾರಿಯಾದೆನಯ್ಯ'(85) ಎಂದರೆ,

ಬಾಯೆ ಭಗವಾಗಿ, ಕೈಯೆ ಇಂದ್ರಿಯವಾಗಿ
ಹಾಕುವ ತುತ್ತುಗಳೆಲ್ಲಾ ಬಿಂದು ಕಾಣಿರೋ!
ಪ್ರಥಮ ವಿಷಯವಿಂತಿರಲು ಗುಹೇಶ್ವರ, ಏಕೋ ಅದ್ವೈತ?(469)

ಎಂದು ಮತ್ತೊಮ್ಮೆ ಅದ್ವೈತವನ್ನೇ ಪ್ರಶ್ನಿಸುತ್ತಾನೆ.

ಅಣು ಅಣುವಿನ ಗುಣ ಚರಿತೆ ಅರಿತು
ಹೊತ್ತು ಹೊತ್ತು ಸಾಗಿಸುತ್ತವೆ
ಈ ಇರುವೆಗಳು
ಅರಿವಿನ ಗುಹೆಯೊಳಗೆ
ಇರುವೆಗಾಗಿ (ಪುಟ 31)

ಕಾವ್ಯದಲ್ಲಿ ಸಿದ್ದಯ್ಯನವರು ಅರಿವಿನ ಸ್ವರೂಪವನ್ನು ಕುರಿತು ಮಾತನಾಡುವಾಗ ಇರುವೆಯ ಗುಣ ಸ್ವಭಾವದ ಜೊತೆಗೆ ಹೇಳುತ್ತಾರೆ. ಇಲ್ಲಿ ಜ್ಞಾನದ, ಅರಿವಿನ ಸಂಕೇತವಾಗಿ ಬಳಕೆಯಾಗುತ್ತಿದೆ. ಇರುವೆಗೆ ವಸ್ತುವಿನ ಗುಣವನ್ನು ತಿಳಿಯುವ ಶಕ್ತಿಯಿದ್ದು, ಆ ಗುಣದಿಂದ ಅವಶ್ಯಕ ವಸ್ತುವನ್ನು ಹೊತ್ತು ಸಾಗಿಸಿ ಶೇಖರಿಸುತ್ತವೆ. ಅಲ್ಲಮನಲ್ಲಿಯೂ ಕೂಡ ಈ ಇಱುವೆ(ಹೆ)ಯು ಜ್ಞಾನದ ಮತ್ತು ಮಹಾಜ್ಞಾನದ ಸಂಕೇತವಾಗಿ ಬಳಕೆಯಾಗಿದೆ.

ಊರ ಹೊಱಗೊಂದು ದೇಗುಲ
ದೇಗುಲದೊಳಗೊಬ್ಬ ಗೊರತಿ ನೋಡಯ್ಯ
ಗೊರತಿಯ ಕೈಯಲ್ಲಿ ಸೂಜಿ
ಸೂಜಿಯ ಮೊನೆಯಲ್ಲಿ ಹದಿನಾಲ್ಕು ಲೋಕ
ಗೊರತಿಯ, ಸೂಜಿಯ,
ಹದಿನಾಲ್ಕು ಲೋಕವನೊಂದಿಱುಹೆ ನುಂಗಿತ್ತ ಕಂಡೆ ಗುಹೇಶ್ವರ.(431)

ಈ ವಚನದಲ್ಲಿ ಅಲ್ಲಮ ಇಱುಹೆಯನ್ನು ಮಹಾಜ್ಞಾನದ ಸಂಕೇತವಾಗಿ ಬಳಸುತ್ತಾನೆ. 'ಹದಿನಾಲ್ಕು ಲೋಕವನೊಂದಿಱುಹೆ ನುಂಗಿತ್ತ ಕಂಡೆ' ಎಂದು ಹೇಳುವಾಗ ಮನಸ್ಸು, ಜ್ಞಾನಶಕ್ತಿ, ಲೋಕಗಳನ್ನು, ಮಹಾಜ್ಞಾನವು ಆವರಿಸಿರುವ, ತನ್ನ ಅಧೀನಕ್ಕೆ ತೆಗೆದುಕೊಂಡು ಸ್ಥಿತಿಯನ್ನು ಹೇಳುತ್ತಾನೆ. ಅಲ್ಲಮ ತನ್ನ ಮತ್ತೊಂದು ವಚನದಲ್ಲಿಯೂ ಇಱುಹೆಯನ್ನು ಜ್ಞಾನದ ಸಂಕೇತವಾಗಿ ಬಳಸಿರುವುದನ್ನು ಕಾಣಬಹುದಾಗಿದೆ. 'ಒಟ್ಟೆಯ ಮರಿ ಮೂಱೊಟ್ಟೆಯನಿಕ್ಕಿತ್ತು, ಕಟ್ಟುಗ್ರದಿಱುಹೆ ಕತ್ತಲೆಯ ನುಂಗಿತ್ತು'(619) ಎಂದು ಹೇಳುತ್ತಾನೆ. ಇಲ್ಲಿ ಕತ್ತಲನ್ನು ಅಜ್ಞಾನಕ್ಕೂ, ಇಱುಹೆಯನ್ನು ಬೆಳಕು, ಜ್ಞಾನಕ್ಕೂ ಅನ್ವಯಿಸಿ ಹೇಳುತ್ತಾನೆ.

ಕಾವ್ಯದಲ್ಲಿ ಸಿದ್ದಯ್ಯನವರು ಅತೀ ಸಣ್ಣ ಜೀವಿಯೊಂದು ಸತ್ತ ದೊಡ್ಡ ದೇಹದ ಪ್ರಾಣಿಯ ಚೂರುಗಳನ್ನು ಕಿತ್ತುಕೊಂಡು ಹೋಗಿ ತಮ್ಮ ಗೂಡಿನೊಳಗೆ ಆಹಾರವನ್ನು ಶೇಖರಿಸುವ ಸಂಗತಿಯನ್ನು ಆಧ್ಯಾತ್ಮದ ವಿಚಾರವಾಗಿ ಕಂಡಿದ್ದಾರೆ. 'ಅರಿವಿನ ಗುಹೆಯೊಳಗೆ ಇರುವೆಗಾಗಿ' ಎನ್ನುವಲ್ಲಿ ತನ್ನ ತನದ ಸ್ವಅರಿವು, ಅಂತರಂಗದ ಅರಿವು ಎಂದಾದರೆ ಆ ಅರಿವಿನೊಳಗೆ ಇರುವ ಮಹಾಜ್ಞಾನ, ಆಧ್ಯಾತ್ಮದ ಜ್ಞಾನವಾಗುತ್ತದೆ ಎಂದು ಕವಿ ಅಭಿಪ್ರಾಯ ಪಡುತ್ತಾರೆ.

ಕಾವ್ಯವನ್ನು ಮುಂದುವರೆಸಿ ಸಿದ್ದಯ್ಯನವರು ಕಾಲಜ್ಞಾನ, ಪ್ರಳಯ, ಮಹಾಪ್ರಳಯದ ಬಗ್ಗೆ ಮಾತನಾಡುತ್ತಾರೆ.

ಕಾಲಜ್ಞಾನದ ಒಗಟು ಬಿಡಿಸುವನೆಂದು
ಕಾಲಜ್ಞಾನದೊಳಗಿಂದ ವಿಜ್ಞಾನ ಎದ್ದು
ಪ್ರಳಯಸೂತ್ರ ನಿರೂಪಿಸುವನೆಂದು
ಪ್ರಳಯ ಗರ್ಭದೊಳಗೆ ಮಹಾಪ್ರಳಯ ಎದ್ದು
ಕಾಲಜ್ಞಾನದ ಕಾಲು ಮುರಿದು
ವಿಜ್ಞಾನದ ಕೀಲು ಮುರಿದು
ದೇಶ ಕಾಲದ ಮೂಗು ಕೊಯ್ದು
ಈಡಾಡುವ ಕಾಲ
ಹೊಂಚು ಹಾಕುತ್ತಿದೆ ಬೆನ್ನ ಹಿಂದೆ (ಪುಟ 39)

ಕಾಲಜ್ಞಾನವೆಂಬ ಒಗಟನ್ನು ಬಿಡಿಸುತ್ತಾ ಹೋದಂತೆ ವಿಜ್ಞಾನವು ಜನ್ಮ ತಳೆಯುತ್ತದೆ. ಒಗಟನ್ನು ಬಿಡಿಸಿದಾಗ ದೊರಕುವ ಉತ್ತರವೇ ವಿಜ್ಞಾನವಾಗಿರುತ್ತದೆ. ಕಾಣದುದ್ದನ್ನು ಕಾಣುವ ಪ್ರಯತ್ನವೇ ಆವಿಷ್ಕಾರವಾಗುತ್ತದೆ ಎಂದು ಹೇಳುತ್ತಾರೆ. ಇವುಗಳ ಬಗ್ಗೆ ಅಲ್ಲಮ ತನ್ನ ವಚನಗಳಲ್ಲಿ ಚಿಂತನೆ ನಡೆಸಿದ್ದಾನೆ. ಕಾಲಚಕ್ರವೆಂಬ ಸುದೀರ್ಘ ವಚನವೊಂದರಲ್ಲಿ ಅಲ್ಲಮ ಕಾಲದ ವಿಚಾರವನ್ನು ಪ್ರಸ್ತಾಪಿಸಿದ್ದಾನೆ.

ಏಕಂ ಏಕವಾದ ವಸ್ತುವ ಲೋಕಾಲೋಕಂಗಳಱಿಯವು;
. . . .
. . . .
. . . .
ಈ ನಾಲ್ಕು ಯುಗಂಗಳು ಇಪ್ಪತ್ತೊಂದು ಬಾರಿ ತಿರುಗಿದಡೆ
ಸುರಪತಿಗೆ ಪರಮಾಯು; ಬ್ರಹ್ಮಂಗೆ ಜಾವ
ಅಷ್ಟಾಶೀತಿ ಸಹಸ್ರ ಋಷಿಯರು, ಸಾವಿರ ಬಾರಿ ತಿರುಗಿದಡೆ
ಬ್ರಹ್ಮಂಗೆ ಆಯುಷ್ಯ ನೂಱಪ್ಪುದು, ವಿಷ್ಣುವಿಂಗೆ ಜಾವವಪ್ಪುದು.
ಆ ವಿಷ್ಣುವಿನ ಒಂದು ದಿನದೊಳಗೆ ನಾಲ್ಕು ಬಾರಿ ಹುಟ್ಟಿ
ನಾಲ್ಕು ಬಾರಿ ಹೊಂದುವ ಬ್ರಹ್ಮನು; ಆದಿ ವಿಷ್ಣುವಿನ ಒಂದು ದಿನವಪ್ಪುದು
ಸಮಸ್ತ ಈರೇಳು ಭುವನಂಗಳೆಲ್ಲಾ ಭೂತ ಸಂಹಾರ;
ಅಂಥಾ ಭೂತಸಂಹಾರಗಳು ಹದಿನೆಂಟು ಲಕ್ಷವು
ಇಪ್ಪತ್ತೆಂಟು ಸಹಸ್ರ ವರುಷವಪ್ಪುದು – ಪೃಥ್ವಿಯೆಲ್ಲಾ ಜಲಪ್ರಳಯ;
ಅಂಥಾ ಜಲಪ್ರಳಯವೆಂಟು ಬಾರಿ ತಿರಿಗಿದಡೆ ವಿಷ್ಣುವಿಂಗೆ ಮರಣ,
ರುದ್ರಂಗೆ ನಿಮಿಷ, ರುದ್ರನ ಒಂದು ದಿನವಪ್ಪುದು
ಅತಳ ವಿತಳ ಸುತಳ ಮಹೀತಳ ರಸಾತಳ ತಳಾತಳ ಪಾತಾಳ
ಇಂತು ಕೆಳಗೇಳು ಭುವನಂಗಳು;
ಮೇಲೆ – ಸತ್ಯಲೋಕ, ಜನರ್ಲೋಕ, ತಪೋಲೋಕ,
ಮಹರ್ಲೋಕ, ಸುವರ್ಲೋಕ, ಭುವರ್ಲೋಕ, ಭೂಲೋಕ, ಮೊದಲಾಗಿ,
ಇಂತೀ ಲೋಕಾಲೋಕಂಗಳೆಲ್ಲ ಮುಳುಗಿ
ಮಹಾಪ್ರಳಯವಾದಲ್ಲಿ ರುದ್ರಲೋಕವೊಂದುಳಿಯೆ, ಆ ರುದ್ರಂಗೆ ಒಂದು ದಿನ
ಅಂಥಾ ದಿನ ಮುನ್ನೂಱಱವತ್ತು ಕೂಡಿದಡೆ ಒಂದು ವರ್ಷ
ಅಂಥಾ ವರುಷ ಶತಕೋಟಿ ಕೂಡಿದಡೆ ರುದ್ರಂಗೆ ಪರಮಾಯು
ಅಂಥಾ ರುದ್ರರು ಅನೇಕರು ಹೋದರಲ್ಲಾ!
ಮತ್ತಂ ಪಶುಪತಿ–ಶಂಕರ–ಶಶಿಧರ–ಸದಾಶಿವ–ಗೌರೀಪತಿ–ಮಹಾದೇವ–
ಈಶ್ವರೆಂಬುವರು ಆ ದಿನದಲ್ಲಿ ಇವರು ಪ್ರಥಮ ಗಣೇಶ್ವರರು;
ತಪೋ ರಾಜ್ಯವನುಂಬರು, ತಪಕ್ಕೆ ಬಿಜಯಂಗೈವರು. ಆ ರುದ್ರರು–
ಲೋಕಾಲೋಕಂಗಳು ಕೂಡಿ ಭೂತ ವರ್ತಿಸುತ್ತಿದ್ದಿತ್ತೊಂದು ಕೆಲವು ಕಾಲ–.
ಅದು ತೊಡೆದು ಹೋಯಿತ್ತು;
ಬಳಿಕ ಶೂನ್ಯ ವರ್ತಿಸುತ್ತಿದ್ದಿತ್ತೊಂದು ಕೆಲವು ಕಾಲ ಅದು ತೊಡೆದು ಹೋಯಿತ್ತು
ಬಳಿಕ ಕಾಳಾಂದರ ವರ್ತಿಸುತ್ತಿದ್ದಿತ್ತೊಂದು ಕೆಲವು ಕಾಲ–
ಅದು ತೊಡೆದು ಹೋಯಿತ್ತು; ಬಳಿಕ ಮಹಾಪ್ರಕಾಶದ ಬೆಳಗು;
ಇಂತಹ ಕಾಲಂಗಳು ಈ ಪರಿಯಲ್ಲಿ ತಿರುಗಿ ಬರುತ್ತಿಹವು ಕಾಣಿರೇ!
. . . .
. . . .
ಗುಹೇಶ್ವರ ಲಿಂಗ ನಿರಂಜನ ನಿರಾಳ. (654)

ಅಲ್ಲಮನ ವಚನಗಳಲ್ಲಿಯೇ ಕಾಲದ ಕುರಿತಾದ ಬಹುದೊಡ್ಡ ಮೀಮಾಂಸೆಯ ವಚನವಿದಾಗಿದೆ. ಈ ವಚನದಲ್ಲಿ ಅಲ್ಲಮ ಸುರಪತಿ, ಬ್ರಹ್ಮ, ವಿಷ್ಣು, ರುದ್ರರ ಆಯಸ್ಸು, ಸಪ್ತಲೋಕಗಳ ಆಯಸ್ಸು, ಪ್ರಳಯ ಹೊಸಸೃಷ್ಟಿ ಮುಂತಾದವುಗಳನ್ನು ಕುರಿತು ಹೇಳಿದ್ದಾನೆ.

ಪ್ರತಿಯೊಂದು ಕಾಲಗಳು ಅಳಿದು ಮತ್ತೆಮತ್ತೆ ತಿರುಗಿ ಬರುತ್ತಿರುತ್ತವೆ, ಮನರಾವರ್ತನೆಗೊಳ್ಳುತ್ತಿರುತ್ತವೆ ಎಂದು ಅಲ್ಲಮ ಹೇಳುತ್ತಾನೆ.

ಮೇಲಿನ ವಚನವನ್ನು ಓದಿದಾಗ ನನಗೆ ಈ ವರ್ತಮಾನದ ವೈಜ್ಞಾನಿಕಯುಗದಲ್ಲಿ ಚಿಂತನೆಯೊಂದು ಹೊಳೆಯುತ್ತಿದೆ. ಅದು ಈ ವಚನವು ಪೌರಾಣಿಕ ಲೋಕದಿಂದ ಜೀವಲೋಕದ ಕಡೆಗಿನ ಮಹಾಪ್ರಯಾಣದ ವಿವರವನ್ನು ಕೊಡುವುದಾಗಿದೆ. ವಿಜ್ಞಾನ, ಜೀವ ಉಗಮದ ಹಿಂದಿನ ಮೂಲ ಕಾರಣ ಮುಂತಾದವುಗಳನ್ನು ಈ ವಚನ ಒಳಗೊಂಡಿದೆ ಎಂದು ಹೇಳಬಹುದಾಗಿದೆ. ಅದರಲ್ಲೂ ಇಂದಿನ ವಿಜ್ಞಾನಿಗಳು ಹೆಚ್ಚು ಚಿಂತನ ಮಗ್ನರಾಗಿರುವ ಕಾರ್ಯ 'ಬಿಗ್‌ಬ್ಯಾಂಗ್' ಅಥವಾ 'ಮಹಾಸ್ಫೋಟ'ದ (ಜೀವ ಉಗಮದ ಹಿಂದಿನ ರಹಸ್ಯ ಅರಿಯುವುದರ) ಬಗ್ಗೆ ಸೂಕ್ಷ್ಮ ವಿವರವೊಂದನ್ನು ಕೊಡುತ್ತದೆ. ಜೀವಸೃಷ್ಟಿಯ ಮೊದಲು ಮಹಾಸ್ಫೋಟವೊಂದು ನಡೆದಿತ್ತು ಎಂಬ ವಿಜ್ಞಾನಿಗಳ ನಂಬಿಕೆಗೆ ಪೂರಕವಾಗಿ ಅಲ್ಲಮನ ಊಹೆಯನ್ನು ಈ ವಚನದಲ್ಲಿ ಕಾಣಬಹುದಾಗಿದೆ. ಇಲ್ಲಿನ 'ಮಹಾಪ್ರಕಾಶದ ಬೆಳಗು' ಇಂದಿನ ವೈಜ್ಞಾನಿಕ ಚಿಂತಕರು ನಡೆಸುತ್ತಿರುವ 'ಮಹಾಸ್ಫೋಟ'ವೇ ಆಗಿರಬೇಕೆಂದು ಅನಿಸುತ್ತದೆ. ಇಂದಿನ ವಿಜ್ಞಾನಿಗಳಿಗೆ ಇರುವ ಈ ಬಗೆಗಿನ ಚಿಂತನೆಯೇ ಹನ್ನೆರಡನೇ ಶತಮಾನದಲ್ಲಿದ್ದ ಅಲ್ಲಮನಿಗೂ ಈ ಮೊದಲೇ ಇತ್ತು ಎಂಬುದನ್ನು ಈ ವಚನದ 'ಬಳಿಕ ಮಹಾಪ್ರಕಾಶದ ಬೆಳಗು' ಎಂಬ ಸಾಲು ತಿಳಿಸಿಕೊಡುತ್ತದೆ. ಇದರಿಂದ ಅಲ್ಲಮ ವೈಜ್ಞಾನಿಕ ಚಿಂತಕನೂ ಆಗಿದ್ದ ಎಂಬುದನ್ನು ಮನಗಾಣಬಹುದಾಗಿದೆ. ಇಲ್ಲಿನ 'ಮಹಾಪ್ರಕಾಶದ ಬೆಳಗು' ಜೀವವಿಕಾಸದ ಆದಿಮೂಲವೇ ಆಗಿದೆ ಎಂದು ತಿಳಿಸುವ ಮೂಲಕ, ಇಂದಿನ ವೈಜ್ಞಾನಿಕ ಲೋಕಕ್ಕೆ ಪೂರಕ ಹೇಳಿಕೆಯೊಂದನ್ನು ನೀಡುವ ಬಹುಮುಖ್ಯವಾದ ವಚನ ಇದಾಗಿದೆ ಎಂದು ಭಾವಿಸಬಹುದಾಗಿದೆ.

ಮುಂದೆ ಗಲ್ಲೆಬಾನಿ ಕಾವ್ಯದಲ್ಲಿ ಕವಿ ಸಿದ್ದಯ್ಯನವರು ತಮ್ಮ 'ದಕ್ಲಕಥಾದೇವಿ' ಕಾವ್ಯದ ಏಳು ಮಂದೆಮ್ಮಗಳ ವಿಚಾರವನ್ನು ತರುತ್ತಾರೆ. ಹಾಗೆಯೇ ಅಸ್ಪೃಶ್ಯತೆ ಆಚರಣೆಯ ಘೋರ ಅನುಭವ ಕವಿಗೆ ಆಗಿರುವುದನ್ನು, ಅನುಭವಿಸಿದ ಅಪಮಾನ ಯಾತನೆಯನ್ನು ಇಲ್ಲಿ ವ್ಯಕ್ತಪಡಿಸುತ್ತಾರೆ.

ಏಳು ಮಂದೆಮ್ಮಗಳು ಕೂಡಿ
ಬರೆದ ಬರೆ ಎಳೆದ ಗೆರೆ
ಈ ಗೋಳಾಕಾರ
ಗೋಳುಸಿರು ನಿರಾಕಾರ
ಗೋಳುಸಿರು ಬಟ್ಟಂಬಯಲಲ್ಲಿ
ಹಸಿವು ಬೆತ್ತಲೆಸೇವೆ ನಿಟ್ಟುಸಿರು ಘನಪರೀಷೆ
ನಡೆಯುತ್ತಿದೆ.
ಒಣಮರಕ್ಕೆ ಗಿಣಿಕಚ್ಚಿದೆ

ಬೆಚ್ಚಿ ಬೆರಗಾಯ್ತು ನನ್ನೆದೆ (ಪುಟ 40)

ಯಾತನೆಯ ಕಹಿ ಅನುಭವಗಳೇ ತನ್ನ ಕಾವ್ಯದಲ್ಲಿ ಅಕ್ಷರರೂಪವನ್ನು ಪಡೆದುಕೊಂಡಿದೆ ಎಂಬುದನ್ನು 'ಮೌನ ಸತ್ತು ಅಕ್ಷರ ಪ್ರಾಣ ಧರಿಸಿತ್ತು, ಪಟ್ಟಪಾಡಿಗೆ ನಾನು ಸತ್ತು ಹುಟ್ಟಿದ್ದೆ ಹುಟ್ಟಿ ಸತ್ತಿದ್ದೆ' ಎಂಬ ಸಾಲುಗಳ ಮೂಲಕ ಕವಿ ತಿಳಿಸುತ್ತಾರೆ. ಮೇಲಿನ ಸಾಲುಗಳಲ್ಲಿನ ಗೋಳಾಕಾರ ಅಲ್ಲಮನ ಶೂನ್ಯವನ್ನು ನಿರಾಕಾರ ಅಮೂರ್ತತೆಯನ್ನು, ಬಟ್ಟಂಬಯಲು ಬಯಲಾಗುವಿಕೆಯನ್ನು ಹೇಳುತ್ತಿದೆ.

ಆಕಾರ ನಿರಾಕಾರವೆಂಬರಡೂ ಸ್ವರೂಪಂಗಳು;
ಒಂದು ಆಹ್ವಾನ, ಒಂದು ವಿಸರ್ಜನ;
ಒಂದು ವ್ಯಾಕುಳ, ಒಂದು ನಿರಾಕುಳ,
ಉಭಯ ಕುಳರಹಿತ ಗುಹೇಶ್ವರ, ನಿಮ್ಮ ಶರಣ ನಿಶ್ಚಿಂತನು (359)

ಆಕಾರ-ನಿರಾಕಾರವನ್ನು ಮೀರಿದ ಸ್ವರೂಪವನ್ನು ಕುರಿತು ಅಲ್ಲಮ ಮಾತನಾಡುತ್ತಾನೆ. ಆಕಾರ - ಮೂರ್ತತೆ ಬಗ್ಗೆ ಚಿಂತಿಸುವವರು ಯಾವಾಗಲೂ ಶೋಕಗ್ರಸ್ಥರಾಗಿರುತ್ತಾರೆ. ಅದೇ ನಿರಾಕಾರ – ಅಮೂರ್ತತೆಯನ್ನು ಒಪ್ಪಿಕೊಂಡವರು ಈ ಬಗೆಯ ಶೋಕದಿಂದ ದೂರವಿರುತ್ತಾರೆ, ಶಾಂತಿ-ನೆಮ್ಮದಿಯಿಂದ ಇರುತ್ತಾರೆ ಎನ್ನುವುದು ಅಲ್ಲಮನ ಅಭಿಪ್ರಾಯವಾಗಿದೆ. ಅಲ್ಲಮನು 'ಬಯಲಾಗುವುದು' ಎನ್ನುವುದನ್ನು ಒಂದು ಮುಖ್ಯ ಕ್ರಿಯೆ ಎಂದು ಭಾವಿಸುತ್ತಾನೆ. ಮನುಷ್ಯನಾದವನು ತನ್ನ ವಿಷಯಾಸಕ್ತಿ, ಅಹಂಕಾರವನ್ನು ಕಳೆದುಕೊಂಡು ಸ್ವ-ಅರಿವನ್ನು ಕಂಡುಕೊಂಡು ಶೂನ್ಯನಾಗಿ, ಪರಿಪೂರ್ಣನಾಗಿ ಮುಕ್ತಿಯನ್ನು ಹೊಂದುವುದು ಮುಖ್ಯವೆಂದು ತಿಳಿಸುತ್ತಾನೆ. 'ಹುಟ್ಟುಗೆಟ್ಟು ಬಟ್ಟ ಬಯಲಲ್ಲಿ ನಾನಿದೇನೆ ಗುಹೇಶ್ವರ'(99) ಎಂದು ಬಟ್ಟ ಬಯಲನ್ನು ಒಪ್ಪುವ ಸ್ಥಿತಿಯಲ್ಲಿ ಹೇಳಿದರೆ, ಮತ್ತೊಂದೆಡೆ ಅದೇ 'ಬಟ್ಟಬಯಲಲ್ಲಿ ಬಿದ್ದು ಕೆಟ್ಟೆನು ಗುಹೇಶ್ವರ'(545) ಎಂದು ನಿರಾಕರಿಸುವ ಸ್ಥಿತಿಯನ್ನು ಹೇಳುತ್ತಾನೆ. ವಿರುದ್ಧಾತ್ಮಕ ಹೇಳಿಕೆಯನ್ನು ಹಾಗು ವಿತಂಡವಾದವನ್ನು ಮಂಡಿಸುವುದೇ ಅಲ್ಲಮನ ವಿಶಿಷ್ಟತೆಯಾಗಿದೆ.

ಕಾವ್ಯದ ಮೇಲಿನ ಸಾಲುಗಳಲ್ಲಿ ಸಿದ್ದಯ್ಯನವರು 'ಒಣಮರಕ್ಕೆ ಗಿಣಿಕಚ್ಚಿದೆ, ಬೆಚ್ಚಿ ಬೆರಗಾಯ್ತು ನನ್ನೆದೆ' ಎಂದು ಹೇಳುವಾಗ ಹಸಿವು, ಶೋಷಣೆ, ನಿಟ್ಟುಸಿರು, ಅಸ್ಪೃಶ್ಯತೆಯ ಆಚರಣೆಯಿಂದಾದ ಅವಮಾನ ಇವುಗಳಿಂದ ಜೀವ ಚೈತನ್ಯವನ್ನು ಕಳೆದುಕೊಂಡಿದ್ದಾರೆ. ಆದ್ದರಿಂದ ಒಣಮರದ ಪ್ರತಿಮೆಯನ್ನು ಬಳಸುತ್ತಾರೆ. ಈ ಜೀವ ಚೈತನ್ಯವಿಲ್ಲದ ಸ್ಥಿತಿಯಿಂದಲೇ ಆಧ್ಯಾತ್ಮವೊಂದು ಉದಯಿಸುವುದನ್ನು ಕವಿ ಇಲ್ಲಿ ಗಿಣಿಯ ಪ್ರತಿಮೆಯನ್ನು ಬಳಸಿ ಹೇಳುತ್ತಿದ್ದಾರೆ. 'ಗಿಣಿ'ಯು ಅಲ್ಲಮನಲ್ಲಿ ಜೀವಾತ್ಮದ, ಪರಮಹಂಸದ ಪ್ರತಿಮೆಯಾಗಿ ಬಳಕೆಯಾಗುವ ಮೂಲಕ ಆಧ್ಯಾತ್ಮದ ಸಂಕೇತವಾಗಿ ಬಳಕೆಯಾಗುತ್ತದೆ.

ಅದ್ವೈತಿನ ಕರಸ್ಥಲದೊಳಗೆ ಅನಂತನೆಂಬ ಗಿಣಿ ಮೂರ್ತಿಗೊಂಡು
ಅತೀತ-ಅನಾಗತ-ವರ್ತಮಾನವೆಂಬ ಕೊಱತೆಕೂಳನುಂಡು
ಓದಿತ್ತು ಅಗಣಿತ ಪುರಾಣವ, ಅನಾಮಯ ಶಾಸ್ತ್ರವ ಅನುಪಮವೇದವ ಎಂದು
ನಿಸ್ಥಲವ ಸ್ಥಲವಿಡಲು ನಿರ್ಮಲಾತ್ಮಂಗೆ ಪರವಿಲ್ಲ
ಆದಿಮಧ್ಯಾಂತ ನಿರಾಳ ಗುಹೇಶ್ವರನ ಅನುಭವಿಗೆ ಸರ್ವಾಂಗ ಲಿಂಗವು.(597)

ಅಲ್ಲಮ ಈ ವಚನದಲ್ಲಿ ಗಿಣಿಯನ್ನು ಅಪ್ರಮಾಣದ ಪರಮಹಂಸದ ಸಂಕೇತವಾಗಿ ಬಳಸಿಕೊಂಡಿದ್ದಾನೆ. ಮತ್ತೊಂದು ವಚನದಲ್ಲಿ 'ಅಂಬರದೊಳಗಾಡುವ ಗಿಳಿ ಪಂಚರದೊಳಗಣ ಬೆಕ್ಕನುಂಗಿ, ರಂಭೆಯ ತೋಳಿಂದಗಲಿತ್ತು ನೋಡಾ ಗುಹೇಶ್ವರ'(36) ಎಂದು ಆಧ್ಯಾತ್ಮದ ನೆಲೆಯಿಂದ ಹೇಳುತ್ತಾನೆ.

ಅಲ್ಲಮನಲ್ಲಿ ಅಂತರಂಗ-ಬಹಿರಂಗದ ವ್ಯಾಖ್ಯಾನ ಅತ್ಯಂತ ಹೆಚ್ಚಾಗಿಯೇ ಆಗಿದೆ. ಅಲ್ಲಮ ಅಂತರಂಗ-ಬಹಿರಂಗವನ್ನು ಒಳಗೆ-ಹೊರಗೆ ಎಂಬುದಾಗಿ ಕಾಣುತ್ತಾನೆ.

'ತನು ಹೊಱಗಿರಲು ಪ್ರಸಾದ ಒಳಗಿರಲು, ಏನಯ್ಯ ನಿಮ್ಮ ಮನಕೆ ಮನ ನಾಚದು?'(253) ಎಂದು ಹೇಳಿದರೆ, ಇನ್ನೊಂದು ವಚನದಲ್ಲಿ 'ಅಂತರಂಗ ಲಿಂಗವಾಗಿ ಬಹಿರಂಗವೆಂತಂದಱಿಯದು, ಬಹಿರಂಗ ಲಿಂಗವಾಗಿ ಅಂತರಂಗದ ಸುದ್ಧಿಯನಱಿಯದು'(755) ಎಂದು ಒಂದನ್ನೊಂದು ಅರಿಯದ ಸ್ಥಿತಿಯನ್ನು ಕುರಿತು ಹೇಳುತ್ತಾನೆ.

ಸಿದ್ದಯ್ಯನವರು 'ಗಲ್ಲೆಬಾನಿ'ಯಲ್ಲಿ ಈ ಅಂತರಂಗ ಬಹಿರಂಗದ ವಿಚಾರವನ್ನು ಕುರಿತು ಮಾತನಾಡುತ್ತಾರೆ.

ನುಡಿದರೆ
ಬಸವ ನಿಜ ಅಂತರಂಗದಲ್ಲಿ
ಶಿವ ನಿಜ ಬಹಿರಂಗದಲ್ಲಿ
ಅಂತರಂಗ ಬಹಿರಂಗದ ಪ್ರಮೇಯ
ಅಪ್ರಮಾಣವೆಂದರಿತು
ಅರಿಯುವಂತೆ ನುಡಿಯಬೇಕು (ಪುಟ 43)

ಯಾವುದನ್ನು ಬಸವಣ್ಣ ಹುಸಿಯ ನುಡಿಯಲು ಬೇಡ ಎಂದು ಹೇಳುವ ಮೂಲಕ ನಿಜದ ಪ್ರತಿಪಾದನೆ ಮಾಡುತ್ತಾನೆಯೋ ಅದೇ ಕಾವ್ಯದಲ್ಲಿ ಬಸವನಿಜವಾಗಿದೆ. ಅಂತರಂಗ-ಬಹಿರಂಗವನ್ನು ಪ್ರಮಾಣವಲ್ಲದ ಸ್ಥಿತಿಯೆಂದು ಅರಿಯಬೇಕೆಂದು ಆಶಿಸಲಾಗಿದೆ. ಅಲ್ಲಮನೂ ಪ್ರಮಾಣ-ಅಪ್ರಮಾಣದ ಬಗ್ಗೆ ತನ್ನ ವಚನದಲ್ಲಿ ಚಿಂತಿಸಿದ್ದಾನೆ.

ನಾನೆಂಬುದು ಪ್ರಮಾಣ, ನೀನೆಂಬುದು ಪ್ರಮಾಣ
ಸ್ವಯವೆಂಬುದು ಪ್ರಮಾಣ, ಪರವೆಂಬುದು ಪ್ರಮಾಣ
ಪ್ರಮಾಣವೆಂಬುದು ಪ್ರಮಾಣ, ಗೂಹೇಶ್ವರನೆಂಬುದು ಅಪ್ರಮಾಣ!(1163)

ಈ ವಚನದಲ್ಲಿ ಗುಹೇಶ್ವರನನ್ನು ಅಪ್ರಮಾಣದವನೆಂದು ಕರೆದಿದ್ದಾನೆ. ಮತ್ತೊಂದು ವಚನದಲ್ಲಿ ವೇದ ಪ್ರಮಾಣಲ್ಲ, ಶಾಸ್ತ್ರ ಪ್ರಮಾಣಲ್ಲ, ಶಬ್ದ ಪ್ರಮಾಣಲ್ಲ ಕಾಣಿಭೋ ಲಿಂಗಕ್ಕೆ!(269) ಎಂದು ಇವ್ಯಾವುವೂ ಲಿಂಗಕ್ಕೆ ಪ್ರಮಾಣವಲ್ಲದ ಸ್ಥಿತಿಯನ್ನು ಕುರಿತು ಹೇಳುತ್ತಾನೆ.

ಸಿದ್ದಯ್ಯನವರು 'ಗಲ್ಲೆಬಾನಿ' ಕಾವ್ಯದ ಕೊನೆಯಲ್ಲಿ ಏಳುಮಂದೆಮ್ಮಗಳ ಪ್ರಾಣಪಕ್ಷಿ ಹಾರಿಹೋಗಿ ಪ್ರಳಯ ಪ್ರವಾಹದಲ್ಲಿ ಕಾಗದದ ದೋಣಿಯಾಗಿ ಈಜುತ್ತಿರುವ ಸೋಜಿಗದ ಚಿತ್ರಣವನ್ನು ಕೊಡುತ್ತಾರೆ. ಜೀವಕ್ಕೆ ಆಕಾರವಿಲ್ಲ ಅದು ನಿರಾಕಾರದ ಸ್ಥಿತಿ. ಆದರೆ ಈ ನಿರಾಕಾರದ ಜೀವ ಆಕಾರದಲ್ಲಿ ಐಕ್ಯಗೊಂಡಾಗ ಅಸಾಧ್ಯವಾದದ್ದನ್ನು ಸಾಧ್ಯವಾಗಿಸುವ ಆಶಯವನ್ನು ಕವಿ ವ್ಯಕ್ತಪಡಿಸುತ್ತಾರೆ. ಈ ಅಸಾಧ್ಯವಾದದ್ದು ಸಾಧ್ಯಗೊಳ್ಳುವ ಪ್ರಕ್ರಿಯೆಯೇ ಆಧ್ಯಾತ್ಮದ ಕಾಣ್ಕೆ ಎಂದು ಕವಿ ಭಾವಿಸುತ್ತಾರೆ.

ಸಂಸಾರವ ಹೆಣವ
ಸೊಂಟಕ್ಕೆ ಕಟ್ಟಿಕೊಂಡು
ಪಾತಾಳಕ್ಕೆ ಬಿದ್ದರು
ಪಾತಾಳದಾಳಕ್ಕೆ ಪಾತಾಳಗರಡಿ
ಬಿಟ್ಟು ತಡಕಿದರು
ಪದ ಪದಾರ್ಥಗಳ ಪ್ರಭುತ್ವದ ಪಾದಕ್ಕೆ
ಅರ್ಪಿಸಿದರು
ಪ್ರಭುವೇ ಪ್ರಭುವೇ ಪ್ರಭುವೇ
ನೀನೇ ಗತಿ ಎಂದಾಲಾಪಿಸಿದರು. (ಪುಟ 45-46)

ಕಾವ್ಯದ ಈ ಸಾಲುಗಳಲ್ಲಿ ಅಲ್ಲಮನ ಆಶಯವನ್ನೇ ಕವಿಯೂ ಅನುಸರಿಸುತ್ತಾರೆ. ಸಂಸಾರವನ್ನು ಹೆಣಕ್ಕೆ ಹೋಲಿಸುತ್ತಾರೆ. ಭೂಮಿಯಲ್ಲಿನ ಮನುಷ್ಯ ಜೀವಿಗಳು ದುಃಖಸಾಗರದಲ್ಲಿ ಮುಳುಗುತ್ತಾ ಎದ್ದೇಳುತ್ತಿದ್ದಾರೆ ಕಾರಣ ಈ ಸಂಸಾರವೆಂಬ ಹೆಣವನ್ನು ಸೊಂಟಕ್ಕೆ ಕಟ್ಟಿಕೊಂಡಿದ್ದಾರೆ ಎಂದು ಹೇಳುವ ಮೂಲಕ ಕವಿ ಇಲ್ಲಿ ಆಧ್ಯಾತ್ಮಿಕ ಅರ್ಥವೊಂದನ್ನು ಕಟ್ಟಲು ಪ್ರಯತ್ನಿಸುತ್ತಿದ್ದಾರೆ. ಇಂದಿನ ಆಧುನಿಕ ಯುಗದಲ್ಲಿ ತಮ್ಮ ಸಂಸ್ಕೃತಿಯ ಮೂಲಬೇರುಗಳನ್ನು ಹುಡುಕುವ ಮತ್ತು ಆ ಸಂಸ್ಕೃತಿಯ ಒಡಲಲ್ಲಿದ್ದ ಅನೇಕ ಯಾತನೆಗಳಿಂದ ಆಧ್ಯಾತ್ಮವೊಂದನ್ನು ಕವಿ ವ್ಯಾಖ್ಯಾನಿಸಲು ಪ್ರಯತ್ನಿಸಿದ್ದಾರೆ. ಈ ನಿಟ್ಟಿನಲ್ಲಿ ಕವಿ ಅಲ್ಲಮನನ್ನು ತಮ್ಮ ಗುರುವೆಂದು ಭಾವಿಸಿದಂತಿದೆ. ಅಲ್ಲಮನ ಸಂಸಾರ ಮೀಮಾಂಸೆಯನ್ನು ಈ ವಚನದಲ್ಲಿ ಕಾಣಬಹುದಾಗಿದೆ.

ಸಂಸಾರವೆಂಬ ಹೆಣ ಬಿದ್ದಿರೆ
ತಿನ ಬಂದ ನಾಯ ಜಗಳವ ನೋಡಿರೇ!
ನಾಯ ಜಗಳವ ನೋಡಿ ಹೆಣನೆದ್ದು ನಗುತ್ತಿದೆ
ಗುಹೇಶ್ವರನೆಂಬ ಲಿಂಗವಲ್ಲಿಲ್ಲ ಕಾಣಿರೇ! (46)

ಅಲ್ಲಮ ಸಂಸಾರವೆಂಬುದನ್ನು ಹೆಣವೆಂದು ಕರೆದು ಸಂಸಾರದ ಇಂದ್ರಿಯಾತ್ಮಕ ಹಸಿವಿನಿಂದ ಹೊರಬರುವಂತೆ ಹೇಳುತ್ತಾನೆ. ಇಲ್ಲಿ ಸಂಸಾರದಾಚೆಗೂ ಜ್ಞಾನದಾಹಿಗಳಾಗಬೇಕೆಂಬ ಆಶಯವನ್ನು ವ್ಯಕ್ತಪಡಿಸುತ್ತಿದ್ದಾನೆ. ವ್ಯಕ್ತಿಗೆ ತನ್ನ ಸ್ವ–ಅರಿವಿಲ್ಲದೆ ಎಲ್ಲವೂ ಭಾರವಾಗುವ ಸ್ಥಿತಿಯನ್ನು ಅಲ್ಲಮ ಹೇಳುತ್ತಾನೆ. ಸಂಸಾರವನ್ನು ಹೆಣ ಎಂದು ಕರೆಯುವ ಅಲ್ಲಮನ ತತ್ವವನ್ನೇ ಸಿದ್ದಯ್ಯನವರು ತಮ್ಮ ಕಾವ್ಯದಲ್ಲಿ ಬಳಸಿಕೊಂಡಿದ್ದಾರೆ. ಹಾಗೆಯೇ ಅಲ್ಲಮನು 'ಪದವನರ್ಪಿಸಬಹುದಲ್ಲದೆ ಪದಾರ್ಥವನರ್ಪಿಸಬಾರದು'(172) ಎಂದು ತನ್ನ ಒಂದು ವಚನದಲ್ಲಿ ಅಭಿಪ್ರಾಯ ಪಡುತ್ತಾನೆ. ಇದನ್ನೂ ಕೂಡ ಇಲ್ಲಿ ಬಳಸಿಕೊಳ್ಳಲಾಗಿದೆ. ಆ ಮೂಲಕ ಸಿದ್ದಯ್ಯನವರು ಅಲ್ಲಮನನ್ನು ಅನುಸಂಧಾನಿಸಿದ್ದಾರೆ.

ಟಿಪ್ಪಣಿಗಳು

1. ಅರವಿಂದ ಮಾಲಗತ್ತಿ: (ಸಂ) ದಲಿತ ಮಾರ್ಗ,
   ನೋಡಿ : ಕಿ.ರಂ.ನಾಗರಾಜನವರ ಲೇಖನ: ಕೆ.ಬಿ.ಸಿದ್ದಯ್ಯನವರ 'ಬಕಾಲ', ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2002, ಪುಟ 304
2. ಅದೇ ಪುಟ 304
3. ಅದೇ ಪುಟ 306
4. ಕೆ.ಬಿ.ಸಿದ್ದಯ್ಯ : ಅನಾತ್ಮ, ಸಿದ್ಧಾರ್ಥ ಪ್ರಕಾಶನ, ತುಮಕೂರು, ಪುಟ 2
5. ನೋಡಿ – ಡಿ.ಆರ್.ನಾಗರಾಜ್ : ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ, ಅಕ್ಷರ ಪ್ರಕಾಶನ, ಹೆಗ್ಗೋಡು, 2006, ಪುಟ 103
6. ಕೆ.ಬಿ.ಸಿದ್ದಯ್ಯ : ಗಲ್ಲೆಬಾನಿ, ಮುನ್ನುಡಿ, ನಮ್ಮ ಪ್ರಕಾಶನ, ತಿಪಟೂರು, 2009
7. ಡಿ.ಆರ್.ನಾಗರಾಜ್ : ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ, ಅಕ್ಷರ ಪ್ರಕಾಶನ, ಹೆಗ್ಗೋಡು, 2006, ಪುಟ 154
8. ಅದೇ, ಪುಟ 142
9. ಅದೇ, ಪುಟ 143

ಅಧ್ಯಾಯ – 5 ಸಮಾರೋಪ

ಆಧುನಿಕ ಕನ್ನಡ ಕಾವ್ಯ ವಿಸ್ತಾರವಾದ ವ್ಯಾಪ್ತಿಯನ್ನು ಹೊಂದಿರುವುದಾಗಿದೆ. ನವೋದಯ ಸಾಹಿತ್ಯ ಘಟ್ಟದಿಂದ ಇಂದಿನವರೆಗೂ ಕನ್ನಡ ಕಾವ್ಯ ಸಮೃದ್ಧವಾಗಿ ಬೆಳದಿದೆ. ಅದು ತನ್ನ ನಿರಂತರತೆಯನ್ನು ಹೊಂದುತ್ತಲೇ ಇದೆ. ಆಧುನಿಕ ಕನ್ನಡ ಕಾವ್ಯದ ಬಗೆಗೆ ಈಗಾಗಲೇ ಹಲವಾರು ಸಂಶೋಧಕರು ತಮ್ಮ ಸಂಶೋಧನೆಯನ್ನು ನಡೆಸಿದ್ದಾರೆ, ಈಗಲೂ ನಡೆಸುತ್ತಿದ್ದಾರೆ. ಎಂ.ಗೋಪಾಲಕೃಷ್ಣ ಅಡಿಗ, ಎಚ್.ಎಸ್.ಶಿವಪ್ರಕಾಶ್, ಕೆ.ಬಿ.ಸಿದ್ದಯ್ಯನವರ ಪ್ರಾತಿನಿಧಿಕ ಕಾವ್ಯಗಳಲ್ಲಿ ಅಲ್ಲಮನ ಅನುಸಂಧಾನವನ್ನು ಗುರುತಿಸಲು ಈ ಪ್ರಬಂಧಕ್ಕೆ ಸಾಧ್ಯವಾಗಿದೆ. ಈ ಮೂರೂ ಕವಿಗಳಲ್ಲದೆ ಕನ್ನಡದ ಇನ್ನೂ ಹಲವಾರು ಆಧುನಿಕ ಕನ್ನಡ ಕವಿಗಳ ಕಾವ್ಯಗಳಲ್ಲಿ ನಡೆದಿರಬಹುದಾದ ಅಲ್ಲಮನ ಅನುಸಂಧಾನವನ್ನೂ ಪ್ರಬಂಧದ ವ್ಯಾಪ್ತಿಯಲ್ಲಿ ಸೂಕ್ಷ್ಮವಾಗಿ ವಿವರಿಸಲಾಗಿದೆ. ಪ್ರಬಂದದ ವ್ಯಾಪ್ತಿ ಸೀಮಿತವಾದ ಕಾರಣ ಕನ್ನಡದ ಬಹುಮುಖ್ಯ ಆಧುನಿಕ ಕವಿಗಳನ್ನು ಹಾಗು ಸಮಕಾಲೀನ ಸಂದರ್ಭದಲ್ಲಿ ಕ್ರಿಯಾಶೀಲರಾಗಿರುವ ಯುವ ಕವಿಗಳನ್ನು ಪ್ರಬಂಧದ ವಿಷಯಕ್ಕೆ ತೆಗೆದುಕೊಳ್ಳಲಾಗಿಲ್ಲ. ಇದು ಪ್ರಬಂಧದ ಸೀಮಿತ ವ್ಯಾಪ್ತಿಗೊಳಪಟ್ಟ ಮಿತಿಯಾಗಿದೆ. ಆದರೆ ಪ್ರಬಂಧದ ವ್ಯಾಪ್ತಿಯು ಹಿರಿದಾದರೂ ಕೂಡ ಪ್ರಬಂಧದ ವಿಷಯಕ್ಕೆ ಆರಿಸಲ್ಪಟ್ಟ ಮೂರೂ ಕವಿಗಳ ಕಾವ್ಯಗಳಲ್ಲಿ ನಡೆದಿರುವ ಅಲ್ಲಮನ ಅನುಸಂಧಾನವನ್ನು ಪ್ರಾಮಾಣಿಕವಾಗಿ ನಿರೂಪಿಸಲು ಪ್ರಯತ್ನಿಸಿದ್ದೇನೆ.

ಅಲ್ಲಮಪ್ರಭು ಹನ್ನೆರಡನೆಯ ಶತಮಾನದ ಬಹುದೊಡ್ಡ ತತ್ವ ಮೀಮಾಂಸಕ, ದಾರ್ಶನಿಕ ಚಿಂತಕನಾಗಿದ್ದಾನೆ. ಕನ್ನಡ ಸಾಹಿತ್ಯ ಅಲ್ಲಮಪ್ರಭುವಿನ ಆಶಯ, ತತ್ವಗಳನ್ನು ತನ್ನಲ್ಲಿ ಜೀರ್ಣಿಸಿಕೊಂಡು ಬೆಳದಿದೆ ಹಾಗು ಇನ್ನೂ ಬೆಳಯುತ್ತಿದೆ. ಬಸವಣ್ಣ ಮತ್ತು ಅವನ ವಚನಗಳಿಗೆ ಸಿಕ್ಕ ಜನಪ್ರಿಯತೆ ಅಲ್ಲಮಪ್ರಭು ಮತ್ತು ಅವನ ವಚನಗಳಿಗೆ ದೊರೆಯದೇ ಹೋಗಿದೆ ಎಂದು ಅನಿಸುತ್ತಿದೆ. ಅದಕ್ಕೆ ಅವರವರ ಜಾತಿಯ ಹಿನ್ನೆಲೆಯು ಕಾರಣವಾಗಿ ರಾಜಕೀಯ ಹಿತಾಸಕ್ತಿಗಳು ಕಾರಣವಾಗಿರಬಹುದು ಅಥವಾ ಭಾಷೆಯ ಬಳಕೆಯಲ್ಲಿ ಇವರಿಬ್ಬರಲ್ಲಿರುವ ವ್ಯತ್ಯಾಸಗಳು ಕಾರಣವಾಗಿರಬಹುದು. ಅಲ್ಲಮಪ್ರಭುವಿನ ವಚನಗಳು ಇಂದು ಹೆಚ್ಚು ಪ್ರಸ್ತುತವಾಗಿವೆ. ಅವನ ನೇರ ನುಡಿ, ನಿಷ್ಠುರವಾಗಿ ಖಂಡಿಸುವ ಗುಣ, ಎಲ್ಲವನ್ನೂ ವಿಮರ್ಶಾತ್ಮಕವಾಗಿ ನೋಡುವ ಅವನ ನೋಟಕ್ರಮ ಇವುಗಳು ಆದರ್ಶ ಸಮಾಜವೊಂದರ ಕಟ್ಟುವಿಕೆಗೆ ಹೆಚ್ಚು ಪ್ರಯೋಜನಾತ್ಮಕವಾಗುತ್ತದೆ. ಅಲ್ಲಮನ ವಚನಗಳ ತತ್ವ, ಆಶಯಗಳು ಈ ಸಾಮಾಜಿಕ ವ್ಯವಸ್ಥೆಯಲ್ಲಿ ಬಂಡಾಯದ ಕಹಳೆಯೊಂದನ್ನು ಮೊಳಗಿಸುತ್ತವೆ. ಅಲ್ಲಮನ ವಚನಗಳನ್ನು ಅಭ್ಯಸಿಸಿದವರಿಗೆ ಈ ಶೋಷಣೆಯ,

ಅಸಮಾನತೆಯ ಸಮಾಜದಲ್ಲಿ ಅಲ್ಲಮಪ್ರಭು ಒಬ್ಬ ನಿರಂತರ ಬಂಡಾಯಗಾರನಾಗಿ ಕಾಣಿಸುತ್ತಾನೆ. ತಪ್ಪೆಸಗಿದವರನ್ನು ನೇರವಾಗಿ ಖಂಡಿಸುವ ಮನೋಗುಣ ಅಲ್ಲಮನದು. ಹೀಗಾಗಿ ಅಲ್ಲಮ ಶೋಷಣೆಗೆ ಒಳಗಾದವರಲ್ಲಿ, ಅಸಮಾನತೆಯ ಅನುಭವಗಳನ್ನು ಅನುಭವಿಸಿದವರಲ್ಲಿ ಜೀವಂತ ಶಕ್ತಿಯ ಸೆಲೆಯಾಗಿದ್ದಾನೆ. ಅಂತಹವರಿಗೆ ತಮ್ಮನ್ನು ದೈತ್ಯ ಪ್ರತಿಭೆಯಿಂದ ಆತ್ಮ ಸ್ಥೈರ್ಯದ ಪಾಠಗಳನ್ನು ಕಲಿಸುತ್ತಿದ್ದಾನೆ.

ಪ್ರಸ್ತುತ ನನ್ನ ಈ ಅಧ್ಯಯನದಿಂದ ಆಧುನಿಕ ಕನ್ನಡ ಕಾವ್ಯಗಳು ಅಲ್ಲಮನನ್ನು ಅನುಸಂಧಾನಿಸಿಕೊಂಡಿರುವ ಬಗೆಗಳನ್ನು ತಿಳಿಯಬಹುದಾಗಿದೆ. ಆಧುನಿಕ ಕನ್ನಡ ಸಾಹಿತ್ಯದ ಬಹುತೇಕ ಎಲ್ಲಾ ಕವಿಗಳ ಕಾವ್ಯಗಳಲ್ಲಿ ಅಲ್ಲಮ ಪ್ರಜ್ಞಾಪೂರ್ವಕವಾಗಿಯೂ, ಅಪ್ರಜ್ಞಾಪೂರ್ವಕವಾಗಿಯೂ ಬೆರತುಹೋಗಿದ್ದಾನೆ. ಪ್ರಬಂಧದ ವ್ಯಾಪ್ತಿಗೆ ಒಳಪಟ್ಟಂತೆ ಇಲ್ಲಿ ಕೆಲವು ಕವಿಗಳ ಕೆಲವು ಕವಿತೆಗಳನ್ನು ಮಾತ್ರ ವಿಷಯದ ಆಧಾರದಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ. ಆದರೆ ನನಗೆ ಅಲ್ಲಮನ ಕುತೂಹಲವೇ ಆಧುನಿಕ ಕನ್ನಡದ ಇನ್ನೂ ಬಹುತೇಕ ಕವಿಗಳ ಕವಿತೆಗಳನ್ನು ಈ ಹಿನ್ನೆಲೆಯಲ್ಲಿ ಅಭ್ಯಸಿಸುವಂತೆ ಮಾಡಿದೆ. ಈ ಅಧ್ಯಯನದಿಂದ ಅಲ್ಲಮ ಮತ್ತು ಅವನ ತತ್ವಗಳೊಂದಿಗೆ ಅನುಸಂಧಾನಿಸಿರದ ಆಧುನಿಕ ಕನ್ನಡದ ಕವಿಗಳೇ ಇಲ್ಲ ಎಂದರೂ ಅದು ಅತಿಶಯೋಕ್ತಿಯಾಗಲಾರದು ಎಂಬ ಸತ್ಯವನ್ನು ಮನಗಂಡಿದ್ದೇನೆ. ಅಲ್ಲಮನ ಭಾಷೆಯ ಬಳಕೆ ಹೆಚ್ಚು ಪರಿಣಾಮಕಾರಿಯಾದುದು. ಅದು ತನ್ನ ರೂಪಕ ಪ್ರಜ್ಞೆಗಳಿಂದ ಹೆಚ್ಚು ಸಂಕೀರ್ಣ ಮತ್ತು ವ್ಯಾಪಕ ಅರ್ಥವುಳ್ಳದ್ದೂ ಆಗಿದೆ. ಆದ್ದರಿಂದಲೇ ಅಲ್ಲಮನನ್ನು ಒಂದೇ ಅರ್ಥದಲ್ಲಿ ಹಿಡಿದಿಡಲು ಸಾಧ್ಯವಾಗುವುದಿಲ್ಲ. ಇಲ್ಲಿಯವರೆಗೆ ಅಲ್ಲಮನ ಬಗ್ಗೆ ನಡೆದ ಸಂಶೋಧನೆಗಳು ನನಗೆ ತಿಳಿದ ಮಟ್ಟಿಗೆ ತೀರಾ ವಿರಳವಾದುದ್ದಾಗಿದೆ. ಅದರಲ್ಲೂ ಎಂ.ಫಿಲ್ ಪದವಿಗೆ ನಡೆದ ಸಂಶೋಧನೆ ಬೆರಳೆಣಿಕೆಯಷ್ಟು ಮಾತ್ರ. ಈ ನನ್ನ ಅಧ್ಯಯನದಿಂದ ಆಧುನಿಕ ಕನ್ನಡದ ಕವಿಗಳು ತಮ್ಮ ಕಾವ್ಯಗಳಲ್ಲಿ ಅನುಸಂಧಾನಿಸಿರುವ ವಿವಿಧ ನೆಲೆಗಳನ್ನು ತಿಳಿಸಲು ಪ್ರಯತ್ನಿಸಿದ್ದೇನೆ. ನನ್ನ ಅಧ್ಯಯನದಲ್ಲಿ ಮೊದಲು ಕವಿಗಳ ಕಾವ್ಯಗಳಲ್ಲಿರುವ ಅಲ್ಲಮನ ಅನುಸಂಧಾನವನ್ನು ತಿಳಿಸುವುದೇ ಮುಖ್ಯವಾಗಿದೆ. ಆದರೂ ನನ್ನ ಪ್ರಬಂಧದ ವ್ಯಾಪ್ತಿಗೆ ತಕ್ಕಂತೆ ವಿಶ್ಲೇಷಣಾತ್ಮಕವಾಗಿ ನೋಡಲು ಪ್ರಯತ್ನಿಸಿದ್ದೇನೆ. ಇಲ್ಲಿ ಹೆಚ್ಚು ವಿಮರ್ಶಾತ್ಮಕ, ವಿಶ್ಲೇಷಣಾತ್ಮಕ ದೃಷ್ಟಿಕೋನದಿಂದ ನೋಡಲು ಪ್ರಬಂಧದ ಸೀಮಿತ ವ್ಯಾಪ್ತಿಯಲ್ಲಿ ಸಾಧ್ಯವಾಗದಿರುವುದು ಒಂದು ಮಿತಿಯಾಗಿ ಕಾಣಿಸಬಹುದಾಗಿದೆ. ಆದರೆ ವಿಶ್ಲೇಷಣಾ, ವಿಮರ್ಶಾತ್ಮಕ ಮಾನದಂಡವನ್ನು ನನ್ನ ಮುಂದಿನ ಸಂಶೋಧನೆಯಲ್ಲಿ ಮುಂದುವರೆಸುವ ಉದ್ದೇಶವಿದೆ.

ಈ ನನ್ನ ಅಧ್ಯಯನ ಆಧುನಿಕ ಕನ್ನಡ ಸಾಹಿತ್ಯದ ಕೆಲವು ಕವಿಗಳ ಕಾವ್ಯಗಳಿಗಷ್ಟೇ ಸೀಮಿತವಾಗಿದೆ. ನಾನು ಅಧ್ಯಯನ ನಡೆಸುತ್ತಾ ಹೋದಂತೆ ಆಧುನಿಕ ಕನ್ನಡ ಸಾಹಿತ್ಯದ ಕಾದಂಬರಿ, ನಾಟಕ ಮುಂತಾದ ಪ್ರಕಾರಗಳಲ್ಲೂ ಅಲ್ಲಮ ಅನುಸಂಧಾನವನ್ನು ತಿಳಿಯುವ ಮನಸ್ಸಾಗಿದೆ. ಆ ನಿಟ್ಟಿನಲ್ಲಿ ನಾನು ಈ ಸಂಶೋಧನೆಯನ್ನು ಮುಂದುವರೆಸುತ್ತಿದ್ದೇನೆ. ಇಂದಿನ ಯುವ ಮನಸ್ಸುಗಳು ಇನ್ನೂ ಹೆಚ್ಚು ಹೆಚ್ಚು ಅಲ್ಲಮನನ್ನು ಅಭ್ಯಸಿಸುವಂತಾಗಬೇಕು. ಅಲ್ಲಮನ ಭಾಷೆ, ತತ್ವ, ಮೀಮಾಂಸೆ, ವೈಜ್ಞಾನಿಕ ದೃಷ್ಟಿಕೋನ, ಸಾಮಾಜಿಕ ಸಂಬಂಧಗಳು ಮುಂತಾದವುಗಳ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆಯಬೇಕಿವೆ.

ಗ್ರಂಥಋಣ

ಪ್ರಕಟಿತ ಕೃತಿಗಳು

1. ಅರವಿಂದ ಮಾಲಗತ್ತಿ : (ಸಂ) ದಲಿತಮಾರ್ಗ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2002

2. ಕಾಪಸೆ.ಜಿ.ಎಸ್ : 'ಮಧುರಚೆನ್ನ', ಜೀವನ ಹಾಗು ಕೃತಿಗಳ ಸಮೀಕ್ಷೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1976

3. ಕುವೆಂಪು : ಸಮಗ್ರ ಕಾವ್ಯ ಸಂಪುಟ ೧, ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000

4. ಗೋಪಾಲಕೃಷ್ಣ ಅಡಿಗ.ಎಂ: ಸಮಗ್ರ ಕಾವ್ಯ, ಸ್ವಪ್ನ ಬುಕ್ ಹೌಸ್, ಬೆಂಗಳೂರು, 2006

5. ಚನ್ನವೀರ ಕಣವಿ : ಕಣವಿ ಸಮಗ್ರಕಾವ್ಯ, ಸಂವಹನ, ಮೈಸೂರು, 2003

6. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1996

7. ಜೋಶಿ. ಶಂ.ಬಾ : ಶಂಬಾ ಸಮಗ್ರ ಸಂಪುಟ ೩, ಕನ್ನಡ ಪುಸ್ತಕ ಪ್ರಾದಿಕಾರ, ಬೆಂಗಳೂರು, ೧೯೯೯

8. ತಿಪ್ಪೇರುದ್ರಸ್ವಾಮಿ.ಎಚ್ : ವಚನಗಳಲ್ಲಿ ವೀರಶೈವಧರ್ಮ, ಡಿ.ವಿ.ಕೆ.ಮೂರ್ತಿ, ಮೈಸೂರು, 1969

9. ನಾಗರಾಜ್.ಡಿ.ಆರ್ : ಅಲ್ಲಮಪ್ರಭು ಮತ್ತು ಶೈವಪ್ರತಿಭೆ, ಅಕ್ಷರ ಪ್ರಕಾಶನ, ಹೆಗ್ಗೋಡು, 2006

10. ಬಸವರಾಜ್.ಎಲ್ : (ಸಂ) ಅಲ್ಲಮನ ವಚನ ಚಂದ್ರಿಕೆ, ಲೋಹಿಯಾ ಪ್ರಕಾಶನ, ಬಳ್ಳಾರಿ, 2001

11. ಬಸವರಾಜ್.ಎಲ್ : (ಸಂ) ಅಲ್ಲಮನ ವಚನಗಳು, ಗೀತಾಬುಕ್ ಹೌಸ್, ಬೆಂಗಳೂರು, 1969

12. ಬಸವರಾಜ ಕಲ್ಗುಡಿ : ಅನುಭಾವ : ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 1988

13. ರಾಜಾರಾಮ ಹೆಗಡೆ : ಲೌಕಿಕ- ಅಲೌಕಿಕ, ಆನಂದ ಕಂದ ಗ್ರಂಥಮಾಲೆ, 2001

14. ವಾಮನಬೇಂದ್ರೆ : (ಸಂ) ಅಂಬಿಕಾತನಯ ದತ್ತರ ಸಮಗ್ರ ಕಾವ್ಯ ಸಂಪುಟಗಳು, ದ.ರಾ.ಬೇಂದ್ರೆ ಸಂಶೋಧನಾ ಸಂಸ್ಥೆ, ಧಾರವಾಡ, 2003

15. ವೃಷಭೇಂದ್ರಸ್ವಾಮಿ.ಎಂ.ಎಸ್: ಕನ್ನಡ ಸಾಹಿತ್ಯದಲ್ಲಿ ಅಲ್ಲಮ ಪ್ರಭುದೇವ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1978

16. ಶಿವಾನಂದ ಗುಬ್ಬಣ್ಣವರ : (ಸಂ) ಶಿಶುನಾಳ ಷರೀಫರ ಗೀತೆಗಳು, ಅಕ್ಷಯ ಪ್ರಕಾಶನ, ಧಾರವಾಡ, 2002

17. ಶಿವಪ್ರಕಾಶ್.ಎಚ್.ಎಸ್ : ಶಿವಪ್ರಕಾಶರ ಕವಿತೆಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2000

18. ಶಿವರುದ್ರಪ್ಪ.ಜಿ.ಎಸ್ : ಸಮಗ್ರಕಾವ್ಯ, ಕಾಮಧೇನು ಪ್ರಕಾಶನ, ಬೆಂಗಳೂರು, 1997

19. ಸಿದ್ದಯ್ಯ.ಕೆ.ಬಿ : ಬಕಾಲ, ಚಲನ ಪ್ರಕಾಶನ ಸಹಕಾರಿ, ತುಮಕೂರು, 1988

20. ಸಿದ್ದಯ್ಯ .ಕೆ.ಬಿ : ದಕ್ಲಕಥಾದೇವಿ ಕಾವ್ಯ, ಚಲನಪ್ರಕಾಶನ ಸಹಕಾರಿ, ತುಮಕೂರು, 1999

21. ಸಿದ್ದಯ್ಯ.ಕೆ.ಬಿ : ಅನಾತ್ಮ, ಸಿದ್ದಾರ್ಥಪ್ರಕಾಶನ, ತುಮಕೂರು

22. ಸಿದ್ದಯ್ಯ.ಕೆ.ಬಿ : ಗಲ್ಲೆಬಾನಿ, ನಮ್ಮ ಪ್ರಕಾಶನ, ತಿಪಟೂರು, 2009

ಅಪ್ರಕಟಿತ ಕೃತಿಗಳು

1. ವಾಸುದೇವಮೂರ್ತಿ.ಟಿ.ಎನ್ : ಅಲ್ಲಮಪ್ರಭುವಿನ ವಚನಗಳ ದಾರ್ಶನಿಕ ಮರು ಚಿಂತನೆಯ ಸ್ವರೂಪಗಳು, ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳ್ಳಿ, ಹಂಪಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್‌ಡಿ. ಮಹಾಪ್ರಬಂಧ, 2008

ಪರಾಮರ್ಶನ ಕೃತಿಗಳು

1. ಕೀರ್ತಿನಾಥ ಕುರ್ತಕೋಟಿ : ನವ್ಯಕಾವ್ಯ ಪ್ರಯೋಗ, ಮನೋಹರ ಗ್ರಂಥಮಾಲೆ, ಧಾರವಾಡ, 1975
2. ಕೊಪ್ಪ.ಎಸ್.ಕೆ : (ಸಂ) ಅಲ್ಲಮಪ್ರಭು-ಚಿಂತನ, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು, 2004
3. ಗೋವಿಂದರಾಜ ಗಿರಡ್ಡಿ : ವಚನ ವಿನ್ಯಾಸ, ಅಕ್ಷರ ಪ್ರಕಾಶನ, ಹೆಗ್ಗೋಡು, 1997
4. ಚಿದಾನಂದಮೂರ್ತಿ.ಎಂ : ಸ್ಥಾವರ-ಜಂಗಮ, ಸಮಗ್ರ ಸಂಪುಟ 4, ಸ್ವಪ್ನ ಬುಕ್ ಹೌಸ್, ಬೆಂಗಳೂರು, 2004
5. ನಟರಾಜ್ ಬೂದಾಳ.ಎಸ್ : ನಾಗಾರ್ಜುನನ ಮೂಲ ಮಾಧ್ಯಮಕಕಾರಿಕ, ಅಭಿನವ, ಬೆಂಗಳೂರು, 2006
6. ನಾಗಭೂಷಣಸ್ವಾಮಿ.ಓ.ಎಲ್ : (ಸಂ) ವಚನ ಸಾವಿರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004
7. ನಾಗರಾಜ್.ಡಿ.ಆರ್ : ಶಕ್ತಿ ಶಾರದೆಯ ಮೇಳ, ಅಕ್ಷರ ಪ್ರಕಾಶನ, ಹೆಗ್ಗೋಡು, 1987
8. ನಾರಾಯಣ.ಪಿ.ವಿ : ವಚನ ವ್ಯಾಸಂಗ, ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು, 1982
9. ಬಸವರಾಜು.ಎಲ್ : ಅಲ್ಲಮನ ವಚನಚಂದ್ರಿಕೆ, ನಳಿನೀಶಂಕರ ಪ್ರಕಾಶನ, ಮೈಸೂರು, 1960
10. ಮಲ್ಲಾಪುರ.ಬಿ.ವ್ಹಿ : (ಸಂ) ಅಲ್ಲಮ ಪ್ರಭುದೇವರ ವಚನ ಸಂಪುಟ, ಸಮಗ್ರ ವಚನ ಸಂಪುಟ-2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 1993
11. ಮಿತ್ರ.ಅ.ರಾ : ವಚನಕಾರರು ಮತ್ತು ಶಬ್ದಕಲ್ಪ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, 1984
12. ವಾಮನ ಬೇಂದ್ರೆ : (ಸಂ) ಅಂಬಿಕಾತನಯ ದತ್ತರ ಸಮಗ್ರ ಕಾವ್ಯ ಸಂಪುಟಗಳು, ದ.ರಾ.ಬೇಂದ್ರೆ ಸಂಶೋಧನಾ ಸಂಸ್ಥೆ, ಧಾರವಾಡ, 2003

13. ವಾಮನ ಬೇಂದ್ರೆ : (ಸಂ) ಅಂಬಿಕಾತನಯರ ನಾಕುತಂತಿ, ಶ್ರೀಮಾತಾ ಪ್ರಕಾಶನ, ಧಾರವಾಡ, 2004

14. ವಿದ್ಯಾಶಂಕರ್.ಎಸ್ : (ಸಂ) ವೀರಶೈವ ಪಾರಿಭಾಷಿಕ ಪದಕೋಶ, ಬಸವ ಸಮಿತಿ, ಬೆಂಗಳೂರು, 2002

15. ಶಿವಪ್ರಕಾಶ್.ಎಚ್.ಎಸ್ : ಮೊದಲ ಕಟ್ಟಿನ ಗದ್ಯ, ಅಭಿನವ, ಬೆಂಗಳೂರು, 1995

16. ಶಿವಪ್ರಕಾಶ್.ಎಚ್.ಎಸ್ : ನವಿಲುನಾಗರ, ಸಾಹಿತ್ಯ ಭಂಡಾರ, ಬೆಂಗಳೂರು, 1996

17. ಶಿವಪ್ರಕಾಶ್.ಎಚ್.ಎಸ್ : ಮಳೆಯೇ ಮಂಟಪ, ಲೋಹಿಯಾ ಪ್ರಕಾಶನ, ಬಳ್ಳಾರಿ, 2002

18. ಶ್ರೀನಿವಾಸಮೂರ್ತಿ.ಎಂ.ಆರ್ : ವಚನ ಧರ್ಮಸಾರ, ಮೈಸೂರು ವಿಶ್ವವಿದ್ಯಾಲಯ, 1942

19. ಸಿದ್ದವೀರಣ್ಣೊಡೆಯ ಗೂಳೂರು : (ಸಂ) ಪ್ರಭುದೇವರ ಶೂನ್ಯ ಸಂಪಾದನೆ, ರಾವೂರ ಶ್ರೀ ಸಿದ್ದಲಿಂಗೇಶ್ವರ ಮಠ ಮತ್ತು ಆದವಾನಿಯ ಕಲ್ಲುಮಠದ ಅಧಿಪತಿಗಳು, 1958

20. ಹಳಕಟ್ಟಿ, ಫ.ಗು : (ಸಂ) ಹರಿಹರನ ರಗಳೆಗಳು, ಸಮಾಜಪುಸ್ತಕಾಲಯ

21. ಹಿರೇಮಠ.ಆರ್.ಸಿ : ಮಹಾಯಾತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997

22. ಹಿರೇಮಠ.ಆರ್.ಸಿ, ಸುಂಕಾಪುರ.ಎಂ.ಎಸ್ : (ಸಂ) ವ್ಯೋಮಮೂರುತಿ ಅಲ್ಲಮಪ್ರಭುದೇವರ ವಚನಗಳು, ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1976

ಪತ್ರಿಕೆಗಳು

1. ಸಂಚಯ ದ್ವೈಮಾಸಿಕ, ಸಂಚಿಕೆ – 86